ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೪ನೇ ಮಾರ್ಚ್ ೧೯೮೦, ಫಾಲ್ಗುಣ ೧೩, ೧೯೦೧ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯-೩೦ಕ್ಕೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು) ಪೀಠವನ್ನು ಅಲಂಕರಿಸಿದರು]

ವಿತ್ತೀಯ ಕಾರ್ಯಕಲಾಪಗಳು

೧೯೮೦-೮೧ನೇ ಸಾಲಿನ ಬೇಡಿಕೆಗಳ ಮೇಲಿನ ಸಾಮಾನ್ಯ ಚರ್ಚೆ.

ವಿದ್ಯಾ ಇಲಾಖೆಯ ಬೇಡಿಕೆಗಳ ಕ್ರಮ ಸಂ. ೯, ೧೦, ೧೩ ಮತ್ತು ೧೪ರ ಮೇಲಿನ ಚರ್ಚೆಗೆ ಮಂತ್ರಿಯವರಿಂದ ಉತ್ತರ.

ಶ್ರೀ ಎಂ ರಘುಪತಿ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ವಿದ್ಯಾ ಇಲಾಖೆಯ ಬೇಡಿಕೆಗಳ ಮೇಲೆ, ಎರಡೂ ಕಡೆಯ ಮಾನ್ಯ ಸದಸ್ಯರುಗಳೂ ಮಾತನಾಡಿ, ಉತ್ತಮ ಮಟ್ಟದ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿಯೂ ಶ್ರೀಮಾನ್ ಬಸವಲಿಂಗಪ್ಪನವರ ಭಾಷಣ ಅತ್ಯಂತ ಉತ್ತಮ ಮಟ್ಟದಲ್ಲಿತ್ತು. ಏಕೆಂದರೆ, ಅವರು ಸ್ವತಃ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಬೇಕೆಂಬ ಉತ್ಸುಕತೆಯಿಂದ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಇವತ್ತು ಕರ್ನಾಟಕ ರಾಜ್ಯದಲ್ಲಿ, ನೂತನವಾದ ಒಂದು ವೈಶಿಷ್ಟ್ಯಪೂರ್ಣ ವಿದ್ಯಾದಾನವನ್ನು ಈ ವರ್ಷದಿಂದ ಜಾರಿಗೆ ತರಬೇಕೆಂದು ಹೇಳಿ, ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಭಾರತ ದೇಶವೂ ಒಂದು ನೂತನವಾದ ವಿದ್ಯಾ ವಿಧಾನವನ್ನು ಜಾರಿಗೆ ತರಬೇಕೆಂದು ಹೇಳಿ, ಕೇಂದ್ರಮಟ್ಟದಲ್ಲಿ ಚಿಂತನೆ ನಡೆಯುತ್ತಾ ಇದೆ. ಆ ಚಿಂತನೆಗೆ ಪೂರಕವಾಗಿ, ವಿದ್ಯಾಮಂತ್ರಿಗಳ ಸಭೆಗಳನ್ನು ಎರಡು ಬಾರಿ ಮಾಡಿದರು. ಎರಡು ಬಾರಿ ಮಾಡಿದಾಗಲೂ, ವಿದ್ಯಾಸಚಿವರ ಸಭೆಗಳಲ್ಲಿ ನಮ್ಮ ರಾಜ್ಯದ ಪರವಾಗಿ, ಕರ್ನಾಟಕ ರಾಜ್ಯದ ಹಲವಾರು ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿ, ಸಮ್ಮೇಳನಗಳನ್ನೂ ಮತ್ತು ಚರ್ಚಾಕೂಟಗಳನ್ನು ಏರ್ಪಾಡು ಮಾಡಿ, ನಮ್ಮದೇ ಆದ ಒಂದು ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ನಾವು ಕಳುಹಿಸಿಕೊಟ್ಟಿದ್ದೇವೆ. ಕೇಂದ್ರ ಸರ್ಕಾರದವರು ಪ್ರಪ್ರಥಮವಾಗಿ ಈ ರೀತಿಯ ಚಿಂತನೆ ಮಾಡುತ್ತಿರುವುದಕ್ಕೆ ನಾನು ಭಾರತಸರ್ಕಾರವನ್ನು ಅಭಿನಂದಿಸುತ್ತೇನೆ. ಏಕೆಂದರೆ ಭಾರತ ದೇಶದಲ್ಲಿ, ಸ್ವಾತಂತ್ರ್ಯ ಬಂದು ೩೮ ವರ್ಷಗಳಿಂದ ಇವತ್ತಿನವರೆಗೂ, ಮೆಕಾಲೆ ಕಾಲದಲ್ಲಿ, ಇಂಗ್ಲೀಷರ ಆಡಳಿತ ಕಾಲದಲ್ಲಿ ಯಾವ ವಿದ್ಯಾವಿಧಾನವನ್ನು ಜಾರಿಗೆ ಕೊಟ್ಟರೋ ಆ ವಿದ್ಯಾವಿಧಾನವನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಅದರ ಫಲಿತಾಂಶ, ಭಾರತದೇಶದಲ್ಲಿ ನೂರಕ್ಕೆ ಕೇವಲ ೩೨ ಜನ ಮಾತ್ರ ವಿದ್ಯಾವಂತರಾಗಿದ್ದಾರೆ. ಅಂದರೆ ಅಕ್ಷರ ಜ್ಞಾನ ಪಡೆದಿದ್ದಾರೆ. ಸಂಪೂರ್ಣವಾಗಿ ಅವರು ಕಾಲೇಜಿಗೆ ಹೋಗಿ ಡಿಗ್ರಿಗಳನ್ನು ಪಡೆದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಅದೇ ನಮಗಿಂತ ಹಿಂದೆ ಇದ್ದ ಚೀನಾದೇಶ ಮತ್ತಿತರ ದೇಶಗಳನ್ನು ನೋಡಿದರೆ, ನಮಗಿಂತ ಜನಸಂಖ್ಯೆಯಲ್ಲಿ ಜಾಸ್ತಿ ಇದ್ದರೂ, ಚೀನಾದೇಶದಲ್ಲಿ ೧೦೦ಕ್ಕೆ ೯೦ರಷ್ಟು ವಿದ್ಯಾವಂತರಿದ್ದಾರೆ. ನಾನು ಭಾರತದೇಶದ ಪ್ರತಿನಿಧಿಯಾಗಿ ಯುನೆಸ್ಕೋ ಸಮ್ಮೇಳನಕ್ಕೆ ಹೋಗಿ

ದ್ದಾಗ, ಅಲ್ಲಿ ಬೇರೆ ಬೇರೆ ದೇಶಗಳ ವಿದ್ಯಾಮಂತ್ರಿಗಳು, ಆ ದೇಶದ ಪ್ರತಿನಿಧಿಗಳಾಗಿ ಬಂದಿದ್ದರು. ಎಲ್ಲಾ ದೇಶಗಳವರೂ, ತಮ್ಮ ವಿದ್ಯಾಕ್ಷೇತ್ರದ ಪ್ರಗತಿಯ ಸಾಧನೆಯನ್ನು ಹೇಳುತ್ತಿರುವಾಗ, ಭಾರತೀಯನಾಗಿ. ನನ್ನ ಮನಸ್ಸಿಗೆ ದುಃಖವಾಯಿತು. ಎರಡು ಸಾವಿರ ವರ್ಷಗಳನ್ನು ತಲುಪುತ್ತಿರುವಾಗ, ಇವತ್ತಿಗೂ ಪ್ರಪಂಚದಲ್ಲಿ ಅವಿದ್ಯಾವಂತರ ಸಂಖ್ಯೆ ಎಷ್ಟಿರುತ್ತದೋ ಅದರಲ್ಲಿ, ಭಾರತದೇಶದಲ್ಲಿ ನೂರಕ್ಕೆ ೫೦ರಷ್ಟು ಅವಿದ್ಯಾವಂತರು ಇದ್ದಾರೆ.

ಅಂದರೆ ಈವೊತ್ತಿಗೂ ಅಧ್ಯಕ್ಷರೇ, ಜ್ಞಾನವನ್ನು ಕೊಡುವುದಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮತ್ತೆ ಈವೊತ್ತು ವಿದ್ಯಾಕ್ಷೇತ್ರ ಭಾರತ ದೇಶದಲ್ಲಿ ಸರಿಯಾದ ದಾರಿಯಲ್ಲಿ ಹೋಗುತ್ತಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಈ ವಿದ್ಯಾಕ್ಷೇತ್ರವನ್ನು ಯಾವ ದಿಸೆಯಲ್ಲಿ ತೆಗೆದುಕೊಂಡು ಹೋಗಬೇಕು ಎಂದರೆ ಒಂದು ಕಡೆ ಗುಣಮಟ್ಟ ದಿನೇ ದಿನೇ ಕಡಿಮೆಯಾಗುತ್ತಿದೆ, ಮತ್ತೊಂದು ಕಡೆ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಇದೆ, ಇನ್ನೊಂದು ಕಡೆ ಅವಿದ್ಯಾವಂತರ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಮತ್ತೊಂದು ಕಡೆ ನೋಡಿದರೆ ಭಾರತ ದೇಶದಲ್ಲಿ ವಿದ್ಯಾವಂತರ ನಿರುದ್ಯೋಗಿಗಳ ಸಂಖ್ಯೆ ೩½ ಕೋಟಿಯಷ್ಟು ಇದೆ ಎಂದು ಅಂದಾಜು ಮಾಡಿದ್ದೇವೆ. ಹೀಗಿರುವಾಗ ನಾವು ಅವರನ್ನೆಲ್ಲಾ ೨೧ನೇ ಶತಮಾನಕ್ಕೆ ಕರೆದುಕೊಂಡು ಹೋಗುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಪಂಡಿತ ಜವಹರಲಾಲ್ ನೆಹರೂರವರು ಈ ವಿಷಯವಾಗಿ ಒಂದು ಮಾತನ್ನು ಹೇಳಿದರು ಏನೆಂದರೆ, The progrees of the nation can be seen in the class rooms ಎಂದು. ಅಂದರೆ ಈ ದೇಶದಲ್ಲಿ ಎಷ್ಟು ವಿದ್ಯಾವಂತರು ಇದ್ದಾರೆ ಅವರಿಂದ ನಾವು ಎಷ್ಟು ಪ್ರಗತಿಯನ್ನು ನೋಡುವುದಕ್ಕೆ ಸಾಧ್ಯ ಎಂದು ಪಂಡಿತ ಜವಹರಲಾಲ್ ನೆಹರೂರವರೇ ಹೇಳಿದರು. ಈವೊತ್ತು ನಮ್ಮ ಬಡ್ಜೆಟ್ಟಿನಲ್ಲಿ ನಾವು ಶೇಕಡಾ ೨೦ರಷ್ಟು ಹಣವನ್ನು ಮಾತ್ರ ಖರ್ಚು ಮಾಡುತ್ತೇವೆ. ಆದರೆ ಇದರಲ್ಲಿ ಕೇಂದ್ರ ಸರ್ಕಾರದ್ದು ಕೇವಲ ೨ ಪರ್ಸೆಂಟ್ ಮಾತ್ರ ಇದೆ. ಅಂದರೆ ಕೇಂದ್ರ ಸರ್ಕಾರ ಇದಕ್ಕೆ ಕೇವಲ ಎರಡು ಪರ್ಸೆಂಟ್ ಮಾತ್ರ ಇದಕ್ಕೆ ಖರ್ಚು ಮಾಡುತ್ತಾ ಇದ್ದಾರೆ. ಇಷ್ಟು ಅಲ್ಪ ಹಣವನ್ನು ಅವರು ಖರ್ಚು ಮಾಡಿದರೆ ಭಾರತ ದೇಶದಲ್ಲಿ ಈವೊತ್ತು ವಿದ್ಯಾ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧನೆ ಮಾಡುತ್ತೇವೆಂದರೆ ಈ ಅಲ್ಪಮಟ್ಟದ ಹಣದಲ್ಲಿ ಪ್ರಗತಿಗಳನ್ನು ಸಾಧಿಸುವುದಕ್ಕೆ ಸಾಧ್ಯವೇ ? ಈ ವಿಷಯವನ್ನು ನಮ್ಮಲ್ಲಿ ನಾವೇ ಪ್ರಶ್ನೆ ಮಾಡಬೇಕಾಗಿದೆ. ನಾನು ಇದನ್ನು ಹೇಳಿದ ಮಾತ್ರಕ್ಕೆ ಆ ಸರ್ಕಾರ, ಈ ಸರ್ಕಾರ ಎಂದು ನಾನು ದೂಷಣೆ ಮಾಡುವುದಕ್ಕೆ ಹೋಗುತ್ತಾ ಇಲ್ಲ. ಈ ಬಗ್ಗೆ ಇರತಕ್ಕಂಥ ವಸ್ತುವಾಂಶವನ್ನು ಮಾತ್ರ ಈ ಸಭೆಯ ಮುಂದೆ ಇಡುತ್ತಿದ್ದೇನೆ. ಈ ವಿಷಯವನ್ನು ನಾನು ವಿದ್ಯಾ ಮಂತ್ರಿಗಳ ಸಭೆಯಲ್ಲೂ ಪ್ರಸ್ತಾಪ ಮಾಡಿದ್ದೇನೆ. ಭಾರತ ದೇಶದಲ್ಲಿ ವಿದ್ಯಾ ಪ್ರಗತಿಯನ್ನು ಸಾಧನೆ ಮಾಡಬೇಕಾಗಿದ್ದರೆ ಮೂಲತಃ ಹಣದ ಕೊರತೆಯನ್ನು ನಿಭಾಯಿಸಬೇಕು. ಈ ಹಣದ ಕೊರತೆಯನ್ನು ನಾವು ಎಲ್ಲಿಯವರೆಗೆ ನಿಭಾಯಿಸುವುದಿಲ್ಲವೋ ಅಲ್ಲಿಯವರೆಗೂ ಈ ವಿದ್ಯಾಕ್ಷೇತ್ರದಲ್ಲಿ ವಿದ್ಯಾ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿಲ್ಲ. ಈಗ ಕೇವಲ ಶೇಕಡ ಎರಡರಷ್ಟು ಭಾಗದ ಹಣ ಮಾತ್ರ ಇದಕ್ಕೆ ಮೀಸಲಾಗಿಟ್ಟು ವಿದ್ಯಾ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧನೆ ಮಾಡಬೇಕು ಎಂದರೆ ಇದರಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವೇ, ಬಹಳ ಕಷ್ಟವಾಗುತ್ತದೆ. ಕೇಂದ್ರ ಸರ್ಕಾರ ಯಾವುದಕ್ಕೆ ಹಣವನ್ನು ಕೊಡುತ್ತಾರೆಂದರೆ ಕೇವಲ ವಿಶ್ವವಿದ್ಯಾನಿಲಯಗಳಿಗೆ ಮಾತ್ರ. ಇದಕ್ಕೆ ಕೊಡುವುದಕ್ಕೂ ಒಂದು ಅನುದಾನದ ಸಮಿತಿ ಇದೆ, ಆ ಅನುದಾನದ ಸಮಿತಿಯ ಮೂಲಕ ವಿಶ್ವವಿದ್ಯಾನಿಲಯಗಳಿಗೆ ಸ್ವಲ್ಪಮಟ್ಟಿಗೆ ಹಣ ಸಹಾಯವನ್ನು ಮಾಡುತ್ತಾರೆ. ಅದು ಬಿಟ್ಟರೆ ಬೇರೆ ಇನ್ನಾವ ಕಾರ್ಯಕ್ರಮಕ್ಕೂ ಕೂಡ ಕೇಂದ್ರ ಸರ್ಕಾರದ ನೆರವು ಇಲ್ಲ. ರಾಜ್ಯ ಸರ್ಕಾರಗಳೇ ಸಂಪೂರ್ಣವಾಗಿ ಇದರ ಹೊಣೆಗಾರಿಕೆಯನ್ನು ಹೊತ್ತುಕೊಂಡು ನಾವು ಈವೊತ್ತಿನ ದಿವಸ ಖರ್ಚು ಮಾಡಬೇಕಾಗಿದೆ. ಹೀಗೆ ನಾವು ಖರ್ಚು ಮಾಡುತ್ತಾ ಇರತಕ್ಕಂಥ ಹಣದಲ್ಲಿ ಈ ವಿದ್ಯಾ ಕ್ಷೇತ್ರದಲ್ಲಿ ಎಷ್ಟರ ಮಟ್ಟಿಗೆ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯ ಇದೆ ಅಷ್ಟರಮಟ್ಟಿಗೆ ಸಾಧಿಸಿದ್ದೇವೆ. ಈ ಬಗ್ಗೆ ನಮ್ಮ ಬೇಡಿಕೆಗಳು ಎಷ್ಟು ಇವೆ ಆ ಬೇಡಿಕೆಗಳನ್ನೆಲ್ಲಾ ಪೂರೈಸುವುದಕ್ಕೆ ನಮಗೆ ಎಷ್ಟು ಶಕ್ತಿ ಇದೆ ಎನ್ನುವುದನ್ನು ನೋಡಿದಾಗ ಅವುಗಳನ್ನು ಪೂರೈಸುವುದಕ್ಕೆ ಶಕ್ತಿ ನಮಗೆ ಬಹಳ ಕಡಿಮೆಯಾಗಿದೆ ಅಷ್ಟೆ. ಆ ಶಕ್ತಿಯನ್ನು ತುಂಬಬೇಕು ಎಂತಲೇ ನೂರಕ್ಕೆ ನೂರರಷ್ಟು ಸರ್ಕಾರ ಪ್ರಯತ್ನ ಮಾಡುತ್ತಾ ಇದೆ. ಜನತಾ ಸರ್ಕಾರ ಏನು ಈ ರಾಜ್ಯದಲ್ಲಿ ಈ ದಿಸೆಯಲ್ಲಿ ಇವರ ಪ್ರಗತಿ

ಯನ್ನು ಮಾಡಬೇಕೆಂದು ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡುತ್ತಾ ಇದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇವೆ.

ಇನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ಹಾಗೂ ವಯಸ್ಕರ ಶಿಕ್ಷಣದ ಬಗ್ಗೆ ಮಾನ್ಯ ಮಂತ್ರಿಗಳಾದ ಶ್ರೀ ಗೋವಿಂದೇಗೌಡರು ತಮಗೆ ಮನವರಿಕೆಯಾಗುವ ರೀತಿಯಲ್ಲಿ ಹೇಳುತ್ತಾರೆ. ನಾನು ಮಾತ್ರ ಈ ಪ್ರೌಢಶಾಲೆಗಳ ಬಗ್ಗೆ ಮತ್ತು ಉನ್ನತ ಶಿಕ್ಷಣದ ಬಗ್ಗೆ ಮಾತ್ರ ಸ್ವಲ್ಪ ವಿಷಯಗಳನ್ನು ಈ ಸದನದ ಮುಂದೆ ಇಟ್ಟರೆ ಸಹಾಯವಾಗುತ್ತದೆ ಎಂದು ಹೇಳುತ್ತೇನೆ. ಈ ವಿದ್ಯಾ ಕ್ಷೇತ್ರದ ಪ್ರಗತಿಯನ್ನು ಸಾಧಿಸುವುದಕ್ಕೆ ಇದರ ವಿಕಾಸವನ್ನು ನೋಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ ಎನ್ನುವುದಕ್ಕೆ ತಮ್ಮ ಎದುರುಗಡೆ ನಾನು ಹಲವಾರು ವಿಷಯಗಳನ್ನು ಈ ಸದನದ ಮುಂದೆ ಮಂಡನೆ ಮಾಡುತ್ತಿದ್ದೇನೆ. ಈಗ ಹಲವಾರು ಸದಸ್ಯರುಗಳು ಇದರ ಬಗ್ಗೆ ಮಾತನಾಡಿದಾಗ ಅದರಲ್ಲಿ ಬಹು ಪ್ರಮುಖವಾದ ವಿಷಯಗಳು ಏನೆಂದರೆ ಈ ಪ್ರಾಥಮಿಕ ಶಾಲೆಗಳಲ್ಲಿ ಕೊಠಡಿಗಳು ಇಲ್ಲ ಎನ್ನುವುದು. ಈ ಬಗ್ಗೆ ಹೇಳುವುದಾದರೆ ಕೆಲವು ಶಾಲೆಗಳಿಗೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟನ್ನೂ ಪೂರೈಸುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಹೇಳುತ್ತೇನೆ. ಇದು ಈವೊತ್ತು ಸೃಷ್ಟಿಯಾದಂಥ ವಿಷಯವಲ್ಲ. ಹಲವಾರು ವರ್ಷಗಳಿಂದಲೂ ಬಂದಿದೆ. ನಾವು ಬಂದ ಮೇಲೆ ಈ ಪರಿಸ್ಥಿತಿ ಉದ್ಭವವಾಗಿದೆಯೆಂದು ಹೇಳಿದರೆ ಅದು ನಿಜವಾದ ವಿಷಯವಲ್ಲ. ಹೀಗೆ ಹೇಳಿದ ಮಾತ್ರಕ್ಕೆ ಹಿಂದೆ ಮಾಡಿದ ತಪ್ಪುಗಳನ್ನೇ ಮುಂದುವರೆಸಿಕೊಂಡು ಹೋಗಬೇಕೇ ಎನ್ನುವ ಪ್ರಶ್ನೆಯನ್ನು ಹಾಕಿದರೆ ಅದಕ್ಕೆ ಉತ್ತರ ಹಾಗೆ ಮುಂದುವರೆಸಿಕೊಂಡು ಹೋಗಕೂಡದು ಎನ್ನುವುದೇ ನನ್ನ ಉತ್ತರ. ಅದಕ್ಕೋಸ್ಕರವಾಗಿ ಕರ್ನಾಟಕ ರಾಜ್ಯದಲ್ಲಿ ಒಟ್ಟು ೬೮೧ ಶಾಲೆಗಳಲ್ಲಿ, ೧[illegible]೦ ತಾಲ್ಲೂಕುಗಳಲ್ಲಿ ಈ ಶಾಲಾ ಕೊಠಡಿಗಳು ಇಲ್ಲ ಅಂದರೆ ಪ್ರೈಮರಿ ಸ್ಕೂಲುಗಳು ಷಿಫ್ಟ್ ಸಿಸ್ಟಂನಲ್ಲೋ ಅಥವಾ ಬಾಡಿಗೆ ಮನೆಗಳನ್ನು ತೆಗೆದುಕೊಂಡೋ ಹೇಗೋ ಅವರು ನಡೆಸಿಕೊಂಡು ಹೋಗುತ್ತಿದ್ದಾರೆ. ಅದಕ್ಕೋಸ್ಕರ ಎಷ್ಟು ಖರ್ಚಾಗುತ್ತಿದೆ ಎಂದರೆ ೬ ರಿಂದ ೭ ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತಿದೆ. ಈ ೧೧೦ ತಾಲ್ಲೂಕುಗಳಲ್ಲಿ ಆ ಶಾಲೆಗಳಿಗೆ ೧೧೦ ಕೊಠಡಿಗಳನ್ನು ಅತ್ಯವಶ್ಯವಾಗಿ ಕಟ್ಟಿಸಬೇಕಾದರೆ ನಾನು ಮೊದಲೇ ಹೇಳಿದ ಹಾಗೆ ೬ ರಿಂದ ೭ ಕೋಟಿ ರೂಪಾಯಿನವರೆಗೆ ಖರ್ಚಾಗುತ್ತದೆ. ಈ ಸಂದರ್ಭದಲ್ಲಿ ಈ ದಿವಸ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸಲೇಬೇಕು. ಏತಕ್ಕೆಂದರೆ ಅವರು ತಮ್ಮ ಮುಂಗಡ ಪತ್ರವನ್ನು ಮಂಡಿಸುವ ಸಮಯದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಏನೆಂದರೆ ಈ ಶಾಲೆಗಳಲ್ಲಿ ಕಟ್ಟಡದ ಕೊರತೆ ಏನು ಇದೆ ಆ ಕೊರತೆಯನ್ನು ಪೂರೈಸುವುದಕ್ಕೆ ಹಣವನ್ನು ಒದಗಿಸಿಕೊಡುತ್ತೇವೆಂದು ಹೇಳಿದ್ದಾರೆ. ಈವೊತ್ತಿನ ದಿವಸ ಪ್ರತಿಯೊಂದು ತಾಲ್ಲೂಕಿನಲ್ಲೂ ಶಾಲಾ ಕಟ್ಟಡವನ್ನು ಕಟ್ಟಿಸಿಕೊಡಬೇಕಾಗಿದೆ. ಇದರಲ್ಲಿ ಒಂದು ವಿಚಾರ ಏನೆಂದರೆ ಎಲ್ಲಿ ಪೂರ್ತಿಯಾಗಿ ಶಾಲಾ ಕಟ್ಟಡ ಇರುವುದಿಲ್ಲವೋ ಅದಕ್ಕೆ ಮೊದಲು ಆದ್ಯತೆ ಕೊಟ್ಟು ಅಲ್ಲಿ ಒಂದು ಶಾಲಾ ಕಟ್ಟಡವನ್ನು ಕಟ್ಟಿಸಿಕೊಟ್ಟರೆ ಸುಮಾರು ೧೬೦ ತಾಲ್ಲೂಕುಗಳಲ್ಲಿ ಈ ಒಂದು ಕೊರತೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತೆ ಎಲ್ಲಿ ಎರಡು ಕೊಠಡಿಗಳು ಅವಶ್ಯಕತೆ ಇರುತ್ತದೋ ಅಲ್ಲಿ ಜರೂರಾಗಿ ಶಾಲಾ ಕಟ್ಟಡಗಳ ಕೊರತೆ ಇದ್ದರೆ ಅಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಡುವುದಕ್ಕೆ ಎರಡನೇ ಆದ್ಯತೆ ಕೊಡುವ ಹಾಗೆ ಏರ್ಪಾಡು ಮಾಡುತ್ತೇವೆ. ಅದಕ್ಕೋಸ್ಕರವಾಗಿ ಈ ವರ್ಷದ ಬಡ್ಜೆಟ್ಟಿನಲ್ಲಿ ೪ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಮೊತ್ತದ ಹಣವನ್ನು ಭಾರತ ದೇಶದಲ್ಲಿರುವ ಯಾವ ರಾಜ್ಯ ಸರ್ಕಾರಗಳೂ ಕೂಡ ಈ ಶಾಲಾ ಕಟ್ಟಡಗಳಿಗೋಸ್ಕರ ಖರ್ಚು ಮಾಡುತ್ತಾ ಇಲ್ಲ ಎಂದು ಹೇಳುತ್ತೇನೆ. ವಿದ್ಯಾಮಂತ್ರಿಗಳ ಸಭೆಯಲ್ಲಿ, ಈ ಶಾಲಾ ಕಟ್ಟಡಗಳ ಬಗ್ಗೆ ಎಲ್ಲಾ ರಾಜ್ಯಗಳ ಮಾಹಿತಿಯನ್ನೂ ನಾನು ನೋಡಿದ್ದೇನೆ.

ಶ್ರೀ ಕೆ. ಕುಶಾಲ.—ಸ್ವಾಮಿ, ಎನ್ ಆರ್.ಇ.ಪಿ. ಮುಖಾಂತರ ಈ ಶಾಲಾ ಕಟ್ಟಡಗಳಿಗೆ ಬೇಕಾದಷ್ಟು ಹಣವನ್ನು ವಿನಿಯೋಗಿಸುವುದಕ್ಕೆ ಕೇಂದ್ರ ಸರ್ಕಾರದ ನೆರವು ಇಲ್ಲವೇ ?

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಹೇಳಿದ್ದು ನನಗೆ ಅರ್ಥವಾಯಿತು. ಹೈಸ್ಕೂಲ್‌ಗಳಿಗೆ ಕಟ್ಟಡಗಳನ್ನು ಕಟ್ಟಕೂಡದು ಎನ್ನುವುದು ಕೇಂದ್ರ ಸರ್ಕಾರದ ಆದೇಶ ಇದೆ. ದಯವಿಟ್ಟು ತಾವು ಕೂತುಕೊಳ್ಳಿ, ನನಗೆ ಉತ್ತರ ಹೇಳುವಾಗ ಸಹಾಯ ಮಾಡಿಕೊಡಿ. ಅಲ್ಲದೆ ನಾನು ಈಗ ಪ್ರೈಮರಿ ಸ್ಕೂಲ್‌ಗಳ ಬಗ್ಗೆ ಏನೂ ಹೇಳುತ್ತಾ ಇಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೇ, ನಾನು

ಮಾತನಾಡುವ ಧಾಟಿ ಆ ರೀತಿ ಇರುವುದರಿಂದ ಅದಕ್ಕೋಸ್ಕರವಾಗಿ ಮಾನ್ಯ ಸದಸ್ಯರೆಲ್ಲರೂ ನನಗೆ ಉತ್ತರ ಕೊಡುವಾಗ ಸಹಕಾರ ಕೊಡಬೇಕೆಂದು ನಾನು ಮತ್ತೊಮ್ಮೆ ಅವರನ್ನೆಲ್ಲಾ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ ಹಾಗೆ ಈ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೋಸ್ಕರವಾಗಿ ೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಜೊತೆಗೆ ಪ್ರೌಢಶಾಲೆಗಳ ಕಟ್ಟಡಗಳನ್ನೂ ಕೂಡ ಕಟ್ಟಿಸುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ನಾನು ಹೇಳಬಯಸುತ್ತೇನೆ.

ಅಷ್ಟೇ ಅಲ್ಲ ಆದ್ಯತೆಯ ಮೇರೆಗೆ ಪ್ರತಿಯೊಂದು ಶಾಲೆಗೂ ಪಿಠೋಪಕರಣಗಳನ್ನು ಒದಗಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಅಲ್ಲದೆ ಬ್ಯಾಂಕುಗಳಿಂದ ನೆರವನ್ನು ಪಡೆದು ಮತ್ತು ಇತರ ಹಣಕಾಸಿನ ಸಂಸ್ಥೆಗಳ ನೆರವನ್ನು ಪಡೆದು ವಾಚನಾಲಯಗಳನ್ನು ಪ್ರಾರಂಭ ಮಾಡುತ್ತೇವೆ, ಎಲ್ಲಿ ವಾಚನಾಲಯಗಳಿಲ್ಲವೋ ಅಲ್ಲೆಲ್ಲ ವಾಚನಾಲಯಗಳನ್ನು ಸ್ಥಾಪನೆ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಮತ್ತು ಪ್ರೌಢಶಾಲಾ ಕೊಠಡಿಗಳು ಒಂದೇ ಅಲ್ಲ ಕಿರಿಯ ಕಾಲೇಜುಗಳಿಗೂ ಕೊಠಡಿಗಳನ್ನು ಕೊಡಬೇಕಾಗಿದೆ. ಇದೇ ಹಣವನ್ನು ಉಪಯೋಗಿಸಿಕೊಂಡು ಕಿರಿಯ ವಿದ್ಯಾಲಯಗಳಿಗೆ ಕೊಠಡಿಗಳನ್ನು ಕೊಡಬೇಕಾಗಿದೆ. ಸುಮಾರು ೬೦ ಶಾಲಾಕಾಲೇಜುಗಳಿಗೆ ಕೊಠಡಿಗಳು ಬೇಕಾಗಿದೆ. ಅದನ್ನು ಈ ವರ್ಷ ಪೂರೈಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ ಎಂದು ತಮ್ಮ ಮುಖೇನ ಸದನಕ್ಕೆ ತಿಳಿಸುತ್ತಾ ಇದ್ದೇನೆ. ಮಾನ್ಯ ಅಧ್ಯಕ್ಷರೆ, ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಕಡಿಮೆಯಾಗುತ್ತಿದೆ ಎಂದು ಹಲವಾರು ಸದಸ್ಯರು ಹೇಳಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟವನ್ನು ಮೇಲಕ್ಕೆ ಏರಿಸಬೇಕು ಎಂದು ಈ ವರ್ಷ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾ ಇದ್ದೇವೆ. ಆ ಕಾರ್ಯಕ್ರಮಗಳಲ್ಲಿ ಶಾಲಾಭಿವೃದ್ಧಿ ಸಮಿತಿಗಳೂ ಒಂದು. ಈ ಸಮಿತಿಗಳನ್ನು ಪುನರ್ರಚನೆ ಮಾಡುವುದಕ್ಕೆ ನಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರೆ, ತಾವು ನಿನ್ನೆ ಒಂದು ಸೂಚನೆ ಕೊಟ್ಟಿರಿ, ಹೆಡ್ ಮಾಸ್ಟರ್ ಅಥವಾ ಪ್ರಿನ್ಸಿಪಾಲರನ್ನು ಛೇರ್ಮನ್ ಮಾಡಿ ಅವರ ಕೈಕೆಳಗೆ ಶಾಸಕನನ್ನು ಸದಸ್ಯರನ್ನಾಗಿ ಹಾಕಿರುವುದು ಸರಿಯಿಲ್ಲ ಎಂದು ಹೇಳಿದಿರಿ. ೨೮ನೇ ತಾರೀಖು ಸರ್ಕಾರ ಆದೇಶವನ್ನು ಹೊರಡಿಸಿದೆ, ಇವತ್ತಲ್ಲ, ಆ ಆದೇಶ ಏನೆಂದರೆ, "ಇನ್ನು ಮುಂದಕ್ಕೆ ಆಯಾ ಕ್ಷೇತ್ರದ ಶಾಸಕರು ಶಾಲಾಭಿವೃದ್ಧಿ ಸಮಿತಿಯಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಾರೆ, ಆ ಶಾಲಾಭಿವೃದ್ಧಿ ಸಮಿತಿಯಲ್ಲಿ ಕಾರ್ಯದರ್ಶಿಗಳಾಗಿ ಶಾಲಾ ಮುಖ್ಯೋಪಾಧ್ಯಾಯರು ಕೆಲಸ ಮಾಡುತ್ತಾರೆ, ಅದರಲ್ಲಿ ೧೦ ಜನ ಸದಸ್ಯರು ಇರುತ್ತಾರೆ, ಆ ೧೦ ಜನ ಸದಸ್ಯರ ಪೈಕಿ ಒಬ್ಬರು ಹಿಂದುಳಿದ ವರ್ಗಕ್ಕೆ ಸೇರಿದವರು ಆಗಿರಬೇಕು, ಮತ್ತೊಬ್ಬರು ಹರಿಜನ ಗಿರಿಜನರು ಆಗಿರಬೇಕು ಎಂದು ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಅನುಸೂಚಿತ ಜಾತಿಯವರು ಎಂದು ಹೇಳಿ.

ಶ್ರೀ ಎಂ. ರಘುಪತಿ.—ಮಾನ್ಯ ಬಸವಲಿಂಗಪ್ಪನವರ ಪ್ರಕಾರ ಅನುಸೂಚಿತ ಜಾತಿಯವರು ಎಂದು ಹೇಳೋಣ, ಅನುಸೂಚಿತ ಜಾತಿಯವರ ಪ್ರತಿನಿಧಿಗಳನ್ನು ಹಾಕಬೇಕು ಮತ್ತು ಅಲ್ಪಸಂಖ್ಯಾತರ ಪ್ರತಿನಿಧಿ ಮತ್ತು ಮಹಿಳಾ ಪ್ರತಿನಿಧಿಯನ್ನು ಹಾಕಬೇಕು ಎಂಬ ಸೂಚನೆಗಳನ್ನು ಕೊಟ್ಟಿದ್ದೇವೆ. ಈ ಸಮಿತಿಗಳು ಸುಮ್ಮನೆ ರಚನೆಯಾಗುವುದಲ್ಲ. ವರ್ಷಕ್ಕೆ ೩ ಸಭೆಗಳನ್ನು ಕಡ್ಡಾಯವಾಗಿ ಮಾಡಲೇಬೇಕು, ಮಾಡದೇಹೋದರೆ ತಾನೇತಾನಾಗಿ ಅವುಗಳು ರದ್ದಾಗುತ್ತದೆ. ಈ ೩ ಸಭೆಗಳಲ್ಲಿ ಯಾವ ವಿಷಯಗಳನ್ನು ಚರ್ಚೆಮಾಡಬೇಕು ಎನ್ನುವುದರ ಬಗ್ಗೆ ಗೈಡ್‌ಲೈನ್ಸ್ ಕೊಡುತ್ತಾ ಇದ್ದೇವೆ. ಅದರ ಹೊರತಾಗಿ ವಿಷಯಗಳನ್ನೂ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಏಕೆ ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದ್ದೇವೆಂದರೆ, ಎಲ್ಲೆಲ್ಲಿ ಸರ್ಕಾರಿ ಕಾಲೇಜುಗಳಿವೆ ಅವುಗಳೆಲ್ಲಾ ಬಹಳ ಉತ್ತಮ ರೀತಿಯಲ್ಲಿ ನಡೆಯಬೇಕು, ಮತ್ತು ಎಲ್ಲಿ ಉಪಾಧ್ಯಾಯರ ಕೊರತೆ ಇದೆಯೋ. ಇಲ್ಲವೋ, ಉಪಾಧ್ಯಾಯರು ಪಾಠಪ್ರವಚನಗಳನ್ನು ಮಾಡುತ್ತಾರೋ ಇಲ್ಲವೋ ಎನ್ನುವುದನ್ನೂ ಶಾಲಾಭಿವೃದ್ಧಿ ಸಮಿತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡುತ್ತಾ ಇದ್ದೇವೆ. ಏಕೆಂದರೆ, ಶಾಲೆಗಳಲ್ಲಿ ಸರಿಯಾದ ಮತ್ತು ಉತ್ತಮವಾದ ರೀತಿಯಲ್ಲಿ ಪಾಠಪ್ರವಚನಗಳು ನಡೆಯಬೇಕು. ಶಾಲೆಗಳು, ವಿದ್ಯಾಸಂಸ್ಥೆಗಳು ಇರುವುದು ವಿದ್ಯಾರ್ಥಿಗಳಿಗೋಸ್ಕರ, ವಿದ್ಯಾರ್ಥಿಗಳ ಪ್ರಗತಿಗಾಗಿ, ಮತ್ತು ಅವರಿಗೆ ಉನ್ನತ ಶಿಕ್ಷಣವನ್ನು ಕೊಡುವುದರ ಸಲುವಾಗಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾ ಇದ್ದೇವೆ. ಇದರ ಜೊತೆಗೆ ಸ್ಟಾಫ್ ಕೌನ್ಸಿಲ್ ಎಂದು ರಚನೆ ಮಾಡುತ್ತಾ ಇದ್ದೇವೆ. ಆ ಸ್ಟಾಫ್ ಕೌನ್ಸಿಲ್‌ನಲ್ಲಿ ಪ್ರಿನ್ಸಿಪಾಲರು ಅಧ್ಯಕ್ಷರಾಗಿರುತ್ತಾರೆ, ಇಬ್ಬರು ಸ್ಟಾಫ್ ಮೆಂಬರ್ಸ್ ಇರುತ್ತಾರೆ, ನಾನ್ ಟೀಚಿಂಗ್ ಸ್ಟಾಫ್ ಒಬ್ಬರು ಇರುತ್ತಾರೆ, ಅಷ್ಟೇ ಅಲ್ಲ ಇಬ್ಬರು ತಂದೆತಾಯಿಗಳ ಪ್ರತಿನಿಧಿಗಳೂ ಇರುತ್ತಾರೆ, ವಿದ್ಯಾರ್ಥಿಗಳ ಪ್ರತಿನಿಧಿ

ಒಬ್ಬರು ಇರುತ್ತಾರೆ. ಇವರೆಲ್ಲಾ ಕುಳಿತು ಶಾಲೆಯಲ್ಲಿ ಪಾಠಪ್ರವಚನಗಳು ಸರಿಯಾಗಿ ನಡೆಯುತ್ತದೋ ಇಲ್ಲವೋ ಎನ್ನುವುದನ್ನು ಚರ್ಚೆಮಾಡಬೇಕು ಎನ್ನುವುದೇ ಇದರ ಉದ್ದೇಶ. ಇದು ಸರ್ಕಾರಿ ಶಾಲೆಗಳಲ್ಲಿ ಮಾತ್ರ. ಪ್ರೈವೇಟ್ ಶಾಲೆಗಳ ತಂಟೆಗೆ ನಾವು ಬರುತ್ತಾ ಇಲ್ಲ.

ಶ್ರೀ ಬಿ, ಬಸವಲಿಂಗಪ್ಪ.—ಇವರು ಪ್ರಜಾಪ್ರಭುತ್ವವನ್ನು ಹೆಂಡತಿ ಗಂಡ ಇರುವ ಮನೆಗೆ ತೆಗೆದುಕೊಂಡುಹೋದರೆ ಹೆಂಡತಿ ಸಂಸಾರ ಮಾಡುವುದಕ್ಕಾಗುವುದಿಲ್ಲ. ಬೆಟರ್‌ಮೆಂಟ್ ಕಮಿಟಿ ಮಾಡಿದಿರಿ, ಸರಿ. ಸ್ಟಾಫ್ ಕೌನ್ಸಿಲ್ ಮಾಡಿದರೆ, ಸ್ಟಾಫನ್ನು ಮೆಂಬರ್‌ಮಾಡಿದರೆ ಅವರು ಮೀಸೆ ತಿರಿವಿಕೊಂಡು ಅಧಿಕಾರವನ್ನು ಚಲಾಯಿಸುತ್ತಾರೆ, ದಯಮಾಡಿ ಈ ಕೆಲಸವನ್ನು ಮಾಡಬೇಡಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಸರ್ಕಾರಿ ಶಾಲೆಗಳಲ್ಲಿ ಮತ್ತು ಅನುದಾನ ಪಡೆಯುವ ಶಾಲೆಗಳಲ್ಲಿ ಎಲ್ಲಿ ೩ ವರ್ಷಗಳಿಂದ ಶೇಕಡ ೩೦ಕ್ಕಿಂತ ಫಲಿತಾಂಶ ಕಡಿಮೆಯಾಗಿದೆಯೋ ಆ ಶಾಲೆಗಳಲ್ಲಿ ಮುಂಗಡವಾಗಿ ಅಂದರೆ ಫೆಬ್ರುವರಿಯಲ್ಲಿ ಪರೀಕ್ಷೆಗಳನ್ನು ಮಾಡಬೇಕು ಎಂಬ ನಿರ್ಧಾರವನ್ನು ತೆಗೆದುಕೊಂಡು ಆದೇಶ ಕೊಟ್ಟು ಸುಮಾರು ೬೦ ಶಾಲೆಗಳಲ್ಲಿ ಈ ಒಂದು ಪರೀಕ್ಷೆಗಳು ನಡೆದಿದೆ. ಇನ್ನೂ ಹೆಚ್ಚಿನ ಶಾಲೆಗಳಲ್ಲಿ ಅದರಲ್ಲೂ ಸರ್ಕಾರಿ ಶಾಲೆಗಳಲ್ಲಿ ಕಡ್ಡಾಯವಾಗಿ ಜನವರಿ ತಿಂಗಳಲ್ಲಿ ವಿದ್ಯಾರ್ಥಿಗಳ ಗುಣಮಟ್ಟವನ್ನು ಪರಿಶೀಲನೆ ಮಾಡುವುದಕ್ಕಾಗಿ ಮತ್ತು ಅವರು ಪರೀಕ್ಷೆಗಳಿಗೆ ತಯಾರಾಗಿದ್ದಾರೋ ಇಲ್ಲವೋ, ತಯಾರಾಗದೇಹೋದರೆ ಸ್ಪೆಷಲ್ ಕೋಚಿಂಗ್ ಕೊಡುವ ಸಲುವಾಗಿ ನಾವು ಜನವರಿ ಅಂತ್ಯದಲ್ಲಿ ಒಂದು ಪರೀಕ್ಷೆಯನ್ನು ನಡೆಸುತ್ತೇವೆ. ಆ ಪರೀಕ್ಷೆಯನ್ನು ನಡೆಸುವುದರ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಮತ್ತು ಅವರ ಫಲಿತಾಂಶ, ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಅವಕಾಶವಾಗುತ್ತದೆ ಎಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತಾ ಇದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಕೆಲವು ಸದಸ್ಯರು, ಹಳ್ಳಿ ಪ್ರದೇಶಗಳಿಗೆ ಆದ್ಯತೆ ಕೊಡುತ್ತಾ ಇಲ್ಲ ಎಂದು ಹೇಳಿದರು, ಮಾನ್ಯ ನೀಲಕಂಠಪ್ಪನವರು ಎಂದು ಕಾಣುತ್ತದೆ. ೧೯೮೩-೮೪ರಲ್ಲಿ ೧೫೮ ಶಾಲೆಗಳಿಗೆ ನಾವು ಅನುಮತಿ ಕೊಟ್ಟದ್ದರೆ, ಅದರಲ್ಲಿ ೧೩೬ ಗ್ರಾಮೀಣ ಪ್ರದೇಶದಲ್ಲಿ, ೨೨ ಮಾತ್ರ ಪಟ್ಟಣ ಪ್ರದೇಶದಲ್ಲಿ. ೧೯೮೪-೮೫ರಲ್ಲಿ ೨೭೨ ಶಾಲೆಗಳಿಗೆ ನಾವು ಮಂಜೂರಾತಿ ಕೊಟ್ಟಿದ್ದರೆ ೨೫೨ ಗ್ರಾಮೀಣ ಪ್ರದೇಶದಲ್ಲಿ ಕೇವಲ ೨೦ ಮಾತ್ರ ಪಟ್ಟಣ ಪ್ರದೇಶದಲ್ಲಿ. ಮತ್ತೆ ಹೋದವರ್ಷ ಸರ್ಕಾರಿ ವಲಯದಲ್ಲಿ ಕೊಟ್ಟಿಲ್ಲ. ಬರೀ ಖಾಸಗಿ ವಲಯದಲ್ಲಿ ಕೊಟ್ಟು, ೨೯೯ ಶಾಲೆಗಳನ್ನು ಗ್ರಾಮೀಣ ಪ್ರದೇಶದಲ್ಲಿ ಪ್ರಾರಂಭ ಮಾಡಿದ್ದರೆ ಕೇವಲ ೫೦ ಮಾತ್ರ ಪಟ್ಟಣ ಪ್ರದೇಶದಲ್ಲಿ ಪ್ರಾರಂಭ ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ೮ ಲಕ್ಷ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣವನ್ನು ಪಡೆಯುತ್ತಾ ಇದ್ದಾರೆ, ಈ ೮ ಲಕ್ಷ ವಿದ್ಯಾರ್ಥಿಗಳು ಪ್ರೌಢಶಿಕ್ಷಣವನ್ನು ಪಡೆಯುತ್ತಿರಬೇಕಾದರೆ, ತಮ್ಮ ಮೂಲಕ ಈ ಸದನಕ್ಕೆ ತಿಳಿಸುತ್ತಾ ಇದ್ದೇನೆ, ೬ ಲಕ್ಷ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಲ್ಲಿದ್ದಾರೆ.

ಆರು ಲಕ್ಷ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಲ್ಲಿದ್ದಾರೆ. ೧೯೮೪-೮೫ನೇ ವರ್ಷದ ಫಲಿತಾಂಶವನ್ನು ನೋಡಿದಾಗ ೫೫ ಪರ್ಸೆಂಟ್ ವಿದ್ಯಾರ್ಥಿಗಳು ಪಟ್ಟಣ ಪ್ರದೇಶದಲ್ಲಿ ಪಾಸಾಗಿದ್ದಾರೆ. ೧೦೦ಕ್ಕೆ ೪೯ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದಲ್ಲಿ ಪಾಸಾಗಿದ್ದಾರೆ. ಗ್ರಾಮೀಣ ಮಟ್ಟದಲ್ಲಿ ವಿದ್ಯಾಭ್ಯಾಸದ ಗುಣ ಮಟ್ಟ ಕಡಿಮೆಯಾಗಿಲ್ಲವೆನ್ನುವುದಕ್ಕೆ ಈ ವಿಷಯವನ್ನು ಈ ಸದನದ ಮುಂದೆ ಮಂಡಿಸುತ್ತಿದ್ದೇನೆ. ಟೆಕ್ಸ್ಟ ಬುಕ್ಸನ್ನ, ಸಿಲಬಸ್ ಅನ್ನು ಬದಲಾವಣೆ ಮಾಡಬೇಕೆಂಬ ಸೂಚನೆಯನ್ನು ಮಾನ್ಯ ಇದ್ದಿನಬ್ಬನವರು ಕೊಟ್ಟಿದ್ದಾರೆ. ಈಗಿನಿಂದಲೇ ಪ್ರಾರಂಭ ಮಾಡಿದರೆ ೧೯೮೭ರಲ್ಲಿ ಪುಸ್ತಕಗಳನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಸ್ಕ್ರೂಟನೈಸ್ ಮಾಡುವುದಕ್ಕೋಸ್ಕರ ತಜ್ಞರ ಸಮಿತಿಯನ್ನು ನೇಮಿಸುತ್ತೇನೆ. ಮತ್ತು ಎಂತಹ ಪಠ್ಯಪುಸ್ತಕಗಳಿರಬೇಕೆಂದು ಮಾನ್ಯ ಇದ್ದಿನಬ್ಬನವರು ಸಲಹೆ ಕೊಟ್ಟರೋ ಆ ಸಲಹೆಯನ್ನು ಒಪ್ಪಿಕೊಂಡು ತಜ್ಞರ ಸಮಿತಿಯನ್ನು ರಚನೆ ಮಾಡುತ್ತೇವೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ Scientific temperamant, historical events of our country, Freedom struggle historical background ಅನ್ನು ಒಳಗೊಂಡ ಪಾಠಗಳಿಗೆ ಹೆಚ್ಚು ಆದ್ಯತೆ ಕೊಡಬೇಕು. ಅದನ್ನು ಕೊಡುವುದರ ಮೂಲಕ ಪ್ರಗತಿಪರ ರಾಷ್ಟ್ರಗಳ ಜೊತೆಗೆ ನಾವೂ ಕೂಡ ಮುನ್ನಡೆಯುವುದಕ್ಕೆ ಸಾಧ್ಯವಾಗುತ್ತದೆಂದು ಏನು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದೀರಿ, ಅದನ್ನು ಒಪ್ಪಿಕೊಂಡಿದ್ದೇವೆ. ತಾವು ಹೇಳಿದಿರಿ, ಈ ಪಠ್ಯ ಪುಸ್ತಕಗಳಲ್ಲಿ ಏನೇನೋ ವಿಷಯಗಳಿವೆ, ವಿದ್ಯಾರ್ಥಿಗಳಿಗೆ ಸಂಬಂಧವಿಲ್ಲದಿರುವ ವಿಷಯಗಳು ಹಲವಾರು ಇವೆ ಇದರಿಂದ

ವಿದ್ಯಾರ್ಥಿಗಳ ಪ್ರಜ್ಞೆ ವಿಕಾಸವಾಗುವುದಿಲ್ಲವೆಂದು. ವಿದ್ಯಾರ್ಥಿಗಳ ವಿಕಾಸಕ್ಕಾಗಿ ಮತ್ತು ಅವರ ಪ್ರಜ್ಞೆಯನ್ನು ಬೆಳೆಸುವ ಸಲುವಾಗಿ ಪಠ್ಯ ಪುಸ್ತಕಗಳ ಗುಣಮಟ್ಟವನ್ನು ಕಾಪಾಡಿಕೊಂಡು ಬರಲು ಹಾಗೂ ಉತ್ತಮವಾದ ಪಠ್ಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಸರಬರಾಜು ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಬಸಲಿಂಗಪ್ಪ.—ಇದು ಬಹಳ ಪ್ರಾಮುಖ್ಯವಾಗಿರತಕ್ಕಂತಹ ವಿಚಾರವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಕೇಂದ್ರ ಸರ್ಕಾರದವರು ವಿದ್ಯಾ ನೀತಿಯನ್ನು ಬದಲಾವಣೆ ಮಾಡಿ ಮುಂದೆ ಭವಿಷ್ಯಕ್ಕೆ ಹೊಂದಿಕೊಳ್ಳತಕ್ಕಂಥಾದ್ದು, ಭವಿಷ್ಯಕ್ಕೆ ಅವಶ್ಯಕತೆಯಿರತಕ್ಕಂಥಾದ್ದು ಹಾಗೂ ಹಿಂದೂ ಸ್ಥಾನದಲ್ಲಿ ಏನು ಜನಗಳಿದ್ದಾರೆ ಅಂತಹವರಲ್ಲಿ ರಾಷ್ಟ್ರಭಕ್ತಿ ದೇಶಭಕ್ತಿ, ಒಗ್ಗಟ್ಟು ಬೆಳೆದು ತಾರತಮ್ಯ ಜೀವನವನ್ನು ತೊರೆದು ಐಕ್ಯತೆಯ ಕಡೆಗೆ ಗಮನಕೊಡಬೇಕೆಂದು ಪ್ರಾಸ್ಪೆಕ್ಟಿವ್ ಪ್ಲಾನ್ ಎಂದು ಏನು ಇದೆ ಅದರಲ್ಲಿ ಅಳವಡಿಸಿದ್ದಾರೆ. ಯಾವ್ಯಾವ ರೀತಿಯಲ್ಲಿ ಯಾವ್ಯಾವ ಉದ್ದೇಶಕ್ಕೋಸ್ಕರ ಈ ಪಠ್ಯ ಪುಸ್ತಕಗಳನ್ನು ಬದಲಾವಣೆ ಮಾಡಿ ಬರೆಸುತ್ತೀರೋ ಅದು ಮುಖ್ಯವಲ್ಲ ವಿಷಯಗಳು ಮುಖ್ಯ. ಪುಸ್ತಕಗಳನ್ನು ಬದಲಾವಣೆ ಮಾಡುವುದು ಮುಖ್ಯವಲ್ಲ ಅದರಲ್ಲಿನ ವಿಷಯಗಳು ಮುಖ್ಯ. ಅದನ್ನು ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ? ಯಾವ ಪಠ್ಯಪುಸ್ತಕದಲ್ಲೂ ಕೂಡ ಜಾತಿ ಭಾವನೆ ಸಂಕುಚಿತ ಭಾವನೆ ಇರಬಾರದು ದೊಡ್ಡ ಜಾತಿ ಚಿಕ್ಕ ಜಾತಿಗಳೆಂಬ ಭೇದ ಭಾವ ಇರಬಾರದು. ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ, ಹಿಂದಿನ ಪರಂಪರೆಯಿಂದ ಬೆಳೆದುಕೊಂಡು ಬಂದಿರತಕ್ಕ, ಈ ಜಾತಿಗಳು ಜಾಸ್ತಿಯಾಗಿದೆಯೇ ಹೊರತು ಒಗ್ಗಟ್ಟು ಜಾಸ್ತಿಯಾಗಿಲ್ಲ. ಒಗ್ಗಟ್ಟು ಜಾಸ್ತಿಯಾಗಬೇಕು. ಆ ದಿಶೆಯಲ್ಲಿ ತಾವು ಗಮನ ಕೊಟ್ಟು ವಿದ್ಯಾ ಇಲಾಖೆಯಲ್ಲಿ ಈ ಒಂದು ಹೊಸ ಪರಂಪರೆಯ ಭವಿಷ್ಯವನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಅದಕ್ಕೆ ಪ್ರಯತ್ನ ಮಾಡುತ್ತೇವೆ. ಪಠ್ಯಪುಸ್ತಕಗಳಲ್ಲಿನ ವಿಷಯಗಳನ್ನು ಈ ದೇಶದ ಐಕ್ಯತೆಯನ್ನು ಕಾಪಾಡಿಕೊಂಡು ಹೋಗುವ ಸಲುವಾಗಿ ಮತ್ತು ಜಾತ್ಯಾತೀತ ರಾಷ್ಟ್ರವನ್ನು ಕಟ್ಟುವ ಸಲುವಾಗಿ ಪಠ್ಯ ಪ್ರವಚನವನ್ನು ಹೊಂದಾಣಿಕೆ ಮಾಡಬೇಕಾಗಿದೆಯೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕೇಂದ್ರ ಸರ್ಕಾರದವರು ವಿದ್ಯಾ ನೀತಿಯನ್ನು ಪ್ರಕಟಣೆ ಮಾಡುತ್ತೇವೆಂದು ಹೇಳಿದಾಗ ಕೋರ್ ಕರಿಕ್ಯುಲಮ್ ಮಾಡುವುದಕ್ಕೆ ಸಂಪೂರ್ಣ ವಿರೋಧವನ್ನು ವ್ಯಕ್ತ ಮಾಡಿಲ್ಲ, ಆದರೆ ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದೇವೆ. ಅದೇನೆಂದರೆ ನಮ್ಮ ದೇಶದಲ್ಲಿ ಆಯಾ ರಾಜ್ಯಗಳ ಪರಿಸ್ಥಿತಿಗೆ ಹೊಂದಾಣಿಕೆಯಾಗುವ ರೀತಿಯಲ್ಲಿ ಕೋರ್ ಕರಿಕ್ಯುಲಮ್ ತಯಾರಿರಬೇಕು. ದೇಶದ ಬೇರೆ ಬೇರೆ ಭಾಗದ ವಿಷಯಗಳನ್ನು ಭೋದನೆ ಮಾಡಿ ನಮ್ಮ ರಾಜ್ಯದ ವಿಷಯಗಳನ್ನು ಬಿಡಬಾರದೆಂದು ಏನು ಸಲಹೆಯನ್ನು ಕೊಟ್ಟಿದ್ದೀರಿ ಅದನ್ನು ಕೇಂದ್ರ ಸರ್ಕಾರ ಒಪ್ಪಿಕೊಳ್ಳುತ್ತದೆಂದು ನಂಬಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಮುಂದಿನ ವರ್ಷ ತಜ್ಞರ ಅಭಿಪ್ರಾಯವನ್ನು ಪಡೆದು ಸಮಿತಿಯನ್ನು ರಚನೆ ಮಾಡಿ ಪಠ್ಯಪುಸ್ತಕಗಳನ್ನು ತಯಾರು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಎರಡು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ ವಿದ್ಯಾ ವಿಕಾಸದ ಅಡಿಯಲ್ಲಿ. ಈ ವರ್ಷ ಅಂದರೆ ೧೯೮೫-೮೬ ನೇ ಸಾಲಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಕೊಡಬೇಕು ಹಾಗೂ ಸಮ ವಸ್ತ್ರಗಳನ್ನು ಕೊಡಬೇಕೆಂಬ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ವಿರೋಧ ಪಕ್ಷದ ಹಲವಾರು ಸದಸ್ಯರು ಶ್ರೀಮಂತರಿಗೆ ಕೊಡುತ್ತಿದ್ದೀರಿ ಇದು ಸರಿಯಲ್ಲ ಎಂದು ಆಕ್ಷೇಪಣೆ ಮಾಡಿದರು ಸರ್ಕಾರೀ ಶಾಲೆಗಳಲ್ಲಿ ಓದುವವರು ಸುಮಾರು ೧೦೦ಕ್ಕೆ ೯೦ ಜನ ಬಡವರು ಇದನ್ನು ಒಪ್ಪುತ್ತಿರೆಂದು ಕಾಣುತ್ತದೆ. ಒಂದು ವೇಳೆ ನಾನೇನಾದರೂ ೧೦-೨೦ ಸಾವಿರ ವರಮಾನ ಬರುವವರಿಗೆ ಮಾತ್ರ ಈ ಪುಸ್ತಕಗಳನ್ನು ಕೊಡುತ್ತೇವೆಂಬ ನೀತಿಯನ್ನು ಜಾರಿಗೆ ಕೊಟ್ಟರೆ, ಆ ನೀತಿಯನ್ನು ಕಾಪಾಡಿಕೊಂಡು ಬರಲು, ಅದನ್ನು ನೋಡಿಕೊಂಡು ಬರುವುದಕ್ಕೆ ಹಲವಾರು ಅಧಿಕಾರಿಗಳು ಬೇಕಾಗುತ್ತಾರೆ. ಇವರು ಸರ್ಟಿಫಿಕೇಟ್ ತರಬೇಕು ಆ ಸರ್ಟಿಫಿಕೇಟ್‌ನ್ನು ತರುವಾಗ ಪ್ರತಿಯೊಬ್ಬರೂ ನಮ್ಮ ವರಮಾನ ಅದಕ್ಕಿಂತ ಒಂದು ಪೈಸೆ ಕಡಿಮೆಯಿದೆಯೆಂದು ತೋರಿಸಿ ಈಪುಸ್ತಕಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಶ್ರೀಮಂತರಾಗಿದ್ದವರು ವಾಲೆಂಟಿರ್ ಆಗಿ ಸರಂಡರ್ ಮಾಡಿದರೆ ಉತ್ತಮವಾಗಿ ಶಾಲೆಯ ಅಭಿವೃದ್ಧಿಗೇ ವಿನಿಯೋಗ ಮಾಡಬಹುದು. ನಾವು ಈ ಕ್ರಮದಿಂದಾಗಿ ೬೦ ಲಕ್ಷ ವಿದ್ಯಾರ್ಥಿಗಳಿಗೆ ಸರಬರಾಜು ಮಾಡಿದ್ದೇವೆ. ನಮ್ಮ ಅಂದಾಜು ೪೦ ಲಕ್ಷ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಸರಬರಾಜು ಮಾಡಿದರೆ

ಸಾಕು ಎಂದು ಇತ್ತು. ಕಳೆದ ವರ್ಷ ೩೫ ಲಕ್ಷ ಪುಸ್ತಕಗಳನ್ನು ಮಾತ್ರ ಖರೀದಿ ಮಾಡಿದ್ದರು. ಆದ್ದರಿಂದ ೪೦ ಲಕ್ಷ ಪುಸ್ತಕಗಳನ್ನು ಮುದ್ರಣ ಮಾಡಿದರೆ ಸಾಕೆಂಬ ವರದಿಯನ್ನು ನಮ್ಮ ಅಧಿಕಾರಿಗಳು ಕೊಟ್ಟರು. ಆದರೆ ನಾವು ಸರಬರಾಜು ಮಾಡುವುದಕ್ಕೆ ಪ್ರಾರಂಭ ಮಾಡಿದಾಗ ೬೦ ಲಕ್ಷಕ್ಕೆ ಹೋಗಿ ತಲುಪಿದೆ. ಅಂದರೆ ೨೦ ಲಕ್ಷ ವಿದ್ಯಾರ್ಥಿಗಳು ಈ ರಾಜ್ಯದಲ್ಲಿ ಪುಸ್ತಕಗಳನ್ನು ಕೊಂಡುಕೊಳ್ಳುತ್ತಿರಲಿಲ್ಲವೆಂದಾಯಿತು. ಅಂದಾಜು ಮಾಡಿಸಿದರೆ ತಿಳಿಯಿತು ಇವರು ಪುಸ್ತಕಗಳನ್ನು ಕೊಂಡುಕೊಳ್ಳುತ್ತಲೇ ಇರಲಿಲ್ಲ, ಹಾಗೇ ಶಾಲೆಗೆ ಹೋಗುತ್ತಿದ್ದರು ಎಂದು. ಆದರೆ ಅವರು ಶಾಲೆಗೆ ಬಂದು ಡ್ರಾಪ್ ಔಟ್ಸ್ ಆಗುತ್ತಿದ್ದರು ಮತ್ತೆ ಮುಂದುವರಿಯುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ಶ್ರೀಮಂತರ ಹತ್ತಿರ ಮಕ್ಕಳನ್ನು ಕೆಲಸಕ್ಕೆ ಕಳಿಸಿದರೆ, ಇಲ್ಲವೇ ಬೀಡಿ ಸುತ್ತುವುದಕ್ಕೆ, ವ್ಯವಸಾಯದ ಕೆಲಸಕ್ಕೆ ಕಳಿಸಿದರೆ ಹಣ ಸಿಗುತ್ತದೆ ಆದರಿಂದ ಸಂತೋಷವಾಗಿರಬಹುದೆಂದು ಶಾಲೆಗಳಿಗೆ ಕಳುಸುವುದಿಲ್ಲ. ಈಗ ಪುಸ್ತಕಗಳನ್ನು ಕೊಡುತ್ತಿರುವ ಒಂದು ಕಾರಣದಿಂದ ಈ ಸಾಲಿಗೆ ಎರಡು ಲಕ್ಷ ವಿದ್ಯಾರ್ಥಿಗಳು ಜಾಸ್ತಿಯಾಗಿದ್ದಾರೆ. ಮುಂದಿನ ವರ್ಷ ಮೂರು ಲಕ್ಷ ವಿದ್ಯಾರ್ಥಿಗಳು ಜಾಸ್ತಿಯಾಗಬಹುದೆಂದು ಅಂದಾಜು ಮಾಡುತ್ತಿದ್ದೇವೆ. ಈ ಪುಸ್ತಕಗಳ ಸರಬರಾಜು ವಿಷಯದಲ್ಲಿ ನನ್ನ ಹತ್ತಿರ ಮಾಹಿತಿ ಇದೆ ಅದನ್ನು ಇಲ್ಲಿ ಹೇಳಿದರೆ ಯಾರು ಅನ್ಯಥಾ ಭಾವಿಸಬಾರದು.

ಈ ವರ್ಷ ೯೫ ಪರ್ಸೆಂಟ್ ಪುಸ್ತಕಗಳನ್ನು ಜುಲೈ ಅಂತ್ಯಕ್ಕೆ ಕೊಡಲಾಗಿತ್ತು. ಶೇಕಡ ೫ರಷ್ಟು ಪುಸ್ತಕಗಳನ್ನು ಸರಬರಾಜು ಮಾಡುವುದರಲ್ಲಿ ವಿಫಲರಾಗಿದ್ದೇವೆ, ಇಲ್ಲ ಎಂದು ಹೇಳುತ್ತಿಲ್ಲ. ಅದು ಕೂಡ ಮೈನರ್ ಲಾಂಗ್ವೇಜ್‌ಗಳಾದ ಉರ್ದು ಮತ್ತು ಮರಾಠಿ ಪುಸ್ತಕಗಳನ್ನು ಪ್ರಿಂಟ್ ಮಾಡುವುದರಲ್ಲಿ ಕ್ಯಾಲಿಗ್ರಫಿ ಪ್ರಿಂಟಿಂಗ್‌ನಿಂದ ತೊಂದರೆಯಾಯಿತು. ಅದನ್ನು ಮತ್ತೆ ಮುಂದುವರಿಸಿಕೊಂಡು ಹೋಗುವುದಿಲ್ಲ. ಮುಂದಿನ ವರ್ಷ ಉತ್ತಮ ರೀತಿಯಲ್ಲಿ ಎ.ಇ.ಓ. ಮತ್ತು ಮುಖ್ಯೋಪಾಧ್ಯಾಯರುಗಳ ಜವಾಬ್ದಾರಿಯನ್ನು ತಪ್ಪಿಸಿ, ಮಾರ್ಕೆಟಿಂಗ್ ಫೆಡರೇಷನ್ ಮೂಲಕ, ಪ್ರತಿಯೊಂದು ಹಳ್ಳಿಯಲ್ಲೂ ಇರತಕ್ಕ ಸಹಕಾರ ಸಂಘಗಳಿಂದ ಶಾಲೆಗೆ ಸರಬರಾಜು ಮಾಡಲಾಗುವುದು, ನಾವು ಯಾವುದಾದರೂ ಒಂದು ಏಜನ್ಸಿಯ ಮೇಲೆ ಅವಲಂಬನೆಯಾಗಲೇ ಬೇಕಾಗಿದೆ. ಅದಕ್ಕಾಗಿ ಪ್ರತಿಯೊಂದು ಹಳ್ಳಿಗಳಲ್ಲಿಯೂ ಇರತಕ್ಕ ಸಹಕಾರ ಸಂಘಗಳ ಮೂಲಕ ಪುಸ್ತಕಗಳ ವಿತರಣೆ ವ್ಯವಸ್ಥೆಯನ್ನು ಮಾಡಲಾಗುವುದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಹಕಾರ ಸಂಘಗಳಲ್ಲಿ ಹಲವಾರು ಸದಸ್ಯರುಗಳು ಇರುತ್ತಾರೆ. ವಿದ್ಯಾರ್ಥಿಗಳ ತಂದೆ ತಾಯಿಗಳು ಇರುತ್ತಾರೆ. ಕಳೆದು ಹೋದ ಪುಸ್ತಕಗಳನ್ನು ಕೊಳ್ಳುವುದಕ್ಕೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ೫ ಪರ್ಸೆಂಟ್ ಏನು ವಿಫಲರಾಗಿದ್ದೇವೆ ಅದನ್ನೇ ಎತ್ತಿ ತೋರಿಸಬೇಕಾಗಿಲ್ಲ. ಈಗಾಗಲೇ ಮುದ್ರಣ ಕಾರ್ಯ ಭರದಿಂದ ನಡೆಯುತ್ತಿದೆ. ಜೂನ್ ತಿಂಗಳಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಡುವುದಕ್ಕೆ ನನ್ನ ಇಲಾಖೆ ಏರ್ಪಾಡು ಮಾಡುತ್ತದೆಂದು ಸದನಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಶಾಲಾಮಕ್ಕಳಿಗೆ ಕೊಡುವಂಥ ಸಮವಸ್ತ್ರ ಬಗ್ಗೆ ಹೇಳುವುದಾದರೆ. ಇವತ್ತು ೨೨ ಲಕ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಕೊಡಲಾಗಿದೆ. ಎಷ್ಟೋ ಕುಟುಂಬಗಳು ಮಕ್ಕಳಿಗೆ ಬಟ್ಟೆಯಿಲ್ಲದೆ ಶಾಲೆಗೆ ಕಳುಹಿಸದೇ ಇರತಕ್ಕ ಪರಿಸ್ಥಿತಿ ಇದೆ. ಅಲ್ಲದೆ, ಕೋಮಲ ಮನೋಭಾವ ಇರತಕ್ಕ ವಿದ್ಯಾರ್ಥಿಗಳಲ್ಲಿ ಶ್ರೀಮಂತರು ಬಡವರು ಎನ್ನುವಂಥ ತಾರತಮ್ಯ ಬೆಳೆಯಬಾರದೆನ್ನುವ ಉದ್ದೇಶದಿಂದ, ಎಲ್ಲರೂ ಒಂದೇರೀತಿಯ ಸಮವಸ್ತ್ರವನ್ನು ಹಾಕಿಕೊಂಡು ಶಾಲೆಗೆ ಹೋದರೆ, ಸರಿಸಮಾನರು ಎನ್ನುವಂಥ ಭಾವನೆ ಬರುತ್ತದೆನ್ನುವ ದೃಷ್ಟಿಯಿಂದ ಸಮವಸ್ತ್ರ ಕೊಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತೇ ವಿನಹ ಇದು ಅಗ್ಗದ ಪ್ರಚಾರಕ್ಕಾಗಿ ತಂದ ಕಾರ್ಯಕ್ರಮವಲ್ಲ. ಇದರಿಂದ ಶೇಕಡ ೩೦ರಷ್ಟು ಜನ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ನೋಂದಣಿ ಜಾಸ್ತಿಯಾಗಿದೆ. ಡ್ರಾಪೌಟ್ ಕಡಿಮೆಯಾಗಿದೆ. ನಾನು ಮೊದಲೇ ಹೇಳಿದಂತೆ ಇದು ಅಗ್ಗದ ಕಾರ್ಯಕ್ರಮವಲ್ಲವೆಂದು ನಮ್ರತೆಯಿಂದ ಹೇಳುತ್ತೇನೆ. ಪ್ರತಿಯೊಬ್ಬರಿಗೂ ತಮ್ಮ ಮಕ್ಕಳನ್ನು ಓದಿಸಬೇಕೆಂಬ ಅಭಿಲಾಷೆ ಇದ್ದೇ ಇರುತ್ತದೆ. ಅಲ್ಲದೆ, ರಾಜ್ಯಾಂಗಬದ್ಧವಾಗಿ ಮಾನ್ಯ ಬಸವಲಿಂಗಪ್ಪನವರು ಹೇಳಿದಂತೆ. ಬಡಮಕ್ಕಳಿಗೆ ರಾಜ್ಯಾಂಗ ಬದ್ಧವಾಗಿ ವಿದ್ಯಾಭ್ಯಾಸ ಕೊಡಿಸುವ ಉದ್ದೇಶದಿಂದ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಇದರಿಂದ ನೋಂದಣಿ ಕೂಡ ಜಾಸ್ತಿಯಾಗುವ ಉದ್ದೇಶವೂ ಇದೆ. ಇನ್ನು ಅನುದಾನ ಪಡೆಯುವಂಥ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ತರುವ ಉದ್ದೇಶ ಸರ್ಕಾರಕ್ಕೆ ಇದೆ, ಸರ್ಕಾರವೇ

ಸಂಬಳ ಕೊಡುತ್ತಿರುವಾಗ ಉಪಾಧ್ಯಾಯರುಗಳನ್ನು ಸಮಿತಿಗಳ ಮೂಲಕವೇ ನೇಮಕ ಮಾಡಬೇಕು. ಮೀಸಲಾತಿ ಕಾನೂನನ್ನು ಕಡ್ಡಾಯವಾಗಿ ಪರಿಪಾಲನೆ ಮಾಡಬೇಕು. ಶಾಲೆಗಳಲ್ಲಿ ದುರಾಡಳಿತ ನಡೆದರೆ ಅವುಗಳ ಆಡಳಿತವನ್ನು ವಹಿಸಿಕೊಳ್ಳುವಂಥ ಅಧಿಕಾರ ಸರ್ಕಾರಕ್ಕೆ ಇಲ್ಲ. ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಅವರು ರಿಜಿಸ್ಟ್ರೇಷನ್ ಮಾಡಿಕೊಂಡಿರುತ್ತಾರೆ. ಟ್ರಸ್ಟ್‌ಗಳನ್ನು ಮಾಡಿಕೊಂಡು ಅದರ ಮೂಲಕ ರಿಜಿಸ್ಟ್ರೇಷನ್ ಮಾಡಿಕೊಂಡಿರುತ್ತಾರೆ. ಅವುಗಳ ತಂಟೆಗೆ ಹೋಗುವಂತಿಲ್ಲ ವಿದ್ಯಾ ಸಂಸ್ಥೆಗಳಲ್ಲಿ ಲೋಪದೋಷಗಳು ಕಂಡುಬಂದರೆ, ಆಡಳಿತದಲ್ಲಿ ಜಗಳ ಬಂದರೆ ವಿದ್ಯಾಸಂಸ್ಥೆಗಳು ಹೊಣೆಯಾಗುತ್ತವೆ. ಉಪಾಧ್ಯಾಯರಿಗೆ ಸರಿಯಾದ ರೀತಿಯಲ್ಲಿ ಪಠ್ಯಕ್ರಮಗಳನ್ನು ಮಾಡುವುದಕ್ಕೆ ಬಿಡದೇ ಇರುವಂತಹ ದೂರುಗಳು ಎಲ್ಲಿ ಬರುತ್ತವೆ, ಅಲ್ಲಿ ಸರ್ಕಾರದ ಅಧಿಕಾರಿಯನ್ನು ವಿದ್ಯಾ ಇಲಾಖೆಯಿಂದ ನೇಮಕ ಮಾಡುವುದಕ್ಕೆ ಗ್ರ್ಯಾಂಟ್ ಇನ್ ಎಯಿಡ್ ಕಾಯಿದೆಗೆ ತಿದ್ದುಪಡಿ ತರುತ್ತೇನೆ.

ಉನ್ನತ ಶಿಕ್ಷಣದ ಬಗ್ಗೆ ಹೇಳುವುದಾದರೆ, ಇವತ್ತು ವಿಶ್ವವಿದ್ಯಾನಿಲಯಗಳು ಕಲುಷಿತ ರಾಜಕೀಯದಿಂದ ಕೂಡಿವೆ. ವಿಶ್ವವಿದ್ಯಾನಿಲಯಗಳು ಯಾವ ಒಂದು ಗುಣಮಟ್ಟವನ್ನು ಕಾಪಾಡಿಕೊಂಡು ಬರಬೇಕೆಂದು ನಾವು ಯೋಚನೆ ಮಾಡಿದ್ದೆವೋ ಆ ಒಂದು ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದಕ್ಕೆ ಸಾಧ್ಯವಾಗಿಲ್ಲ. ಈ ದೇಶದಲ್ಲಿಯೇ ಆಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ದೇಶದ ಸಮಾಚಾರ ಬೇಡ.

ಶ್ರೀ ಎಂ. ರಘುಪತಿ.—ನಮ್ಮ ರಾಜ್ಯದ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೇನೆ. ಆದರೂ ಆಗಾಗ ಟಚ್ ಮಾಡುತ್ತೇನೆ ಪಕ್ಷಗಳ ರಾಜಕೀಯ ಅಲ್ಲ, ಒಳ ರಾಜಕೀಯದಿಂದ ತುಂಬಿವೆ. ಅವನಿಗೆ ಪ್ರೊಮೋಷನ್ ಕೊಡಬೇಕೋ, ಇವನಿಗೆ ಪ್ರೊಮೋಷನ್ ಕೊಡಬೇಕೋ, ಆತನಿಗೆ ಸಹಾಯ ಮಾಡಬೇಕೋ, ಈತನಿಗೆ ಸಹಾಯ ಮಾಡಬೇಕೋ ಎನ್ನುವ ರಾಜಕೀಯವೇ ಜಾಸ್ತಿಯಾಗಿದೆ ವಿದ್ಯಾ ವಿಕಾಸದ ಬಗ್ಗೆ, ಪ್ರಗತಿಯ ಬಗ್ಗೆ ಚರ್ಚೆಯಾಗುವುದು ಕಡಿಮೆಯಾಗಿದೆಯೆಂದು ನನಗೆ ಬಂದಂಥ ಮಾಹಿತಿ ಪ್ರಕಾರ ಅರಿವಾಗಿದೆ. ವಿಶ್ವವಿದ್ಯಾನಿಲಯ ಕಾಯಿದೆ ತಿದ್ದುಪಡಿ ತರುವುದಕ್ಕೆ ಯೋಚನೆ ಮಾಡಿದ್ದೇನೆ. ಮಾನ್ಯ ಎರಡೂ ಕಡೆಯ ಸದಸ್ಯರುಗಳು ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಗುಣಮಟ್ಟದ ಬಗ್ಗೆ, ಪಠ್ಯಕ್ರಮಗಳ ಗುಣಮಟ್ಟದ ಬಗ್ಗೆ ಅದನ್ನು ಕಾಪಾಡಿಕೊಂಡು ಬರುವುದಕ್ಕೆ ಸಂಬಂಧಪಟ್ಟಂತೆ ಏನೇನು ಸಲಹೆಗಳನ್ನು ಸೂಚನೆ ಮಾಡುತ್ತಾರೋ ಅವುಗಳನ್ನು ಅಳವಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. To maintain the academic standards and excellence and also to see that Universities devote their time more for rasearch work than other aspects. ಈ ಕಾರಣಗಳಿಗಾಗಿ ವಿಶ್ವವಿದ್ಯಾನಿಲಯಗಳ ಅಂತರ ಮಂಡಲಿಯನ್ನು ರಚನೆ ಮಾಡಿದ್ದೇನೆ. ಅಂತರ ಮಂಡಲಿಯ ಮೂಲಕ ಹಲವಾರು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿದೆ.

ಶ್ರೀ ಬಸವಲಿಂಗಪ್ಪನವರು ನಿನ್ನೆ ಮೈಸೂರು, ಬೆಂಗಳೂರು ಮತ್ತು ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಏನು ಮೀಸಲಾತಿಯ ಒಂದು ನಿಯಮ ಇದೆ ಅದಕ್ಕನುಗುಣವಾಗಿ ನೇಮಕಾತಿ ಆಗಿಲ್ಲವೆಂದು ಹೇಳಿದ್ದಾರೆ. ಈ ಮೀಸಲಾತಿ ನಿಯಮವನ್ನು ಯಾವುದೇ ರೀತಿಯಲ್ಲೂ ಉಲ್ಲಂಘನೆ ಮಾಡದ ಹಾಗೆ ಕಾಯಿದೆ ತಿದ್ದುಪಡಿ ತರುತ್ತೇನೆಂದು ಆಗಲೇ ಸೂಚನೆ ಕೊಟ್ಟಿದ್ದೇನೆ. ಅದರ ಪ್ರಕಾರ ಮೀಸಲಾತಿ ಅನುಸೂಚಿತ ಜಾತಿಗಳಿಗೆ ಏನು ನ್ಯಾಯ ಸಿಗಬೇಕೋ ಅದನ್ನು ಒದಗಿಸಿಕೊಡುತ್ತೇನೆ. ಈ ಜನತಾ ಸರ್ಕಾರ ತನ್ನ ಕಾಲಾವಧಿಯಲ್ಲಿ ಯಾವ ವಿಧವಾದ ಅನ್ಯಾಯವೂ ಆಗದ ಹಾಗೆ ನಡೆದುಕೊಳ್ಳುತ್ತದೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಇದುವರೆಗೂ ಆಗಿದ್ದಕ್ಕೆ ಏನು ಮಾಡುತ್ತೀರಿ?

ಶ್ರೀ ಎಂ ರಘುಪತಿ.—ಯಾವ ರೀತಿ ಅದನ್ನು ಸರಿಮಾಡುತ್ತೇನೆಂದು ಯೋಚಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲ; ಜನತಾ ಸರ್ಕಾರ ಅನ್ಯಾಯವನ್ನು ಸರಿಪಡಿಸುತ್ತದೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಈ ಜನತಾ ಸರ್ಕಾರದ ಮೂರು ವರ್ಷಗಳ ಅವಧಿಯಲ್ಲಿ ಆಗಿರುವ ಅನ್ಯಾಯದ ಬಗ್ಗೆ ನಿಮ್ಮ ಸರ್ಕಾರ ಪರಿಶೀಲಿಸುತ್ತದೆಯೋ?

ಶ್ರೀ ಎಂ ರಘುಪತಿ.—ಇದರ ಬಗ್ಗೆ ಮುಂದಿನ ಅಂತರ ವಿಶ್ವವಿದ್ಯಾನಿಲಯಗಳ ಮಂಡಲಿಯಲ್ಲಿ ಇದನ್ನು ಚರ್ಚೆ ಮಾಡುತ್ತೇನೆ. ಅಲ್ಲಿ ಅದನ್ನು ಸರಿಮಾಡುತ್ತೇನೆ.

ಶ್ರೀ ಎಂ ವೀರಪ್ಪ ಮೊಯ್ಲಿ.—ಹೇಗೆ ಸರಿ ಮಾಡುತ್ತೀರಿ, ಅದನ್ನು ಹೇಳಿ?

ಶ್ರೀ ಬಿ. ಬಸವಲಿಂಗಪ್ಪ.—ಅನ್ಯಾಯವಾಗಿರುವ ಲೆಕ್ಕವನ್ನು ಕೊಟ್ಟಿದ್ದೇನೆ. ಯಾವ್ಯಾವ ಹುದ್ದೆಗಳಲ್ಲಿ ಅನ್ಯಾಯವಾಗಿದೆ ಎಂಬುದರ ಬಗ್ಗೆ ಸ್ಪೆಷಲ್ ರೆಕ್ರೂಟಮೆಂಟ್ ರಚಿಸಿ ಸರಿಪಡಿಸಬಹುದು.

ಶ್ರೀ ಎಂ ರಘುಪತಿ.—ಅಧ್ಯಕ್ಷರೇ, ಕಾಯಿದೆಯ ಪ್ರಕಾರ ಸ್ಪೆಷಲ್ ರೆಕ್ರೂಟ್‌ಮೆಂಟ್ ಕಮಿಟಿಯನ್ನು ರಚಿಸಿ ಹಿಂದೆ ಆಗಿರುವ ಅನ್ಯಾಯವನ್ನು ಸರಿಪಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಸವಲಿಂಗಪ್ಪನವರೇ ಇದನ್ನು ಸೂಚಿಸಲಿ ಎಂದು ನಾನು ಮೊದಲು ಹೇಳಲಿಲ್ಲ.

ಅಧ್ಯಕ್ಷರೇ, ಈ ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ಕಾಪಾಡುವ ರೀತಿಯಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆದಿದ್ದೇನೆ. ಅದರಲ್ಲಿ ಸ್ಪಷ್ಟವಾಗಿ ತಿಳಿಸಿದ್ದೇನೆ.— ವಿಶ್ವವಿದ್ಯಾನಿಲಯಗಳಿಗೆ ಇನ್ನು ಮುಂದಕ್ಕೆ ಹಣದ ಸಹಾಯವನ್ನು ನೀವೇ ಪೂರ್ತಿ ಮಾಡಿ, ನಿಮ್ಮ ಜಾಬ್ದಾರಿಗೇ ತೆಗೆದುಕೊಳ್ಳಿ, ಹಣವನ್ನೆಲ್ಲ ನೀವೇ ಕೊಡಿ, ನಿಮ್ಮ ಕನ್‌ಕರೆಂಟ್‌ಲಿಸ್ಟ್‌ನಲ್ಲಿ ಎಜುಕೇಷನ್ನೂ ಇದೆ, ಹೇಗೂ. ಹೆಚ್ಚಿನ ಹಣವನ್ನೂ ಖರ್ಚು ಮಾಡಬೇಕೆಂದಿರುವಿರಿ, ಆದ್ದರಿಂದ ಹಣವನ್ನು ನೀವೇ ಕೊಡಿ ಎಂದು ಬರೆದಿದ್ದೇನೆ. ಏಕೆಂದರೆ ವಿಶ್ವವಿದ್ಯಾನಿಲಯಗಳಿಗೆಲ್ಲ ಹಣ ಸಹಾಯ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ನಮ್ಮ ರಾಜ್ಯದಲ್ಲೇನೋ ನಾವು ಕೊಡುತ್ತಿದ್ದೇವೆ. ಆದರೆ ಬೇರೆ ರಾಜ್ಯಗಳಿಗೆ ಕಷ್ಟವಾಗಿದೆ.

ಇನ್ನು ಗುಲ್ಬರ್ಗ ಮತ್ತು ಮಂಗಳೂರು ಭಾಗಗಳ ಶಾಸಕರು ಈ ಸದನದಲ್ಲಿದ್ದಾರೆ. ಅವರಿಗೆ ಸಂತೋಷದ ಸುದ್ದಿ ತಿಳಿಸುತ್ತೇನೆ. ಏನೆಂದರೆ ಹೋದ ತಿಂಗಳು ೧೦ನೇ ತಾರೀಖು ನಡೆದ ಸಭೆಯಲ್ಲಿ ಈ ಎರಡೂ ವಿಶ್ವವಿದ್ಯಾನಿಲಯಗಳಿಗೆ ಯುಜಿಸಿಯವರು ಮಾನ್ಯತೆ ಕೊಟ್ಟಿದ್ದಾರೆ. ಈ ಸಂತೋಷದ ಸುದ್ದಿಯನ್ನು ಈ ಸಂದರ್ಭದಲ್ಲಿ ಪ್ರಕಟಣೆ ಮಾಡುತ್ತಾ ಇದಕ್ಕಾಗಿ ಎಷ್ಟು ಪ್ರಯತ್ನ ಪಟ್ಟಿದ್ದೀರಿ ಅದೊಂದು ಭಗೀರಥ ಪ್ರಯತ್ನ. ೫ ವರ್ಷಗಳ ಕಾಲ ಕೊಡಲೇ ಇಲ್ಲ. ಈಗ ಸಿಕ್ಕಿದೆ ಮಾನ್ಯತೆ. ಆದ್ದರಿಂದ ಯುಜಿಸಿಗೆ ತಡವಾಗಿಯಾದರೂ ಮಾನ್ಯತೆ ಕೊಟ್ಟಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅಷ್ಟೇ ಅಲ್ಲ, ಇನ್ನು ಮುಂದಕ್ಕೆ ಕರ್ನಾಟಕದಲ್ಲಿ ಮುಖ್ಯಮಂತ್ರಿಗಳು ಈಗಾಗಲೇ ತಮ್ಮ ಮುಂಗಡ ಪತ್ರದಲ್ಲಿ ಪ್ರಕಟ ಮಾಡಿರುವಂತೆ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಜೂನ್ ತಿಂಗಳಿನಿಂದ ಪ್ರಾರಂಭ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ಶ್ರೀ ಯಡಿಯೂರಪ್ಪನವರು, ಶ್ರೀ ಕೆ. ಹೆಚ್ ಶ್ರೀನಿವಾಸ್ ಅವರು, ಶ್ರೀ ಜೆ. ಹೆಚ್. ಪಟೇಲರು, ಶ್ರೀ ಬಸವಣ್ಯಪ್ಪನವರು ಪದೇ ಪದೇ ನನ್ನ ಮೇಲೆ ಒತ್ತಡ ತಂದಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ಈ ಬೇಡಿಕೆ ಬಗ್ಗೆ ಮೊದಲು ಮಾತನಾಡಲು ಅವಕಾಶವಾಗಲಿಲ್ಲ. ತಮ್ಮ ಮೂಲಕ ಸನ್ಮಾನ್ಯ ವಿದ್ಯಾಮಂತ್ರಿಗಳಿಗೆ, ಸರ್ಕಾರಕ್ಕೆ ಈ ಸಹ್ಯಾದ್ರಿ ವಿಶ್ವವಿದ್ಯಾನಿಲಯದ ಬಗ್ಗೆ ಅವರು ತೆಗೆದುಕೊಂಡ ನಿರ್ಧಾರವನ್ನು ಸ್ವಾಗತಿಸಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನೂ ಧನ್ಯವಾದ ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ಈ ವಿಶ್ವವಿದ್ಯಾನಿಲಯಕ್ಕೆ ಒಂದು ಹಿನ್ನೆಲೆ ಇದೆ. ಹಲವಾರು ವರ್ಷಗಳಿಂದ ಮಲೆನಾಡಿನ ಬಗಲಿಗೇ ಹೊಂದಿಕೊಂಡಿರುವ ವಿಶ್ವವಿದ್ಯಾನಿಲಯ ಆಗಬೇಕಾಗಿದೆ ಇದು. ಜನಜೀವನದಲ್ಲಿ ಮಿಳಿತವಾಗಿ ಅಲ್ಲಿನ ಜನತೆಯ ಆಶೋತ್ತರಗಳಿಗೆ ಇದು ಕನ್ನಡಿಯಾಗಬೇಕು. ಜನತೆಯ ಮತ್ತು ವಿಶ್ವವಿದ್ಯಾನಿಲಯದ ಮಧ್ಯೆ ತಾದಾತ್ಮ್ಯ ಉಂಟಾಗಬೇಕು. ಆ ವಿಶಿಷ್ಟ ಹಿನ್ನೆಲೆ ಇದರಲ್ಲಿ ಕಂಡು ಬರುವಂತೆ ವಿಶ್ವವಿದ್ಯಾನಿಲಯವನ್ನು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಸಹ್ಯಾದ್ರಿ ಆಯಿತೆಂದು ಹೇಳಿದರು.—ದಾವಣಗೆರೆಗೆ ಸ್ನಾತಕೋತ್ತರ ವಿಶ್ವವಿದ್ಯಾನಿಲಯ ಕೊಡುವ ಬಗ್ಗೆ ಮುಖ್ಯ ಮಂತ್ರಿಗಳೂ, ನೀವೂ ಹೇಳಿದ್ದೀರಿ. ದಯವಿಟ್ಟು ಅದರ ಬಗ್ಗೆಯೂ ಹೇಳಿ.

ಶ್ರೀ ಎಂ ರಘುಪತಿ —ಈಗ ಹೊಸ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ಶ್ರೀನಿವಾಸರು ಮಲೆನಾಡು ಪರಿಸರಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಮತ್ತು ವಿಸ್ತರಣಾ ಕಾರ್ಯಕ್ರಮವನ್ನು ಹೆಚ್ಚಾಗಿ ಆದ್ಯತೆ ಕೊಟ್ಟು ತೆರೆಯಬೇಕೆಂದು ಹೇಳಿದರು. ಈಗಾಗಲೇ ಶಿಕ್ಷಣ ತಜ್ಞರಾದ ಶ್ರೀ ಜಯರಾಮನ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ. ವರದಿ ಕೊಡಲು ಎರಡು ತಿಂಗಳು ಕೊಟ್ಟಿದ್ದೇವೆ. ಅಂದರೆ ಏಪ್ರಿಲ್ ಅಂತ್ಯಕ್ಕೆ ವರದಿ ಕೊಟ್ಟರೆ ಜೂನ್‌ನಲ್ಲಿ ಕಾರ್ಯಾಚರಣೆ ಶುರುಮಾಡಿ ಪ್ರಾರಂಭ ಮಾಡುತ್ತೇವೆ.

ಎರಡನೆಯದಾಗಿ ಹಂಪಿಯಲ್ಲಿ, ಶ್ರೀ ಪ್ರಕಾಶರನ್ನು ನಾನು ನೆನಪು ಮಾಡಿಕೊಳ್ಳಬೇಕು, ಅವರು ಕನ್ನಡ ವಿಶ್ವವಿದ್ಯಾನಿಲಯಕ್ಕಾಗಿ ಒತ್ತಾಯಪಡಿಸುತ್ತಿದ್ದರು. ಮುಖ್ಯಮಂತ್ರಿಗಳೂ ತಮ್ಮ ಮುಂಗಡ ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲಿ ಒಂದು ಕನ್ನಡ ವಿಶ್ವವಿದ್ಯಾನಿಲಯವನ್ನು ಪ್ರಥಮಬಾರಿಗೆ ಕರ್ನಾಟಕ ರಾಜ್ಯದಲ್ಲಿ ಕನ್ನಡಕ್ಕೆ ಆದ್ಯತೆ ಕೊಡಬೇಕು ಎಂದು ಮಾಡಿದ್ದೇವೆ. ಪಾಪ ನಾರಾಯಣ ಕುಮಾರ್ ಇಲ್ಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ನಾರಾಯಣಕುಮಾರ್‌ರವರ ಉಜ್ವಲ ಪರಂಪರೆಯನ್ನು ಕಟ್ಟಿಕೊಂಡು ಹಂಪೆಯಲ್ಲಿ ವಿಶ್ವ ವಿದ್ಯಾಲಯ ಮಾಡಬೇಡಿ. ಕನ್ನಡದ ಬಗ್ಗೆ ಮಾಡಿ.

ಶ್ರೀ ಎಂ. ರಘುಪತಿ.—ಮಾನ್ಯ ನಾರಾಯಣಕುಮಾರ್‌ರವರ ಹೋರಾಟದ ಬಗ್ಗೆ ಯಾವ ಮಾತು ಹೇಳುವಹಾಗೆ ಇಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹೋರಾಟದ ವಿಷಯಕ್ಕೆ ನಾರಾಯಣಕುಮಾರ್‌ರವರನ್ನು ಇಟ್ಟುಕೊಳ್ಳಿ, ಕನ್ನಡದ ವಿಷಯಕ್ಕೆ ಬೇರೆಯವರನ್ನು ಇಟ್ಟುಕೊಳ್ಳಿ.

ಶ್ರೀ ಎಂ ರಘುಪತಿ.—ಮಾನ್ಯ ಸದಸ್ಯರಾದ ಪಂಪಾಪತಿಯವರು ದಾವಣಗೆರೆಯ ಸ್ನಾತಕೋತ್ತರ ಕೇಂದ್ರದ ಬಗ್ಗೆ ಹೇಳಿದ್ದಾರೆ. ಅದಕ್ಕಾಗಿ ಈ ವರ್ಷ ೧೦ ಲಕ್ಷ ರೂಪಾಯಿ ಹಣವನ್ನು ಒದಗಿಸಿದ್ದೇವೆ. ನಮ್ಮ ಇಲಾಖೆಗೆ ಹಣವನ್ನು ಒದಗಿಸಿರುವುದಕ್ಕಾಗಿ ನೀವು ಅಭಿನಂದನೆಗಳನ್ನು ಸಲ್ಲಿಸಬೇಕು.

ಶ್ರೀ ಪಂಪಾಪತಿ.—ದಾವಣಗೆರೆಯಲ್ಲಿದ್ದ ಸ್ನಾತಕೋತ್ತರ ಕೇಂದ್ರವನ್ನು ಮೈಸೂರಿಗೆ ವರ್ಗಾವಣೆ ಮಾಡಲಾಗಿದೆ. ದಾವಣಗೆರೆಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭಿಸುತ್ತೀರಾ ?

ಶ್ರೀ ಎಂ. ರಘುಪತಿ.—ಹೊಸ ವಿಶ್ವವಿದ್ಯಾಲಯ ಪ್ರಾರಂಭವಾಗುತ್ತದೆ. ಅವರ ಬಗ್ಗೆ ಕಾಯಿಂದೆ ಮಾಡುತ್ತೇವೆ. ದಾವಣಗೆರೆಯಲ್ಲಿ ಪಿ.ಜಿ. ಸೆಂಟರ್ ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ದಾವಣಗೆರೆಯಲ್ಲಿ ಸ್ನಾತಕೋತ್ತರ ಕೇಂದ್ರವನ್ನು ತೆರೆಯಬೇಕಾದರೆ ೫೦ ಲಕ್ಷ ರೂಪಾಯಿಗಳನ್ನು ಕೊಡಬೇಕೆನ್ನುವ ಶರತ್ತನ್ನು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಶಿಕ್ಷಣ ಮಂತ್ರಿಗಳು ಹಾಕಿದ್ದರು. ಆ ಪ್ರಕಾರ ೫೦ ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಬಾಪೂಜಿ ವಿದ್ಯಾ ಸಂಸ್ಥೆ ಮುಂದೆ ಬಂದಿದೆ. ಕಟ್ಟಡ ಸಹ ಇದೆ, ಸ್ನಾತಕೋತ್ತರ ಕೇಂದ್ರವನ್ನು ತೆರೆಯಲಿಕ್ಕೆ ಈ ವರ್ಷ ಅನುಮತಿ ಕೊಡುತ್ತೀರೋ ಅಥವಾ ಮುಂದಿನ ವರ್ಷ ಕೊಡುತ್ತೀರೋ !

ಶ್ರೀ ಎಂ. ರಘುಪತಿ.—ಕಟ್ಟಡ ಇದ್ದರೆ ನಾಳೆಯೇ ಪ್ರಾರಂಭ ಮಾಡಲಿ.

ಶ್ರೀ ಕೆ. ಮಲ್ಲಪ್ಪ.—ಶರತ್ತಿಗೆ ಒಪ್ಪಿಕೊಳ್ಳಲಾಗಿದೆಯೆ ?

ಶ್ರೀ ಎಂ. ರಘುಪತಿ.—ನಾನು ಒಪ್ಪಿಕೊಳ್ಳುತ್ತೇನೆ, ತಾವು ಕೆಲಸ ಮಾಡಬೇಕು. ಮಾನ್ಯ ಸದಸ್ಯರುಗಳು ಒತ್ತಾಯ ಮಾಡಿದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಾನು ಆಶ್ವಾಸನೆಯನ್ನು ಕೊಟ್ಟಿದ್ದೇವೆ. ಕಟ್ಟಡವನ್ನು ಕಟ್ಟಲಿಕ್ಕೆ ಪ್ರಯತ್ನ ಮಾಡಲಿ. ಅದನ್ನು ಈಡೇರಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಬಾಪೂಜಿ ವಿದ್ಯಾ ಸಂಸ್ಥೆಯವರು ೫೦ ಎಕರೆ ಭೂಮಿಯನ್ನು ಖರೀದಿ ಮಾಡಿ ಇಟ್ಟಿದ್ದಾರೆ. ಅವರು ಹಣವನ್ನು ಕೊಡುತ್ತಾರೆ. ತಾವು ಒಪ್ಪಿಗೆ ಕೊಟ್ಟರೆ ಸಾಕು.

ಶ್ರೀ ಎಂ. ರಘುಪತಿ.—ಇದು ಸಚಿವ ಸಂಪುಟದ ಮುಂದೆ ಬರುತ್ತದೆ ನಾವು ಒಪ್ಪಿಗೆ ಕೊಡುತ್ತೇವೆ ನಾವೇನು ಆಶ್ವಾಸನೆಯನ್ನು ಕೊಟ್ಟಿದ್ದೇವೆ ಅದನ್ನು ಈಡೇರಿಸುತ್ತೇವೆ. ೫೦ ಲಕ್ಷ ರೂಪಾಯಿ ಮತ್ತು ಕಟ್ಟಡ ಒದಗಿಸಿ ಕೊಟ್ಟರೆ ಅದನ್ನು ಈಡೇರಿಸುತ್ತೇವೆ.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿ ಹೇಳಲಿಲ್ಲ. ಬಾಪೂಜಿ ವಿದ್ಯಾ ಸಂಸ್ಥೆಯವರು ಬರೆದುಕೊಡಿ ಎಂದು ಹೇಳಿದ್ದಾರೆ. ಆ ಪ್ರಕಾರ ಅವರು ಕಮಿಟಿಯಲ್ಲಿಟ್ಟು ತೀರ್ಮಾನ ಮಾಡಿ ಬರೆದು ಕೊಟ್ಟಿದ್ದಾರೆ.

ಶ್ರೀ ಎಂ. ರಘುಪತಿ.—ಬರವಣಿಗೆಯಲ್ಲಿದ್ದರೆ ಸಾಕಾ ? ಅದನ್ನು ಕಾರ್ಯ್ಯಚರಣೆ ಮಾಡಬೇಕು

ಶ್ರೀ ಪಂಪಾಪತಿ.—ನಂಬಿಕೆ ಬೇಕು. ದಾವಣಗೆರೆಯಲ್ಲಿ ಈಗಾಗಲೇ ಸ್ನಾತಕೋತ್ತರ ಕೇಂದ್ರವನ್ನು ಪ್ರಾರಂಭ ಮಾಡಿದ್ದು ಆದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ೫೦ ಲಕ್ಷ ಕೊಡಬೇಕೆಂದ ಹೇಳಿದಾಗ, ಬಾಪೂಜಿ ವಿದ್ಯಾ ಸಂಸ್ಥೆಯವರು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಅವರು ಸಮಿತಿಯಲ್ಲಿ ತೀರ್ಮಾನ ಮಾಡಿ ತಮಗೆ ಬರೆದು ಕೊಟ್ಟಿದ್ದಾರೆ. ಆ ಒಂದು ಆಧಾರದ ಮೇಲೆ ದಾವಣಗೆರೆಯಲ್ಲಿ ಹಣ ಸಂಗ್ರಹಣೆ ಮಾಡಿ ಕೊಡುವುದಕ್ಕೆ ತಯಾರಾಗಿದ್ದಾರೆ.

ಶ್ರೀ ಎಂ. ರಘುಪತಿ.—ನಾನು ಹೇಳುತ್ತಿರುವುದು ಮಾನ್ಯ ಪಂಪಾಪತಿಯವರನ್ನು ಬಿಟ್ಟು ಎಲ್ಲರಿಗೂ ಅರ್ಥವಾಗುತ್ತದೆ, ಅನುಮತಿಯನ್ನು ಕೊಡುತ್ತೇವೆ. ಹಣ ಬೇಕು ಪ್ರತಿ ವರ್ಷ ೧೦ ಲಕ್ಷ ೨೦ ಲಕ್ಷ ಈ ತರಹ ಡಿಪಾಸಿಟ್ ಮಾಡಿಕೊಂಡು ಬನ್ನಿ. ನಿಮಗೂ ಸುಲಭವಾಗುತ್ತದೆ. ವಿಶ್ವ ವಿದ್ಯಾಲಯದಲ್ಲಿ ಪ್ರವೇಶದ ಒತ್ತಡವನ್ನು ಕಡಿಮೆ ಮಾಡಬೇಕು, ಉನ್ನತ ವ್ಯಾಸಂಗ ಮಾಡಬೇಕೆನ್ನುವ ವಿದ್ಯಾರ್ಥಿಗಳಿಗೆ ಸದಾವಕಾಶ ಸಿಗಬೇಕು. ವಿದ್ಯಾಭ್ಯಾಸ ಮಾಡಿ ದೇಶದ ಪ್ರಗತಿಗೆ ಅವರ ಕೊಡುಗೆ ಸಿಗಬೇಕೆನ್ನುವ ದೃಷ್ಟಿಯಿಂದ ತೆರೆದ ವಿಶ್ವವಿದ್ಯಾಲಯವನ್ನು ಮಾಡಲಿಕ್ಕೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಡಾ. ಸಿ. ಎನ್. ಆರ್. ರಾವ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಲಾಗಿದೆ, ಕೇಂದ್ರ ಸರ್ಕಾರದವರು ಶ್ರೀಮತಿ ಇಂದಿರಾ ಗಾಂಧಿಯವರ ಹೆಸರಿನಲ್ಲಿ ತೆರೆದ ವಿಶ್ವ ವಿದ್ಯಾಲಯವನ್ನು ಸ್ಥಾಪನೆ ಮಾಡುತ್ತಿದ್ದಾರೆ. ಅದಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ಒಂದು ತೆರೆದ ವಿಶ್ವ ವಿದ್ಯಾಲಯವನ್ನು ಪ್ರಾರಂಭ ಮಾಡಬೇಕೆಂದು ಇದ್ದೇವೆ. ಆ ವಿಶ್ವ ವಿದ್ಯಾಲಯಕ್ಕೆ ಪೂಜ್ಯ ಗಾಂಧೀಜಿಯವರ ನೆನಪಿನಲ್ಲಿ ' ಬಾಪೂಜಿ ತೆರೆದ ವಿಶ್ವ ವಿದ್ಯಾಲಯ ' ಎಂಬ ಹೆಸರಿನಲ್ಲಿ ಕರ್ನಾಟಕದಲ್ಲಿ ಮಾಡಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇವೆಂದು ಮಾನ್ಯ ಸಭೆಗೆ ತಿಳಿಸುತ್ತೇನೆ. ತೆರೆದ ವಿಶ್ವ ವಿದ್ಯಾನಿಲಯ ಮಾಡುವುದು ಅಷ್ಟೇ ಅಲ್ಲ, ತೆರೆದ ಶಾಲೆಗಳನ್ನು ಸಹ ಪ್ರಾರಂಭ ಮಾಡಬೇಕೆಂದು ಇದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ರಾಜ್ಯದಲ್ಲೆಲ್ಲಾ ತೆರೆದ ಶಾಲೆಗಳೇ ಇವೆ.

ಶ್ರೀ ಎಂ. ರಘುಪತಿ.—ಬಾಯಿಯಲ್ಲಿ ಪಾಠ ಹೇಳುವುದಲ್ಲ, ಅಂಚೆ ಮೂಲಕ ನಡೆಸುವಂತಹವು. ಶಿಕಾರಿಪುರದಲ್ಲಿ ಜೂನಿಯರ್ ಕಾಲೇಜು ಕಟ್ಟಡವನ್ನು ಕಟ್ಟಿಸಲಾಗುತ್ತದೆ. ತೆರೆದ ಶಾಲೆಗಳು ಅಂದರೆ, ಬೇರೆ ಬೇರೆ ವಿಷಯಗಳಲ್ಲಿ ತರಬೇತಿಯನ್ನು ಪಡೆದುಕೊಂಡು ಕೆಲಸಗಳಿಗೆ ಸೇರಿಸಿಕೊಂಡಿರುತ್ತಾರೆ ೭ನೇ ತರಗತಿಯವರೆಗೆ ಓದಿ ಯಾವುದೋ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ ಅಂತಹವರು ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಂಡರೆ ಅಂತಹವರಿಗೆ ವಿಶೇಷ ತರಗತಿಗಳನ್ನು ಏರ್ಪಾಡು ಮಾಡಲಾಗುತ್ತದೆ. ಅಂತಹವರಿಗೆ ಅನುವು ಮಾಡಿಕೊಡಬೇಕೆಂದು ತೆರೆದ ಶಾಲೆಗಳನ್ನು ಪ್ರಾರಂಭ ಮಾಡಬೇಕೆಂದು ಇದ್ದೇವೆ. ಕರ್ನಾಟಕ ರಾಜ್ಯದಲ್ಲಿ ಇಂತಹ ಶಾಲೆಗಳನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ತಾಂತ್ರಿಕ ವಿದ್ಯಾಭ್ಯಾಸದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ರಾಜ್ಯದಲ್ಲಿರುವ ಇಂಜಿನಿಯರಿಂಗ್ ಕಾಲೇಜುಗಳ ಅಂಕಿಅಂಶಗಳನ್ನು ಹೇಳುವುದಾದರೆ ಸುಮಾರು ೪೭ ಇಂಜಿನಿಯರಿಂಗ್ ಕಾಲೇಜುಗಳಿವೆ. ಆ ಕಾಲೇಜುಗಳಲ್ಲಿ ೧೨ ಸಾವಿರ ವಿದ್ಯಾರ್ಥಿಗಳು ನೋಂದಾವಣೆ ಮಾಡಿಕೊಂಡು ಕಲಿಯುತ್ತಿದ್ದಾರೆ. ಈ ವರ್ಷದಲ್ಲಿ ಕರ್ನಾಟಕ ರಾಜ್ಯದ ೬ ಸಾವಿರ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕಿದೆ. ಅಂದರೆ ಕ್ಯಾಪಿಟೇಶನ್ ಶುಲ್ಕ ಇಲ್ಲದೆ ಶೇಕಡ ೫೦ ರಷ್ಟು ಅಚೀವ್ ಮಾಡಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸದಸ್ಯರಾದ ಸೊರಕೆಯವರು ಹೇಳಿದ್ದಾರೆ. ಹಿಂದಿನ ಅಂಕಿಅಂಶಗಳನ್ನು ಓದಿ

ಹೇಳಿ ಅಂದರೆ ಓದಿ ಹೇಳುತ್ತೇನೆ. ೧೯೮೩ ರವರೆಗೆ ಶೇಕಡ ೨೦ ರಷ್ಟು ಸೀಟುಗಳನ್ನು ಕೊಟ್ಟಿರಲಿಲ್ಲ. ಇವತ್ತು ಶೇಕಡ ೫೦ ರಷ್ಟು ಸೀಟುಗಳನ್ನು ನಾವು ಕೊಟ್ಟಿದ್ದೇವೆ, ಅದರ ಬಗ್ಗೆ ಕೋರ್ಟಿನಲ್ಲಿ ವಾದ ವಿವಾದಗಳು ನಡೆಯುತ್ತಿವೆ. ಕೋರ್ಟಿನ ತೀರ್ಪಿಗೋಸ್ಕರ ಕಾಯುತ್ತಿದ್ದೇವೆ. ಮಾರ್ಚಿ ತಿಂಗಳ ಅಂತ್ಯದಲ್ಲಿ ನಾವು ನಮ್ಮ ನೀತಿಯನ್ನು ಘೋಷಣೆ ಮಾಡುತ್ತೇವೆ. ೬ ಸಾವಿರ ವಿದ್ಯಾರ್ಥಿಗಳನ್ನು ಸೇರಿಸಿ ಕೊಳ್ಳುತ್ತೇವೆ, ಅದರಲ್ಲಿ ೫ ಸಾವಿರ ವಿದ್ಯಾರ್ಥಿಗಳು ಹೊರ ರಾಜ್ಯಗಳಿಂದ ಬಂದವರು. ನಮ್ಮ ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಅನುಕೂಲ ಸಿಗಬೇಕು. ಹೆಚ್ಚಿನ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತದೆ. ಅದಕ್ಕನುಗುಣವಾಗಿ ಹೊಸ ನೀತಿಯನ್ನು ಘೋಷಣೆ ಮಾಡುತ್ತೇವೆ. ಇದು ಜಟಿಲವಾದ ಸಮಸ್ಯೆ ಅದರ ಬಗ್ಗೆ ಹೆಚ್ಚಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ವರ್ಷ ತಾಂತ್ರಿಕ ಶಾಲೆಗಳನ್ನು ಏನು ಕೊಡಬೇಕೆಂದು ಇದ್ದೇವೆ ಅದರಲ್ಲಿ ನೂರಕ್ಕೆ ೬೦ ರಷ್ಟು ಶಾಲೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ವೃತ್ತಿಪರ ಶಿಕ್ಷಣವನ್ನು ನಾವು ಈ ವರ್ಷದಿಂದ ಸಾವಿರ ಶಾಲೆಗಳಲ್ಲಿ ಪ್ರಾರಂಭ ಮಾಡುತ್ತೇವೆ. ಖಾಸಗಿ ವಲಯಗಳಲ್ಲಿ ೬೦೦ ಶಾಲೆಗಳಲ್ಲಿ ಮತ್ತು ಸರ್ಕಾರಿ ವಲಯಗಳಲ್ಲಿ ೪೦೦ ಶಾಲೆಗಳಲ್ಲಿ ೮ನೇ ತರಗತಿಯಿಂದ ವೃತ್ತಿಪರ ಶಿಕ್ಷಣವನ್ನು ನಾವು ಪ್ರಾರಂಭ ಮಾಡುತ್ತೇವೆ. ತಮಗೆ ಹೇಳಬೇಕೆಂದರೆ, ಭಾರತ ಸರ್ಕಾರವು ನಮ್ಮ ಕಾರ್ಯಕ್ರಮವನ್ನು ಮೆಚ್ಚಿಕೊಂಡು ಈ ಕಾರ್ಯಕ್ರಮವನ್ನು ಕಳುಹಿಸಿಕೊಡಿ ಎಂದು ಪತ್ರ ಬರೆದಿದ್ದಾರೆ. ನಾವು ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತಿದ್ದೇವೆ, ಇದರಲ್ಲಿನ ಪುಸ್ತಕ ವಿತರಣೆ, ಬಟ್ಟೆ ವಿತರಣೆ ಮತ್ತು ವಿದ್ಯಾ ವಿಕಾಸ ಯೋಜನೆ ಬರುತ್ತವೆ, ಈಗ ಈ ಕಾರ್ಯಕ್ರಮವನ್ನು ಕೇಂದ್ರ ವಿದ್ಯಾ ಮಂತ್ರಿಗಳು ಇತರ ಭಾಗಗಳಿಗೂ ಇದನ್ನು ಅನ್ವಯಿಸಲು ಅನು ಕೂಲವಾಗುವ ಸಾಧ್ಯಾಸಾಧ್ಯತೆಗಳನ್ನು ಸ್ಟಡಿ ಮಾಡುತ್ತೇವೆ. ಈ ಕಾರ್ಯಕ್ರಮವನ್ನು ಕಳಿಸಿಕೊಡಿ ಎಂದು ಹೇಳಿದರು. ಈ ವೃತ್ತಿಪರ ಶಿಕ್ಷಣದಲ್ಲಿ ಅಗ್ರಿಕಲ್ಚರಲ್, ಇಂಡಸ್ಟ್ರಿಯಲ್, ಮತ್ತು ಕಾಮರ್ಸ್‌ಗೆ ಸಂಬಂಧಪಟ್ಟಂತೆ ತರಬೇತಿ ಇರುತ್ತದೆ. ಇಲ್ಲಿ, ಫಲಾನುಭವಿಗಳು ಯಾರಿದ್ದಾರೆ, ಅವರನ್ನು ಯೂನಿ ವರ್ಸಲ್ ಸೆಕ್ಟರ್‌ನಲ್ಲಿ ಇನ್‌ವಾಲ್ವ್ ಮಾಡಿ, ಈ ಕಾಲೇಜುಗಳಲ್ಲಿ ಪ್ರವೇಶದ ಒತ್ತಡವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತೇವೆ. ಪ್ರತಿಯೊಬ್ಬರೂ, ಸ್ವಾವಲಂಬಿಗಳಾಗಿ, ತಮ್ಮ ಕಾಲ ಮೇಲೆ ತಾವೇ ನಿಂತುಕೊಳ್ಳುವುದಕ್ಕೆ, ಈ ದೇಶದ ಪ್ರಗತಿಗನುಗುಣವಾಗಿ, ಮತ್ತು ನಮ್ಮ ಆರ್ಥಿಕ ಪರಿಸ್ಥಿತಿ ಏನಿದೆ, ಅದಕ್ಕನುಗುಣವಾಗಿ ನಾವು ಜಾರಿಗೆ ತರಬೇಕೆಂದು ಈ ಯೋಜನೆಯನ್ನು ಕಾರ್ಯಾಚರಣೆ ಮಾಡು ತ್ತಿದ್ದೇವೆ. ಅಧ್ಯಕ್ಷರೇ, ಈ ಸಂದರ್ಭದಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಗಳನ್ನು ಈ ವರ್ಷದ ಮಾರ್ಚ್ ೨೪ನೇ ತಾರೀಖಿನಿಂದ ಪ್ರಾರಂಭ ಮಾಡುತ್ತಿದ್ದೇವೆ. ಮಾರ್ಚ್ ತಿಂಗಳಲ್ಲಿ ಏತಕ್ಕೆ ನಡೆಸುತ್ತಿದ್ದೇವೆ ಎಂದರೆ, ಇನ್ನು ಮುಂದಕ್ಕೆ ಯಾವುದೇ ಎಂದು ಕಾಂಪಿಟೇಟಿವ್ ಪರೀಕ್ಷೆಗಳಿಗೆ ಹೋಗಲು, ಅಥವಾ ಎಂಟ್ರೆನ್ಸ್ ಪರೀಕ್ಷೆಗೆ ಹೋಗಲು ಅನುಕೂಲವಾಗುತ್ತದೆ, ಮತ್ತು ಪಿಯುಸಿ ಪರೀಕ್ಷೆಗಳು ಏಪ್ರಿಲ್ ೧೫ ರೊಳಗೆ ನಡೆಸಿ ಮೇ ತಿಂಗಳಲ್ಲಿ ಫಲಿತಾಂಶವನ್ನು ಪ್ರಕಟಣೆ ಮಾಡುತ್ತೇವೆ. ಇನ್ನು ಕಾಂಪಿಟೇಟಿವ್ ಪರೀಕ್ಷೆಗಳಗೆ ಮತ್ತು ಮೆಡಿಕಲ್ ಇಂಜಿನಿಯರಿಂಗ್ ಪ್ರವೇಶ ಕೋರಬಯಸುವವರಿಗೆ ಅನುಕೂಲವಾಗಲು ಈ ಪರೀಕ್ಷೆಗಳನ್ನು ಪ್ರಪ್ರಥಮವಾಗಿ ಮಾರ್ಚ್ ತಿಂಗಳಿನಲ್ಲಿ ನಡೆಸುತ್ತಿದ್ದೇವೆ. ಪರೀಕ್ಷೆಗಳು ತಡವಾಗಿ ನಡೆಯುವುದರಿಂದ ತುಂಬಾ ತೊಂದರೆಯಾಗಿದೆ ಎಂದು ವಿದ್ಯಾರ್ಥಿಗಳು ಮತ್ತು ತಂದೆ-ತಾಯಿಗಳಿಂದ ದೂರುಗಳು ಬಂದುದರಿಂದ ಮಾರ್ಚ್ ತಿಂಗಳಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಇನ್ನು ನಾನು ನೊಂದ ಮನಸ್ಸಿನಿಂದ ಒಂದು ವಿಚಾರ ಹೇಳುತ್ತೇನೆ, ಹೋದ ವರ್ಷ ಪ್ರಶ್ನೆ ಪತ್ರಿಕೆಗಳು ಬಹಿರಂಗವಾದವು. ಆದರೆ, ಈ ವರ್ಷ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗದಿರುವಂತೆ ಹಲವಾರು ಕ್ರಮಗಳನ್ನು ತೆಗೆದು ಕೊಂಡಿದ್ದೇವೆ. ಯಾರು ಕಷ್ಟಪಟ್ಟು ಓದಿರುತ್ತಾರೋ ಅಂಥವರಿಗೆ ತುಂಬಾ ಅನ್ಯಾಯವಾಗುವುದನ್ನು ತಡೆಗಟ್ಟುವುದಕ್ಕಾಗಿ, ಅದನ್ನು ತಪ್ಪಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅಷ್ಟೇ ಅಲ್ಲ, ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ಬಗ್ಗೆ ಡಾ. ಹೆಚ್. ನರಸಿಂಹಯ್ಯನವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ತಾವು, ಓದಿದ್ದೀರಿ. ಅದರಲ್ಲಿ ಅನೇಕ ಸಲಹೆಗಳಿವೆ. ಅದನ್ನು ಈ ಸದನದಲ್ಲಿ ಹೇಳುವುದಕ್ಕೆ ಆಗಲಿಲ್ಲ. ತಾವು ಆ ಬಗ್ಗೆ ಏನಾದರೂ ಸಲಹೆಗಳನ್ನು ನನಗೆ ಬರೆದು ಕಳುಹಿಸಿದರೆ, ಮತ್ತು ಫೀಸ್ ಬಗ್ಗೆ ಯೂ ಭರತ್ ಕಮಿಟಿ ವರದಿಯೂ ಬಂದಿದೆ. ಅದರಲ್ಲಿ ಏನಾದರೂ ಲೋಪ ದೋಷಗಳಿದ್ದಲ್ಲಿ, ತಾವು ತಿಳಿಸಿದರೆ, ಅದನ್ನು ಸರಿ ಮಾಡುತ್ತೇವೆಂದು ತಿಳಿಸುತ್ತೇನೆ. ಮತ್ತು

ವಿದ್ಯಾರ್ಥಿಗಳಿಂ ಕಾಪಿ ಹೊಡೆಯುವ ಪದ್ಧತಿಯನ್ನು ತಡೆಗಟ್ಟಲು, ಈ ವರ್ಷ ಅನೇಕ ಬಿಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅಷ್ಟೇ ಅಲ್ಲ, ಸಾಧ್ಯವಾದರೆ ಒಂದು ಕಾನೂನನ್ನು ಜಾರಿಗೆ ತರುತ್ತೇವೆ. ಕಾಪಿ ಹೊಡೆಯುವುದಾಗಲಿ, ಅಥವಾ ಕಾಪಿ ಹೊಡೆಯಲು ಪ್ರೋತ್ಸಾಹ ಕೊಡುವುದೇ ಆಗಲಿ ಮಾಡಿದರೆ, ಅದಕ್ಕೆ ಒಂದು ಕಾನೂನು ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡಲು ಸರ್ಕಾರ ಹಿಂಜರಿಯುವುದಿಲ್ಲ. ಏಕೆಂದರೆ, ಈ ಕಾಪಿಯಿಂದ ಕಷ್ಟಪಟ್ಟು ಓದಿದಂತಹ ವಿದ್ಯಾರ್ಥಿಗಳಿಗೆ ಬಹಳ ಅನ್ಯಾಯವಾಗುತ್ತದೆ, ಅಲ್ಲದೆ, ವಿದ್ಯಾರ್ಥಿಗಳಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ದಯವಿಟ್ಟು ಇಂಥವುಗಳಿಗೆ ಅವಕಾಶ ಕೊಡಬೇಡಿ, ಎಂದು. ಕಾಪಿ ಪದ್ಧತಿಗೆ ಪ್ರೋತ್ಸಾಹ ಕೊಡಬೇಡಿ. ಈ ಬಗ್ಗೆ ಸರ್ಕಾರ ಉಗ್ರ ಕ್ರಮ ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಡಿ ಎಂದೂ ಕೋರುತ್ತೇನೆ. ಮತ್ತು ಕಾಲೇಜುಗಳಲ್ಲಿ ಚುನಾವಣೆಗಳನ್ನು ನಡೆಸಬೇಕೆಂದು ಹೇಳಿದ್ದಾರೆ. ನಾನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಉಳ್ಳವನು. ಆದರೆ, ಶಾಲಾ ಕಾಲೇಜುಗಳ ಚುನಾವಣೆಯಲ್ಲಿ ಚಾಕು ಚೂರಿ ಸಂಸ್ಕೃತಿ ಶುರುವಾಗುತ್ತಿದೆ.

ಶ್ರೀ ವಿನಯಕುಮಾರ್ ಸೊರಕೆ.—— xxx xxx xxx

ಶ್ರೀ ಎಂ. ರಘುಪತಿ.——ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ, ಅಂತಹ ಒಂದೇ ಒಂದು ಘಟನೆ ನಡೆದಿದ್ದರೆ, ತಿಳಿಸಿ. ನಾನು ಮನೆಗೆ ಹೋಗಲು ತಯಾರಾಗಿದ್ದೇನೆ. ನಮ್ಮ ನಾಯಕರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದಾಗ ನಾನಿನ್ನೂ ಕಣ್ಣು ಬಿಟ್ಟಿರಲಿಲ್ಲ. ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ ನೀವು ಕಣ್ಣುಬಿಟ್ಟಿರಲಿಲ್ಲ. ವಿಶ್ವವಿದ್ಯಾನಿಲಯಕ್ಕೆ ಹೋಗಿ ಕೇಳಿಕೊಂಡು ಬನ್ನಿ. ಅಧ್ಯಕ್ಷರೆ, ಅವರು ಹೊಸಬರು. ಅವರಿಗೆ ತಾವು ಸ್ವಲ್ಪ ಬುದ್ಧಿವಾದ ಹೇಳಿ. ನಾವು ಚಾಕು ಚೂರಿ ಸಂಸ್ಕೃತಿಯನ್ನು ತಡೆದುಹಾಕಿದ್ದೇವೆ.

ಶ್ರೀ ರಮೇಶ್ ಕುಮಾರ್.——ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾನ್ಯ ಮಂತ್ರಿಗಳ ಮೇಲೆ ಇಲ್ಲದ ಆಪಾದನೆ ಮಾಡಿದ್ದಾರೆ. ಇದು ಸಣ್ಣ ವಿಚಾರವಲ್ಲ. ಸದನ ನಡೆಯುತಕ್ಕಂತಹ ಸಂದರ್ಭದಲ್ಲಿ ಯಾರೇ ಸದಸ್ಯರೂ ತಮ್ಮ ಮೇಲೆ ನಿಯಂತ್ರಣ ಇಟ್ಟುಕೊಳ್ಳಬೇಕಾಗುತ್ತದೆ. ಅವರು ಹೇಳಿದ್ದು ಕಡತದೊಳಕ್ಕೆ ಹೋಗಿದೆ.

ಅಧ್ಯಕ್ಷರು.——ನಾನು ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಬಸವಲಿಂಗಪ್ಪ.——ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿರತಕ್ಕ ಸದಸ್ಯರೇನಿದ್ದಾರೆ, ಯಾರೇ ಆಗಲಿ ಅವರ ಮೇಲೆ ಆಪಾದನೆ ಮಾಡಿದರೆ, ಯಾರೇ ಆಗಲಿ ಅದನ್ನು ಸ್ಥಿರವಾಗಿ ರುಜುವಾತು ಮಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ ——ರುಜುವಾತು ಮಾಡದೆ ಹೋದರೆ ನೇರವಾಗಿ ನೀವು ಎಂಥವರು ಎಂಬತಕ್ಕಂಥ ಆಪಾದನೆ ಮಾಡುವುದು ಯಾವ ಪಕ್ಷಕ್ಕೂ ಸರಿಯಲ್ಲ. ಆದ್ದರಿಂದ ನಾವು ಮಾಡಿದ್ದೂ ಸರಿಯಲ್ಲ, ನೀವು ಮಾಡಿದ್ದೂ ಸರಿಯಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.——ಮಾನ್ಯ ಸಚಿವರು ಬಹಳ ಸಮಾಧಾನದಿಂದ ಉತ್ತರಿಸಬೇಕು, ಆಗ ಎಲ್ಲಾ ಸರಿ ಹೋಗುತ್ತದೆ. ಚಾಕು ಚೂರಿ ಸಂಸ್ಕೃತಿ ವಿಚಾರ ಎತ್ತಿದಿರಿ. ಅದು ಬಹಳ ಸೆನ್ಸಿಟಿವ್ ಪಾಯಿಂಟ್. ಯಾರು ಏನು ಮಾಡಿದ್ದರೂ ಅದನ್ನು ನಿಲ್ಲಿಸಬೇಕು. ಇದಕ್ಕೆ ನಾವು ನಿಮ್ಮ ಜೊತೆಯಲ್ಲಿದ್ದು ಸಹಕರಿಸುತ್ತೇವೆ. ಆ ಶಬ್ದವನ್ನು ಉಚ್ಛಾರ ಮಾಡದಿದ್ದರೆ ಉದ್ರೇಕಗೊಳ್ಳುತ್ತಿರಲಿಲ್ಲ. ಅವರು ಹೇಳಿದ್ದು ಸರಿ ಎಂದು ಅಲ್ಲ ಅಥವಾ ನೇರವಾಗಿ ಆಪಾದನೆ ಮಾಡಬೇಕೆಂದೂ ಅಲ್ಲ. ಚಾಕುಚೂರಿ ಸಂಸ್ಕೃತಿಯ ಬಗ್ಗೆ ಪಕ್ಷದ ಅಭ್ಯರ್ಥಿಯಾಗಿ ಹೇಳಿರಬಹುದು. ಆ ಉದ್ದೇಶದಿಂದ ಖಂಡಿತಾ ಹೇಳತಕ್ಕದ್ದು ಅಲ್ಲ. ಕೊನೆಯವರೆಗೆ ಜಾಗ್ರತೆ ಮಾಡಿದಿರಿ, ಇನ್ನು ಅಪವಾದ ಮಾಡುವುದಕ್ಕೆ ಹೋದರೆ ಹೇಗೆ ಆಗುತ್ತದೆ ?

ಶ್ರೀ ಎಂ. ರಘುಪತಿ.——ಹಲವಾರು ಸದಸ್ಯರು ಪ್ರಮುಖವಾಗಿ ವಿದ್ಯಾರ್ಥಿಗಳಲ್ಲಿ ರ್‍ಯಾಗಿಂಗ್ ಮತ್ತಿತರ ಚಟುವಟಿಕೆಗಳು ಜಾಸ್ತಿಯಾಗುತ್ತಿವೆ ಎಂದರು. ಸ್ಟೂಡೆಂಟ್ಸ್ ಕನ್‌ಸಲ್ಟಿಂಗ್ ಸೆಂಟರ್ಸ್ ಎಂದು ಮಾಡುತ್ತಿದ್ದೇವೆಂದು ಈ ಸದನದಲ್ಲೇ ಹೇಳಿದ್ದೇನೆ. ಈಗಾಗಲೇ ಒಂದು ಕಾರ್ಯಕ್ರಮವನ್ನು

---

xxx Expeunged as ordered by the Chair.

ಆ ಬಗ್ಗೆ ನಿರೂಪಣೆ ಮಾಡಿದ್ದೇವೆ. ಅದಕ್ಕೋಸ್ಕರ ನಾರಾಯಣ ರೆಡ್ಡಿಯವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ ಕಾಲೇಜ್ ಲೆಕ್ಚರರ್ಸ್ ಅನ್ನು ಅಲ್ಲಿ ಕಳುಹಿಸಿ ಅವರಿಗೆ ತರಬೇತಿ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಕಾಲೇಜ್ ವಿದ್ಯಾರ್ಥಿಗಳಲ್ಲಿ ಈ ರ್‍ಯಾಗಿಂಗ್ ಪ್ರವೃತ್ತಿ ದಿನೇ ದಿನೇ ಬೆಳೆಯುತ್ತಿದೆ. ಇದು ಬೆಳೆಯ ಕೂಡದು. ಇದರಿಂದ ಉತ್ತಮ ವಾತಾವರಣ ಸೃಷ್ಟಿಯಾಗುವುದಿಲ್ಲ. ಅವರು ವಾತಾವರಣವನ್ನು ಕಲುಷಿತಗೊಳಿಸುತ್ತಾರೆಂದು ಮನವರಿಕೆಯಾಗಿ ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದ್ದೇವೆ. ಒಂದೊಂದು ವಿಶ್ವ ವಿದ್ಯಾಲಯದಲ್ಲೂ ೫–೫ ಕೇಂದ್ರಗಳನ್ನು ಪ್ರಾರಂಭ ಮಾಡುತ್ತಿದ್ದೇವೆ

ಅಧ್ಯಕ್ಷರು.—ಮಂತ್ರಿಗಳು ಮಧ್ಯದಲ್ಲಿ ಯಾವ ಸದಸ್ಯರಿಗೂ ಈಲ್ಡ್ ಆಗಬಾರದು ಈ ತರಹ ಆದರೆ ಎರಡು ತಾಸು ಆದರೂ ಮುಗಿವುದಿಲ್ಲ.

ಶ್ರೀ ಎಂ. ರಘುಪತಿ.—ಒಂದೊಂದು ವಿಶ್ವವಿದ್ಯಾನಿಲಯದಲ್ಲೂ ಐದೈದು ಎಂದರೆ ಒಟ್ಟು ೨೫ ಸ್ಟೂಡೆಂಟ್ಸ್ ಕನ್‌ಸಲ್ಟಿಂಗ್ ಸೆಂಟರುಗಳನ್ನು ಪ್ರಾರಂಭಿಸುತ್ತೇವೆ. ೨೫ ಜನರನ್ನು ತರಬೇತಿಗೆ ಕಳುಹಿಸಲು ಏರ್ಪಾಡು ಮಾಡಿದ್ದೇವೆ. ಇಂಥ ವಾತಾವರಣದಲ್ಲಿ ಕೆಲವು ವಿದ್ಯಾ ಸಂಸ್ಥೆಗಳ ಬೆಳೆವಣಿಗೆ ಕುಂಠಿತವಾಗಿದೆ ಎಂದು ಆಗಾಗ ನಮಗೆ ದೂರು ಬರುತ್ತಿದೆ. ಆ ಕಾರಣದಿಂದ ಕರ್ನಾಟಕ ರಾಜ್ಯದಲ್ಲಿ ಈ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಆ ಕಾರ್ಯಕ್ರಮದ ಪ್ರಕಾರ ಯಾವ ವಿದ್ಯಾ ಸಂಸ್ಥೆಗಳು ಉನ್ನತ ಗುಣ ಮಟ್ಟವನ್ನು ಕಾಪಾಡಿಕೊಂಡು ಬಂದಿವೆ, ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬೇಕೆಂದು ಹಲವಾರು ವರ್ಷಗಳಿಂದ ಯಾವ ವಿದ್ಯಾ ಸಂಸ್ಥೆಗಳು ದುಡಿದುಕೊಂಡು ಬಂದಿವೆ ಅಂಥ ವಿದ್ಯಾ ಸಂಸ್ಥೆಗಳನ್ನು ಅಟಾನಮಸ್ ಇನ್‌ಸ್ಟಿಟ್ಯೂಷನ್‌ಗಳಾಗಿ ಪರಿವರ್ತನೆ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನು ಸ್ವಲ್ಪ ವಿವರಿಸಿ ಹೇಳಿ. ಅಟಾನಮಸ್ ಶಾಲೆಗಳು ಎಂದು ಹೊಸದಾಗಿ ಮಾಡುತ್ತಿದ್ದೀರಿ. ಆಮೇಲೆ ಅವರು ಅವರ ಮಟ್ಟಿಗೇ ಇರುತ್ತಾರೆ. ಸರ್ಕಾರಕ್ಕೂ ಕೇಳುವುದಿಲ್ಲ, ಬೇರೆಯವರಿಗೂ ಕೇಳುವುದಿಲ್ಲ.

ಶ್ರೀ ಎಂ, ರಘುಪತಿ.—ಅಟಾನಮಸ್ ಮಾಡತಕ್ಕ ಉದ್ದೇಶ ಏನೆಂಬುದು ಕೇಂದ್ರದ ಮಂತ್ರಿ ಮಂಡಲದ ಸಭೆಯಲ್ಲಿ ಚರ್ಚೆಯಾಯಿತು. ಅಟಾನಮಸ್ ಕಾಲೇಜ್ ಮಾಡುವುದು ಒಳ್ಳೆಯದೆಂದು ಕೇಂದ್ರದ ವಿದ್ಯಾ ಮಂತ್ರಿಗಳು ನರಸಿಂಹರಾವ್ ಅವರಿಗೆ ಸೂಚನೆ ಕೊಟ್ಟರು. ಅಟಾನಮಸ್ ಕಾಲೇಜ್ ಎಂದರೂ ಪರೀಕ್ಷೆಯನ್ನು ನಡೆಸುವ ಅಧಿಕಾರ, ನಿಯಂತ್ರಣ ವಿಶ್ವವಿದ್ಯಾನಿಲಯದ ಕೈಯಲ್ಲಿರುತ್ತದೆ. ಅವರು ವಿದ್ಯಾರ್ಥಿಗಳ ಸಂಖ್ಯೆ ಎಷ್ಟಿರಬೇಕು, ವಿದ್ಯಾರ್ಥಿ ಶಿಕ್ಷಕರ ರೇಷಿಯೋ ಎಷ್ಟಿರಬೇಕೆಂದು ನಿಗದಿ ಮಾಡುತ್ತಾರೆ. ಅಡ್ಮಿನಿಸ್ಟ್ರೇಟಿವ್ ರೂಲ್ಸ್ ರಿಸರ್ವೇಷನ್, ಬ್ಯಾಂಕ್ ವರ್ಡ್ ಕ್ಲಾಸ್, ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಇವರಿಗೆ ಅನುಕೂಲವಾಗುವ ರೀತಿಯಲ್ಲಿ ಅದಕ್ಕೆ ಯಾವುದೇ ವಿಧವಾದ ಬಾಧಕವಾಗದ ರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಇವತ್ತಿನ ದಿವಸ ಹಲವಾರು ವಿದ್ಯಾ ಸಂಸ್ಥೆಗಳು ರಾಜಕೀಯದಲ್ಲಿ ಸಿಕ್ಕಿ ಹಾಕಿಕೊಂಡು ನರಳುತ್ತಿವೆ. ಉತ್ತರ ಕರ್ನಾಟಕದಲ್ಲಿ ಹಲವಾರು ವಿದ್ಯಾ ಸಂಸ್ಥೆಗಳನ್ನು ಚೆನ್ನಾಗಿ ಕಟ್ಟಿಬೆಳಸಿದ್ದಾರೆ, ಉತ್ತಮವಾದ ಸಂಸ್ಥೆಗಳನ್ನು ಕಟ್ಟಿ ಬೆಳಸಿದ್ದಾರೆ ಅದೇ ರೀತಿ ನಮ್ಮ ಹಳೇ ಮೈಸೂರು ಭಾಗದಲ್ಲೂ ಕೂಡ ಹಲವಾರು ಸಂಸ್ಥೆಗಳು ಉತ್ತಮ ಸಂಸ್ಥೆಗಳಾಗಿ ಬೆಳೆದಿವೆ. ಅಂಥ ಸಂಸ್ಥೆಗಳಿಗೆ ಸರ್ವ ಅಧಿಕಾರವನ್ನು ಕೊಟ್ಟು ಉತ್ತಮ ರೀತಿಯಲ್ಲಿ ಪೈಪೋಟಿಯಲ್ಲಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆಂದು ಹೇಳುತ್ತೇನೆ. ಹೆಚ್ಚು ಕಡಿಮೆ ಎಲ್ಲಾ ಸದಸ್ಯರು ಕೊಟ್ಟ ಸೂಚನೆಗಳನ್ನು ಮತ್ತು ಟೀಕೆಗಳನ್ನು ನಾನು ಗಮನಕ್ಕೆ ತೆಗೆದುಕೊಂಡಿದ್ದೇನೆ ಹೆಚ್ಚಿನ ಸದಸ್ಯರು ನಮ್ಮ ಕಾರ್ಯಕ್ರಮಗಳ ಬಗ್ಗೆ ಮೆಚ್ಚಿಗೆ ವ್ಯಕ್ತ ಮಾಡಿದ್ದಾರೆ. ಅದಕ್ಕೆ ಅವರಿಗೆ ನನ್ನ ಅಭಿನಂದನೆಗಳು.

ರೆಸಿಡೆನ್ಸಿಯಲ್ ಶಾಲೆಗಳ ಬಗ್ಗೆ ಒಂದು ಮಾತು ಹೇಳುತ್ತೇನೆ. ೪ ರೆಸಿಡೆನ್ಸಿಯಲ್ ಶಾಲೆಗಳಿಗೆ ಈ ವರ್ಷ ೧೫ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಹರಿಜನ ಗಿರಿಜನ ಹೆಣ್ಣು ಮಕ್ಕಳ ಶಾಲೆಯನ್ನು ನಂಜನಗೂಡು ಮತ್ತು ಬಿಜಾಪುರದಲ್ಲಿ ಪ್ರಾರಂಭಿಸಿದ್ದೇವೆ. ಇದಕ್ಕೆಲ್ಲಾ ದುಡ್ಡು ಕೊಡುತ್ತಿದ್ದೇವೆ. ಮುಂದಿನ ವರ್ಷದಿಂದ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಶಾಲೆಗಳನ್ನು ಪ್ರಾರಂಭಿಸಬೇಕೆಂದಿದ್ದೇವೆ. ಈ ವರ್ಷ ಕರ್ನಾಟಕ ರಾಜ್ಯದಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ

ಅದ್ಯತೆ ಕೊಟ್ಟು ೪ ಕೋಟಿ ರೂಪಾಯಿಗಳನ್ನು ಈ ಸಾರಿ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದೇನೆ. ಎಡಿಯೂರಪ್ಪನವರು ಗ್ರಾಂಟ್ ಇನ್ ಏಡ್ ಕೋಡ್ ಬಗ್ಗೆ ಮಾತನಾಡಿ ೫ ವರ್ಷ ಎಂದು ಇರುವುದನ್ನು ೭ ವರ್ಷ ಎಂದು ಮಾಡುತ್ತಿದ್ದೀರಿ ಎಂದು ಹೇಳಿದ್ದಾರೆ. ೭ ವರ್ಷ ಮಾಡುವುದಕ್ಕೆ ಇಷ್ಟೇ ಕಾರಣ ಅನೇಕ ವಿದ್ಯಾ ಸಂಸ್ಥೆಗಳನ್ನು ಗ್ರಾಂಟ್‌ಗೋಸ್ಕರವೇ ಪ್ರಾರಂಭಿಸಿರುತ್ತಾರೆ. ಕೆಲವರು ನಿಜವಾಗಿ ಸಂಸ್ಥೆಗಳನ್ನು ಪ್ರಾರಂಭಿಸಿರುತ್ತಾರೆ. ಆದ್ದರಿಂದ ೭ ವರ್ಷ ಎಂದು ಮಾಡಬೇಕೇ ಅಥವಾ ೫ ವರ್ಷ ಎಂದು ಇರುವುದನ್ನೇ ಮುಂದುವರಿಸಬೇಕೇ ಎಂಬ ಬಗ್ಗೆ ಇನ್ನೂ ಆಖೈರು ತೀರ್ಮಾನವಾಗಿಲ್ಲ. ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಎಡಿಯೂರಪ್ಪ.—ಜಿ. ಒ. ಇಶ್ಯೂ ಮಾಡಿದ್ದೀರಿ.

ಶ್ರೀ ಎಂ. ರಘುಪತಿ.—ಬಹಳ ಒತ್ತಾಯ ಮಾಡಿದರೆ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಅದನ್ನು ಪರಿಶೀಲಿಸುತ್ತೇವೆಂದು ಹೇಳುತ್ತೇನೆ. ನಾವು ಯಾವುದೇ ಕಾರ್ಯಕ್ರಮ ಹಾಕಿಕೊಂಡರೂ ಜನತೆಯ ಹಿತದೃಷ್ಟಿಯಿಂದ ಹಾಕಿಕೊಳ್ಳುತ್ತೇವೆಯೇ ಹೊರತು ಬೇರೆ ಉದ್ದೇಶದಿಂದ ಅಲ್ಲ. ನಾನು ಈ ಸಂದರ್ಭದಲ್ಲಿ ವಿದ್ಯಾ ವಿಕಾಸದ ಅಡಿಯಲ್ಲಿ ಏನು ಕ್ರಾಂತಿಕಾರಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ (ಪುಸ್ತಕ ಮತ್ತು ವಸ್ತ್ರ ವಿತರಣೆ) ಅದು ಸಮರ್ಪಕವಾಗಿ ವಿತರಣೆ ಆಗುವುದಕ್ಕೆ ಮುಂದಿನ ವರ್ಷ ಎಲ್ಲಾ ಪ್ರಾಮಾಣಿಕ ಪ್ರಯತ್ನ ಮಾಡಿ ಏನು ಲೋಪದೋಷಗಳಾಗಿವೆ ಅವನ್ನು ಸರಿ ಮಾಡುತ್ತೇವೆಂದು ಹೇಳುತ್ತೇನೆ. ಎಲ್ಲಾ ಸದಸ್ಯರು ಮಾತನಾಡಿ ಹಲವಾರು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅವನ್ನೆಲ್ಲ ಗಮನದಲ್ಲಿಟ್ಟುಕೊಂಡು ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತಾ ಎಲ್ಲಾ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಬೇಡಿಕೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಮಧ್ಯೆ ಮಧ್ಯೆ ಪ್ರವೇಶ ಮಾಡಿದರೂ ಪ್ರಶ್ನೆಗಳಿಗೆಲ್ಲಾ ಸಮಂಜಸವಾದ ಉತ್ತರವನ್ನು ಕೊಟ್ಟಿದ್ದಾರೆ. ಸಣ್ಣ ಪ್ರಶ್ನೆಗಳು ಇವೆ. ಅದರಲ್ಲಿ ಒಂದನೆಯದು ಈಗ ಪಠ್ಯಪುಸ್ತಕಗಳು ಮತ್ತು ವಸ್ತ್ರಗಳನ್ನು ಹಂಚುವ ವಿಚಾರದಲ್ಲಿ ಅವರು ಬಹಳ ಸ್ವಾತಂತ್ರ್ಯವನ್ನು ತೆಗೆದುಕೊಂಡು ಭಾಷಣ ಮಾಡಿದ್ದಾರೆ. ನಾನು ಹೇಳುವುದೇನೆಂದರೆ ರಾಜ್ಯಾಂಗದ ೧೯(೫) ಕಲಮಿನ ಪ್ರಕಾರ ಎಲ್ಲರಿಗೂ ಹಂಚುವುದಕ್ಕೆ ಹೋದರೆ ಯಾರಿಗೂ ಹಂಚುವುದಕ್ಕಾಗುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ.—ಏತಕ್ಕೆ ಆಗುವುದಿಲ್ಲ.

ಶ್ರೀ ಬಿ. ಬಸವಸಂಗಪ್ಪ.—ರೆಡ್ಡಿಯವರೇ, ಮಂತ್ರಿಗಳು ಇದ್ದಾರೆ. ಉತ್ತರ ಕೊಡುತ್ತಾರೆ. ನಿಮ್ಮನ್ನು ನಾನು ಕೇಳಲಿಲ್ಲ. ನನ್ನ ತಾಲ್ಲೂಕಿನ ಬಗ್ಗೆ ಈಗಿರತಕ್ಕಂಥದ್ದನ್ನು ಹೇಳಿದ್ದೇನೆ. ಶ್ರೀಮಾನ್ ಗೋವಿಂದೇಗೌಡರು ಉತ್ತರ ಕೊಡುವ ಕಾಲಕ್ಕೆ ಹೇಳುತ್ತಾರೆ. ರೀಜನಬಲ್ ರಿಸ್ಟ್ರಿಕ್ಷನ್ಸ್ ಆಗಿ ಎಲ್ಲರಿಗೂ ಹಂಚುವುದಕ್ಕೆ ಹೋಗಬೇಡಿ. ಯಾರೂ ಈಗಾಗಲೇ ಕೊನೆಯ ವರ್ಗದಲ್ಲಿ ಬಡವರು ಇದ್ದಾರೆ. ಯಾವ ಜನಾಂಗಕ್ಕೆ ಸೇರಿರಲಿ. ಕೊನೆಯ ವರ್ಗದವರಿಗೆ ಮೊದಲು ಕೊಡಿ. ಒಂದು, ಎರಡು, ಮೂರು ಈ ರೀತಿ ವರ್ಗ ಮಾಡಿಕೊಂಡು ಒಂದು ಎರಡಕ್ಕೆ ಹಂಚಿದರೆ ಸಾಕು. ಮೇಲಿನ ವರ್ಗಕ್ಕೆ ಬೇಕಾಗಿಲ್ಲ. ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಎರಡನೆಯದು, ಮೈಸೂರಿನ ಪತ್ರಿಕೆಗಳಲ್ಲಿ ವಿಶ್ವವಿದ್ಯಾನಿಲಯದ ಬಗ್ಗೆ ಪ್ರಕಟಣೆಯಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯಾವುದೂ ಸರಿಯಿಲ್ಲ. ಸರಿಯಾಗಿ ಏನೂ ನಡೆಯುತ್ತಿಲ್ಲ. ಪತ್ರಿಕೆಯಲ್ಲಿ ಬಂದಿರುವುದರಿಂದ ಮಾತನಾಡುತ್ತಿದ್ದೇನೆ. ಸಿಂಡಿಕೇಟ್ ಮೀಟಿಂಗ್‌ಗಳೂ ನಡೆದಿಲ್ಲ ೩-೪ ಮೀಟಿಂಗ್‌ಗಳು ಹಾಗೆಯೇ ನಡೆಯುತ್ತಿದೆ. ಗೊಂದಲ, ಹೊಡೆದಾಟವಾಗಿದೆ ಎಂದು ಹೇಳಿದ್ದಾರೆ. ಯಾರು ಸಿಂಡಿಕೇಟ್ ಮೆಂಬರ್‌ಗಳು, ವೈಸ್ ಚಾನ್ಸಲರ್ ಮತ್ತು ಯಾರ್ಯಾರು ಜವಾಬ್ದಾರಿ ಇದ್ದಾರೆ. ಅವರನ್ನು ಕರೆದು ಬುದ್ಧಿವಾದ ಹೇಳಿ ಎಂದು ಸಲಹೆಯನ್ನು ಮಾಡಿದ್ದೆ. ತಾವು ಉತ್ತರ ಕೊಟ್ಟಿಲ್ಲ. ಮೂರನೆಯದು ಈಗ ರೆಕ್ರೂಟ್‌ಮೆಂಟ್ ಮಾಡುವಾಗ ಟಿ. ಸಿ. ಹೆಚ್. ಮಾಡಲೇ ಬೇಕು ಎಂದು ಇದೆ. ಜನರಲ್ ಕ್ವಾಲಿಫಿಕೇಷನ್ ಜೊತೆಗೆ ಟಿ. ಸಿ. ಹೆಚ್. ಮಾಡಬೇಕು ಎಂದು ಇದೆ. ಇಲ್ಲದೇ ಹೋದರೆ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಇದರ ಬಗ್ಗೆ ಪ್ರಾತಿನಿಧ್ಯ ಒದಗಿಸಿಕೊಡತಕ್ಕಂಥ ಭರವಸೆಯನ್ನು ಕೊಟ್ಟಿದ್ದೀರಿ.

ಷೆಡ್ಯೂಲ್ಡ್ ಕ್ಯಾಸ್ಟ್, ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ನಲ್ಲಿ ಯಾರು ಇದ್ದಾರೆ. ಅಂಥವರ ಮಕ್ಕಳಿಗೆ ರೆಕ್ರೂಟ್‌ಮೆಂಟ್ ಮಾಡಿ ಇನ್ ಸರ್ವೀಸ್ ಟ್ರೈನಿಂಗ್ ಮಾಡಲು ಪ್ರಾರಂಭ ಮಾಡಬೇಕು ಅದರಲ್ಲಿ ೨೦೦-೩೦೦ ಹುಡುಗರನ್ನು ಇಟ್ಟುಕೊಂಡರೆ ಸಮಸ್ಯೆ ಬಗೆಹರಿಯುವುದಿಲ್ಲ. ೨-೩ ಸಾವಿರ ಜನರನ್ನು ಇನ್ ಸರ್ವೀಸ್ ಟ್ರೈನಿಂಗ್‌ಗೆ ರೆಕ್ರೂಟ್‌ಮೆಂಟ್ ಮಾಡಿ ಅವರಿಗೆ ಸಲ್ಲತಕ್ಕಂಥ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಏನು ಇಟ್ಟಿದ್ದೀರಿ ಅದನ್ನು ಕೊಡಬೇಕು ಆದ್ದರಿಂದ ಇವರಿಗೆ ಸರ್ವೀಸ್ ಟ್ರೈನಿಂಗ್‌ಗಳಲ್ಲಿಯೂ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಈಗ ಇನ್ ಸರ್ವೀಸ್ ಟ್ರೈನಿಂಗ್‌ಗೋಸ್ಕರ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಪ್ರತಿಯೊಬ್ಬ ಉಪಾಧ್ಯಾಯರು ಕನಿಷ್ಟ ೧೫ ದಿವಸ ತರಬೇತಿಯನ್ನು ಪಡೆಯಲಿಕ್ಕೆ ಇನ್ ಸರ್ವೀಸ್ ಟ್ರೈನಿಂಗ್ ಎಂದು ಮಾಡಿದ್ದೇವೆ. ಏಕೆಂದರೆ ಲೇಟೆಸ್ಟ್ ಸಿಲಬಸ್ ಏನು ಇದೆ. ಮತ್ತು ಲೇಟೆಸ್ಟ್ ಟೀಚಿಂಗ್ ಏನು ಇದೆ. ಅದರ ಪ್ರಕಾರ ಮಾಡಬೇಕು ಎಂದು ಹೇಳಿ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. ಮತ್ತು ರೆಕ್ರೂಟ್‌ಮೆಂಟ್ ಪಾಲಿಸಿ ಬಗ್ಗೆ ಶ್ರೀಮಾನ್ ಬಸವಲಿಂಗಪ್ಪನವರು ಹೇಳಿದ್ದಾರೆ. ಅದನ್ನು ಪರಿಪಾಲನೆ ಮಾಡುತ್ತೇವೆ. ಇನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಸಿಂಡಿಕೇಟ್ ಸದಸ್ಯರನ್ನು ಮತ್ತು ವೈಸ್‌ಚಾನ್ಸಲರ್‌ನ್ನು ಕರೆದು ಸಾಮರಸ್ಯ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅಧ್ಯಕ್ಷರೇ, ಇನ್ನು ಲೈಬ್ರರಿಯ ವಿಚಾರದಲ್ಲಿ ಹೇಳುವುದನ್ನು ಮರೆತಿದ್ದೆ. ಅದು ಏನೆಂದರೆ ನಾಲ್ಕು ಸಂಚಾರಿ ಗ್ರಂಥಾಲಯವನ್ನು ಪ್ರಾರಂಭ ಮಾಡಿದ್ದೇವೆ. ಬಹಳ ಉತ್ತಮವಾಗಿ ನಡೆಯುತ್ತಿದೆ. ಬೇಡಿಕೆ ಬರುತ್ತಿದೆ. ಮಂಗಳೂರು, ಗುಲ್ಬರ್ಗ ಭಾಗದಲ್ಲಿ ಸಂಚಾರಿ ಗ್ರಂಥಾಲಯವನ್ನು ಇನ್ನೊಂಡೆರಡು ತಿಂಗಳ ಕಾಲದಲ್ಲಿ ಪ್ರಾರಂಭ ಮಾಡಬೇಕೆನ್ನುವುದರ ಬಗ್ಗೆ ಅಲ್ಲಿನ ಶಾಸನ ಸಭಾ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ. ಬೆಂಗಳೂರು ಸೆಂಟ್ರಲ್ ಲೈಬ್ರರಿಯನ್ನು ಬೆಂಗಳೂರು ರೆಫರೆನ್ಸ್ ಲೈಬ್ರರಿ ಎಂದು ಕನ್‌ವರ್ಟ್ ಮಾಡಿದ್ದೇವೆ. ಒಂದೇ ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ಅದು ಏನೆಂದರೆ ಲೈಬ್ರರಿಯನ್ನು ಟೆಕ್ನಿಕಲ್ ಲೈಬ್ರರಿಯಾಗಿ ಈ ವರ್ಷ ಅಂದರೆ ೧-೨ ತಿಂಗಳ ಕಾಲದಲ್ಲಿ ಪೀಣ್ಯದಲ್ಲಿ ಟೆಕ್ನಿಕಲ್ ಲೈಬ್ರರಿಯನ್ನು ಪ್ರಾರಂಭ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ನಾನು ಬೇಡಿಕೆಯ ಮೇಲೆ ಮಾತನಾಡಲಿಲ್ಲ. ನಾಲ್ಕು ಪ್ರಶ್ನೆಗಳಿವೆ ಅದರಲ್ಲಿ ಒಂದನೆಯದು ಹಂಪೆಯಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಸ್ವಾಗತ. ಆದರೆ ಪ್ರಶ್ನೆ ಏನೆಂದರೆ ಅಲ್ಲಿ ಯಾವ ಸ್ವರೂಪದ ವಿಶ್ವವಿದ್ಯಾನಿಲಯವನ್ನು ಮಾಡುತ್ತೇವೆ ಎಂದು ಹೇಳಿದ್ದಾರೆಂದರೆ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಅದರ ಸ್ವರೂಪ ಸ್ಪಷ್ಟವಾಗಿಲ್ಲ. ಉತ್ತರಕೊಡಬೇಕೆಂದು ನಿರೀಕ್ಷಣೆ ಮಾಡುವುದಿಲ್ಲ. ವಿಚಾರ ಏನು ಎಂದು ಹೇಳಿದರೆ ಹಂಪಿಯಲ್ಲಿ ಪುನರುತ್ಥಾನ ಹಂಪಿ ರಿಜರೆಕ್ಷನ್ ಪ್ರಾಜೆಕ್ಟ್ ಎಂದು ಮಾಡಿ ಅದು ಇಡೀ ವಿಶ್ವದ ಒಂದು ಗಮನವನ್ನು ಸೆಳೆದಿದೆ. ಅದರಲ್ಲಿ ಕೂಡ ವಿಶ್ವವಿದ್ಯಾನಿಲಯವನ್ನು ಅದರ ಸ್ವರೂಪವನ್ನು ಕೂಡ ನಮೂದಿಸಿದ್ದು ಇದೆ. ಆ ಒಂದು ವಿಚಾರವನ್ನು ತಾವು ಅಳವಡಿಸುತ್ತೀರಾ. ಎರಡನೆಯದು ಈ ಸಂಡೂರಿನಲ್ಲಿ ದೇವರಾಜಅರಸ್ ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಒಂದು ಟೆಕ್ನಿಕಲ್ ಪೋಸ್ಟ್ ಗ್ರಾಜುಯೇಟ್ ಸೆಂಟರ್ ಎಂದು ಮಾಡಿದ್ದಾರೆ. ಅದರ ಉದ್ದೇಶ ಏನೆಂದರೆ ಈ ಪೋಸ್ಟ್ ಗ್ರಾಜುಯೇಟ್ ಸೆಂಟರ್ ಇದ್ದರೆ ವಿಶ್ವವಿದ್ಯಾನಿಲಯವು ಬೇಕಾಗುವುದು. ಆದ್ದರಿಂದ ತಾವು ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಮಾಡುತ್ತಿಲ್ಲ. ಆ ಆಲೋಚನೆ ತಮಗೆ ಇಲ್ಲ. ಇದು ಕನ್ಸೆಪ್ಟ್‌ಗೆ ವಿರುದ್ಧವಾಗುತ್ತದೆ. ಯು.ಜಿ.ಸಿ. ಯಲ್ಲಿ ಏನು ಹೇಳಿದ್ದಾರೆ. ಅದನ್ನು ವಿಚಾರ ಮಾಡಬೇಕು. ಒಡೆಯರ್ ಸಮಿತಿ ಮಾಡುತ್ತೇವೆ ಎಂದು ಹೇಳಿದ್ದೀರಿ. ವರದಿಯನ್ನು ಕೊಟ್ಟಿರಬಹುದು. ಆದರೆ ಈ ವಿಶ್ವವಿದ್ಯಾನಿಲಯದ ಸ್ಪಷ್ಟ ಸ್ವರೂಪ ಕೊಡುವ ಮೊದಲು ಅಲ್ಲಿ ಹಂಪಿಯಲ್ಲಿರತಕ್ಕಂಥ ಈ ಒಂದು ಹೆರಿಟೇಜ್ ಏನು ಇದೆ ಒಂದು ದೊಡ್ಡ ಪರಂಪರೆ ಮತ್ತು ಅಲ್ಲಿಯ ಸ್ವರೂಪ ಒಂದು ವಿಶಿಷ್ಟವಾಗಿ ಇರಬೇಕು. ಎರಡನೆಯದು ಹಂಪಿಯಲ್ಲಿ ಅದು ಬರೀ ನಮ್ಮ ಕರ್ನಾಟಕದ ಪ್ರಶ್ನೆ ಅಲ್ಲ. ಇಡೀ ವಿಶ್ವವಿಖ್ಯಾತವಾಗಿದೆ ರಾಷ್ಟ್ರೀಯ ಸ್ಮಾರಕ ಇದ್ದ ಹಾಗೆ ಇದೆ. ಈ ಎಲ್ಲಾ ದೃಷ್ಟಿಯನ್ನು ಇಟ್ಟುಕೊಂಡು ಮಾಡುತ್ತೀರಾ ಅಥವಾ ಬರೀ ಕರ್ನಾಟಕಕ್ಕೆ ಸೀಮಿತವಾಗಿ ಮಾಡುತ್ತೀರಾ ? ಸ್ವರೂಪವನ್ನು ನಿಷ್ಕರ್ಷೆ ಮಾಡುವ ಮೊದಲು ದೊಡ್ಡ ಹಿರಿಯರನ್ನು, ಹಿಸ್ಟಾರಿ

ಯನ್ಸ್, ಅರ್ಕಿಯಾಲಜಿಸ್ಟ್ ಮತ್ತು ಈ ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ನಿಜವಾದ ಇಡೀ ವಿಶ್ವದಲ್ಲೇ ಒಂದು ಅತ್ಯಂತ ವಿಶಿಷ್ಟವಾದ ವಿಶ್ವವಿದ್ಯಾನಿಲಯವನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಎರಡನೆಯದಾಗಿ ಮಹಿಳೆಯರ ಬಗ್ಗೆ ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಬಹಳ ಬೇಡಿಕೆ ಇತ್ತು. ಹಿಂದೆ ಸನ್ಮಾನ್ಯ ರಾಚಯ್ಯನವರು ವಿದ್ಯಾಸಚಿವರು ಆಗಿದ್ದಾಗ ಕಿತ್ತೂರು ಚೆನ್ನಮ್ಮನ ಒಂದು ಸ್ಮಾರಕವಾಗಿ ಕಿತ್ತೂರಿನಲ್ಲಿ ಒಂದು ಮಹಿಳಾ ವಿಶ್ವವಿದ್ಯಾನಿಲಯವನ್ನು ಮಾಡಬೇಕು ಎಂದು ಬಹಳ ಬೇಡಿಕೆ ಇತ್ತು. ರಾಣಿ ಕಿತ್ತೂರು ಚೆನ್ನಮ್ಮನಂತಹ ಇಡೀ ಒಂದು ರಾಜ್ಯಕ್ಕೆ ಒಂದು ಕೀರ್ತಿ, ಸ್ಥೈರ್ಯ ಕಳಸ ತಂದವರು ಬೇರೆ ಯಾರೂ ಇಲ್ಲ. ಇದನ್ನು ಗಮನಕ್ಕೆ ತೆಗೆದುಕೊಂಡಾಗ ಕಿತ್ತೂರು ಚೆನ್ನಮ್ಮನಂಥ ಒಂದು ರಾಷ್ಟ್ರಕ್ಕೆ, ರಾಜ್ಯಕ್ಕೆ ರಾಜಕೀಯ ಒತ್ತಡ ತಂದ ಮಹಿಳೆಯರನ್ನು ಮರೆತಿರುವುದು, ಇದರಲ್ಲಿ ಒಂದು ದೊಡ್ಡ ಲೋಪ ಬಂದ ಹಾಗೆ ಆಗಿದೆ. ಬೇರೆ ಎಲ್ಲಾ ಬೇಡಿಕೆ ಸಮಂಜಸ ಆಯಿತು. ಇದರ ಬಗ್ಗೆ ತಾವು ವಿಚಾರ ಮಾಡುತ್ತೀರಾ ?

ಇನ್ನು ಕೆಲವು ಸಂಸ್ಥೆಗಳನ್ನು ಆಟನೋಮಸ್ ಮಾಡುತ್ತೇವೆ ಎಂದು ಹೇಳಿದಿರಿ. ಇದನ್ನು ಹೇಳುವಾಗ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಕಲುಷಿತವಾಗಿದೆ ಎಂದು ಹೇಳಿದಿರಿ. ರಾಜಕೀಯವಾಗಿ ಕಲುಷಿತವಾಗಿದೆಯೋ ? ಜಾತಿಯ ಭಾವನೆಗಳಿಂದ ಕಲುಷಿತ ಆಗಿದೆಯೋ ಗೊತ್ತಿಲ್ಲ. ದೊಡ್ಡ ಕೆರೆ ಕಲುಷಿತವಾಗಿದೆ. ಕೆಲವು ಸಂಸ್ಥೆಗಳು ಲಾಭ ಮಾಡಿಕೊಳ್ಳಲಿಕ್ಕೆ ಹುಟ್ಟಿದಂಥ ಸಂಸ್ಥೆಗಳು ಇವೆ. ಈ ಸಣ್ಣ ಸಂಸ್ಥೆಗಳಿಗೆ ಪೂರ್ತಿ ಸ್ವಾಯತ್ತತೆ ಕೊಟ್ಟುಬಿಟ್ಟರೆ ಮತ್ತಷ್ಟು ಕೊಳಕು ಈ ವಿದ್ಯಾಸಂಸ್ಥೆಗಳಲ್ಲಿ ಆಗುವ ಸಂದರ್ಭ ಇಲ್ಲವೇ ? ಈ ರೀತಿಯ ಜಾತಿಯ ಸಂಸ್ಥೆಗಳು ನಾಯಿಕೊಡೆಗಳಂತೆ ಬೆಳೆಯುವ ರೀತಿಯಲ್ಲಿ ಬೆಳೆದುಬಿಟ್ಟಿವೆ. ಪ್ರೇರಕ ಶಕ್ತಿ ಕೊಡಲಿಕ್ಕೆ, ಆಟನೋಮಸ್ ಸ್ಟೇಟಸ್ ಕೊಡಲಿಕ್ಕೆ ತಾವು ಏನು ವಿಚಾರ ಮಾಡಿದ್ದೀರಿ ? ವಿಶ್ವವಿದ್ಯಾನಿಲಯವು ರಾಷ್ಟ್ರೀಯ ಸಮಗ್ರತೆಗೆ ತೊಂದರೆ ಬರದಹಾಗೆ ಭದ್ರತಾ ಕಾರ್ಯಕ್ರಮಗಳನ್ನು ಕೂಡ ತೆಗೆದುಕೊಳ್ಳುತ್ತೇವೆಂದು ತಾವು ಹೇಳಬೇಕು. ಸ್ಪಷ್ಟವಾದ ವಿಚಾರವನ್ನು ತಾವು ಗಂಭೀರವಾಗಿ ಆಲೋಚನೆ ಮಾಡಬೇಕು. ಇಲ್ಲದಿದ್ದರೆ ಕಲುಷಿತ ಮಾತ್ರವೇ ಅಲ್ಲ. ವಿದ್ಯಾಕ್ಷೇತ್ರವೇ ಸರ್ವನಾಶವಾಗುತ್ತದೆ. ಆಟನೋಮಸ್ ತಾವು ಅವಕಾಶ ಕೊಟ್ಟರೆ ಹೆಚ್ಚು ಕ್ಲಾಸ್ ವಾರ್‌ಗೆ ಹೋಗತಕ್ಕಂಥ ಸಂದರ್ಭದಲ್ಲಿ, ಜಾತೀಯತೆಯ ಕೂಪದಲ್ಲಿ ಮುಳುಗದ ಹಾಗೆ ಇದನ್ನು ಪ್ರಯತ್ನ ಮಾಡಿ ಕೂಡಲೇ ತಪ್ಪಿಸುತ್ತೀರಾ ? ಈ ಒಂದು ಸಂಸ್ಥೆ ಮುಳುಗಿಹೋಗದ ಹಾಗೆ ತಾವು ಯಾವ ರೀತಿಯಲ್ಲಿ ಕಟ್ಟಿಕೊಳ್ಳುತ್ತೀರಿ. ಮೂರನೆಯದು ಡಾಕ್ಟರ್ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಫೀಸ್ ಸ್ಟ್ರಕ್ಚರ್ ಮಾಡಲಿಕ್ಕೆ ಮಾಡಿದ್ದೀರಿ. ನಾನು ವರದಿಯನ್ನು ಓದಿದ್ದೇನೆ. ಆದರೆ ಅದು ಕನ್‌ಫ್ಯೂಷನ್ ಇದೆ. ಇದು ವ್ಯಾಪಕವಾದಂಥ ಪ್ರಶ್ನೆ. ಸದನದ ಸದಸ್ಯರನ್ನು ಕೂಡ ಕರೆಯ ಬೇಕಾಗುತ್ತದೆ. ಸಾರ್ವಜನಿಕರ ಗಮನವನ್ನು ಸೆಳೆದಂತ ಪ್ರಶ್ನೆ. ಇದನ್ನು ಸ್ವಲ್ಪ ಕೂಲಂಕಷವಾಗಿ ವಿಶ್ಲೇಶಣೆ ಮಾಡಿ ಅದನ್ನು ಅನುಷ್ಠಾನ ಮಾಡಬೇಕೇ ಹೊರತು ಇದ್ದಹಾಗೆ ಮಾಡಬಾರದು.

ಎಲ್ಲರ ಸಲಹೆಗಳನ್ನು ತೆಗೆದುಕೊಳ್ಳದೇ ಅನುಷ್ಠಾನ ಮಾಡಬಾರದು ಎಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಮೊದಲು ಮೊಯಿಲಿಯವರು ಕೊನೆಯಲ್ಲಿ ಕೊಟ್ಟ ಸೂಚನೆಯಿಂದಲೇ ಉತ್ತರ ಕೊಡುತ್ತೇನೆ ಆ ಸೂಚನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಎಲ್ಲ ಹಿರಿಯರು, ಶಿಕ್ಷಣ ಕ್ಷೇತ್ರದಲ್ಲಿ ಅನುಭವ ಇರತಕ್ಕವರು, ಸದಸ್ಯರು ಎಲ್ಲರನ್ನೂ ಕರೆಸಿ ಚರ್ಚೆ ಮಾಡುತ್ತೇನೆ. ಇಡೀ ದಿನ ಚರ್ಚೆ ಮಾಡಿ ಆ ಬಗ್ಗೆ ಉತ್ತಮವಾದ ಕಾರ್ಯಕ್ರಮ ಹಾಕಿಕೊಳ್ಳುತ್ತೇನೆ. ಭರತ್ ಅವರ ನೇತೃತ್ವದಲ್ಲಿ ಸಮಿತಿ ಏನು ರಚನೆ ಮಾಡಿದ್ದೇವೆ. ಅದರ ಬಗ್ಗೆ ಚರ್ಚೆ ಮುಖಾಂತರ ಪರಿಹಾರ ಕೊಡು ತ್ತೇನೆ ಎಂದು ಹೇಳುತ್ತೇನೆ. ಕಿತ್ತೂರು ಚೆನ್ನಮ್ಮನವರ ನೆನಪಿನಲ್ಲಿ ಮಹಿಳಾ ವಿಶ್ವ ವಿದ್ಯಾನಿಲಯ ಪ್ರಾರಂಭ ಮಾಡುತ್ತೇನೆಂದು ರಾಚಯ್ಯನವರು ಆಶ್ವಾಸನೆ ಕೊಟ್ಟಿದ್ದರು ಎಂದು ಹೇಳುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಇಷ್ಟೇ ಹೇಳುವುದು. ಈಗ ಹಣಕಾಸಿನ ಮುಗ್ಗಟ್ಟಿರುವುದರಿಂದ ಈ ವರ್ಷ ಆಗದಿದ್ದರೆ ಮುಂದಿನ ವರ್ಷ ೧೯೮೭–೮೮ರಲ್ಲಿ ಈ ವಿಶ್ವ ವಿದ್ಯಾನಿಲಯ ಸ್ಥಾಪನೆ ಮಾಡುವುದಕ್ಕೆ, ಕಿತ್ತೂರಿನಲ್ಲಿ ಮಾಡುವುದಕ್ಕೆ ಕಾರ್ಯಕ್ರಮವನ್ನು ಈಗಿನಿಂದಲೇ ಹಾಕಿಕೊಂಡರೆ ಜಾರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಹಂಪೆ ಬಗ್ಗೆ ಅವರು ಹೇಳಿದ್ದಾರೆ. ತಾವು ಏನು ಸೂಚನೆ ಕೊಟ್ಟಿದ್ದೀರಿ. ಆ ಸೂಚನೆಯನ್ನು ವಿಶ್ವ ವಿಖ್ಯಾತ ಸಾಧನೆ ಮಾಡುವ ದೃಷ್ಟಿಯಿಂದ ಶ್ರೀಮಾನ್ ಒಡೆಯರ್ ಅವರಿಗೆ ಬರೆದು ಕಳುಹಿಸುತ್ತೇನೆ. ಶಿಕ್ಷಣ ಸಂಸ್ಥೆಗಳ ಬಗ್ಗೆ ಹೇಳುವುದಾದರೆ ಅದರ

ಬಗ್ಗೆ ನಾನು ಈ ಸದನದ ಸದಸ್ಯರ, ಮತ್ತು ಶಿಕ್ಷಣ ತಜ್ಞರ ಅಭಿಪ್ರಾಯವನ್ನು ಸಂಪೂರ್ಣವಾಗಿ ತೆಗೆದು ಕೊಂಡು ಆ ಮೇಲೆ ಒಂದು ಪ್ರಕಟಣೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಮಾನ್ಯ ಮಂತ್ರಿಗಳು ಬಹಳ ಸವಿಸ್ತಾರವಾದ ಉತ್ತರ ಕೊಟ್ಟಿದ್ದಾರೆ. ನಿಜವಾಗಿಯೂ ಅವರ ಪ್ರಚಾರಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಅನೇಕ ಕೆಲಸಗಳನ್ನು ಅವರು ಮಾಡಿದ್ದಾರೆ. ಅವರು ಎಂಥ ಕೆಲಸಗಳನ್ನು ಮಾಡಿದ್ದಾರೆಂದರೆ ಹೋದ ಸಾರಿಯೂ ನಾನು ಮಾತನಾಡುವಾಗ ಹೇಳಿದ್ದೆ. ನಮ್ಮ ಸಮಾಜದಲ್ಲಿ ಸಾಮಾಜಿಕ ಸಮಾನತೆಯನ್ನು ತರುವುದಕ್ಕೋಸ್ಕರ ಶಿಕ್ಷಣದ ಪಾತ್ರ ಏನು? ಸರ್ಕಾರದ ವತಿಯಿಂದ ಅದರಲ್ಲಿ ಎಷ್ಟರ ಮಟ್ಟಿಗೆ ಭಾಗಿ ಯಾಗಬೇಕು ಎಂಬ ಬಗ್ಗೆ ಹೆಚ್ಚಿನ ಮಾಹಿತಿ ಕೊಟ್ಟಿದ್ದೆ. ಈ ಸಾರಿ ನಾನು ಮಾತನಾಡುವುದಕ್ಕೆ ಅವಕಾಶವಾಗಲಿಲ್ಲ. 'ಪಿಕ್ಚರ್ ಆಫ್ ಕರ್ನಾಟಕ ಬಜೆಟ್' ಎಂದು ೧೯೮೫-೮೬ರ ವರದಿ ಇಲ್ಲಿದೆ. ೧೯೮೬-೮೭ರಂದು ಇನ್ನೂ ಕೊಟ್ಟಿಲ್ಲ.

ಅಧ್ಯಕ್ಷರು.--ಇನ್ನೊಂದು ವಾರದಲ್ಲಿ ಅದನ್ನೂ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ಅದನ್ನು ಯಾವಾಗ ಕೊಡುತ್ತಾರೋ ನೋಡೋಣ. ತಾವು ಎಷ್ಟೇ ಹೇಳಿದರೂ ಕೂಡ, ದಿನೇ ದಿನೇ ಹೆಚ್ಚಿನ ಶಾಲೆಗಳನ್ನು ಮಾಡುತ್ತಿದ್ದೇವೆ, ಹಣವನ್ನು ಹೆಚ್ಚಿಗೆ ಕೊಟ್ಟಿದ್ದೇವೆ ಎಂದರೂ ಅವರ ನಜರಿಗೆ ತರುತ್ತೇನೆ. ತಾವು ಕೊಟ್ಟಿರುವ ವರದಿಯಲ್ಲೇ ಇರುವಂತೆ ಪ್ರೈಮರಿ ಮತ್ತು ಸೆಕೆಂಡರಿ ಎಜುಕೇಷನ್ ವಿಚಾರದಲ್ಲಿ ವರ್ಷೇ ವರ್ಷೇ ಕಡಿಮೆಯಾಗುತ್ತಿ ದೆಯೇ ಹೊರತು ಜಾಸ್ತಿಯಾಗುತ್ತಿಲ್ಲ. ಪ್ರೈಮರಿ ಎಜುಕೇಷನ್‌ನಲ್ಲಿ ೧೯೮೦-೮೧ರಲ್ಲಿ ೨೮.೮೬ ಇದ್ದರೆ ೮೫-೮೬ರಲ್ಲಿ ೨೭.೪೩ ಇದೆ. ಸೆಕೆಂಡರಿ ಎಜುಕೇಷನ್ ೧೦.೬೮ ಇದ್ದಾಗ ಇವತ್ತು ೧೦.೩೪ ಇದೆ. ಅಂದರೆ ವರ್ಷೇ ವರ್ಷೇ ಕಡಿಮೆಯಾಗಿದೆಯೇ ಹೊರತು ಜಾಸ್ತಿಯಾಗಿಲ್ಲ. ನೀವು ೨೦೦ ಹೈಸ್ಕೂಲು ಗಳನ್ನು ಕೊಟ್ಟೆ ಎಂದು ಹೇಳಬಹುದು. ಗ್ರಾಂಟ್ ಸಿಗುವವರು ನಡೆಸಿಕೊಂಡು ಹೋಗುತ್ತಾರೆ, ಆದರೆ ಸರ್ಕಾರದ ವತಿಯಿಂದ ಏನು ಪ್ರಯೋಜನ ಆಗಿದೆ ಎಂಬುದನ್ನು ಕೇಳುತ್ತಿದ್ದೇನೆ. ತಮ್ಮ ಖಾತೆಗೆ ಹಣಕಾಸಿನ ಸಚಿವರಿಂದ ಬಜೆಟ್ ಕಡಿಮೆ ಬಂದಿದೆ ಎಂಬುದನ್ನು ಒಪ್ಪಿಕೊಳ್ಳಬೇಕು. ಸುಮ್ಮನೆ ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಅಷ್ಟಿದೆ ಇಷ್ಟಿದೆ ಎಂದು ಹೇಳಿದರೆ ಸಾಲದು. ಏತಕ್ಕೆ ಇದರಲ್ಲಿ ಕಡಿಮೆ ಯಾಗಿದೆ ಎಂಬುದನ್ನು ಹೇಳಬೇಕು, ಪಿ.ಯು.ಸಿ.ಯಲ್ಲಿ ಕೂಡ ಅದೇ ರೀತಿಯಾಗಿದೆ. ೬೦ ಲಕ್ಷ ವಿದ್ಯಾರ್ಥಿಗಳಿಗೆ ಟೆಕ್ಸ್ಟ್ ಬುಕ್ ಕೊಟ್ಟಿದ್ದೇವೆ ಎಂದು ಹೇಳಿದರು. ಲೋಯರ್ ಪ್ರೈಮರಿಯಲ್ಲಿ ೪೦ ಲಕ್ಷ, ಹೈಯರ್ ಪ್ರೈಮರಿಯಲ್ಲಿ ೧೫ ಲಕ್ಷ ಎರಡೂ ಸೇರಿಸಿದರೆ ೫೬ ಲಕ್ಷ ಆಗುತ್ತದೆ. ಅನ್ಯುಯಲ್ ರಿಪೋರ್ಟ್‌ನಲ್ಲಿ ೫೬ ಲಕ್ಷ ಎಂದು ಕೊಟ್ಟಿದ್ದೀರಿ. ತಾವು ೬೦ ಲಕ್ಷ ವಿದ್ಯಾರ್ಥಿಗಳಿಗೆ ಕೊಟ್ಟಿದ್ದೇವೆಂದರೆ ಇನ್ನು ೪ ಲಕ್ಷ ಪುಸ್ತಕಗಳು ಏನಾಯಿತು? ಎ.ಇ.ಓ.ಗಳು ಅದನ್ನು ಮಾರಿದರೋ ಇಲ್ಲವೋ ಗೊತ್ತಾಗಿಲ್ಲ. ಹೆಚ್ಚಿಗೆ ಇರಬೇಕೆಂದು ಕೊಟ್ಟಿದ್ದರೆ ಅದನ್ನು ಹೇಳಬೇಕು. ಸೆಂಟ್ರಲ್ ಲೈಬ್ರರಿಗಳ ಬಗ್ಗೆ ಕೊನೆಯಲ್ಲಿ ಹೇಳಿದ್ದಾರೆ. ಅದು ಕೆಲವೇ ಪ್ರದೇಶಗಳಲ್ಲಿ ಕಾನ್‌ಸೆಂಟ್ರೇಟ್ ಆಗಿದೆ. ಸಂಚಾರಿ ಗ್ರಂಥಾಲಯವನ್ನು ಮಂಗಳೂರಿನಲ್ಲಿ ಮತ್ತು ಗುಲ್ಬರ್ಗದಲ್ಲಿ ಮಾಡುತ್ತೇವೆಂದು ಈಗ ಹೇಳಿದರು. ವರದಿಯಲ್ಲಿ ಅದು ಇರಲಿಲ್ಲ. ಈಗ ಹೇಳಿದ್ದೀರಿ. ಗುಲ್ಬರ್ಗ ಮುನಿಸಿಪಾಲಿಟಿ ವತಿಯಿಂದ ಸೆಂಟ್ರಲ್ ಲೈಬ್ರರಿ ಕನ್‌ಸ್ಟ್ರಕ್ಟ್ ಮಾಡಬೇಕೆಂಬ ಬೇಡಿಕೆ ಬಹಳ ದಿವಸಗಳಿಂದ ಇದೆ. ಈಗಿರತಕ್ಕದ್ದು ಬಹಳ ಡೆಲಿಕೇಟೆಡ್ ಕಂಡೀಷನ್ ನಲ್ಲಿದೆ. ಅಂಥ ಬಿಲ್ಡಿಂಗ್‌ನಲ್ಲಿ ಲೈಬ್ರರಿ ನಡೆಯುತ್ತಿದೆ. ಅದರ ಕನ್‌ಸ್ಟ್ರಕ್ಷನ್‌ಗೆ ಏನು ವ್ಯವಸ್ಥೆ ಮಾಡಿದ್ದೀರಿ? ಈ ವರ್ಷದ ಪರ್ಫಾರ್ಮೆನ್ಸ್ ಬಜೆಟ್‌ನಲ್ಲಿ ಹೇಳಿರುವ ಪ್ರಕಾರ ಹೋದ ಸಾರಿ ೧೯೮೪-೮೫ರಲ್ಲಿ ನಂಬರ್ ಆಫ್ ಟೀಚರ್ಸ್ ೮,೧೪೬ ಇದ್ದರೆ ೧೯೮೬-೮೭ರಲ್ಲೂ ೮,೧೪೬ ಇದೆ. ಸರ್ಕಾರಿ ಹೈಸ್ಕೂಲ್‌ನಲ್ಲಿ ೧೯೮೪-೮೫ರಲ್ಲಿ ೧,೧೭೮ ಇದ್ದರೆ ೧೯೮೬-೮೭ರಲ್ಲಿ ಕೂಡ ೧,೧೭೮ ಇದೆ. ಇದರ ಅರ್ಥ You are not going to increase a single teacher in Government Schools and also you are not going to open a single high school in Government Sector. ಇದಕ್ಕೆ ಕೂಡ ತಾವು ಉತ್ತರ ಹೇಳಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ ಮಾನ್ಯ ಮೊಯಿಲಿಯವರು ಹೇಳಿದಂತೆ ಜಾತಿಯ ಆಧಾರದ ಮೇಲೆ ಅನೇಕ ಸಂಘ-ಸಂಸ್ಥೆಗಳು ಬೆಳೆಯುತ್ತಿವೆ. ಇದರಿಂದ ನ್ಯಾಷನಲ್ ಇಂಟಿಗ್ರೇಷನ್‌ಗೆ ಹಾನಿಯಾಗತಕ್ಕ ಸಂಭವವಿದೆ. ಆದ್ದರಿಂದ ಈ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಯುನಿವರ್ಸಿಟಿಯಲ್ಲಿ ಎಸ್.ಸಿ. ಎಸ್.ಟಿ. ವೆಲ್‌ಫೇರ್ ಫಂಡ್

ಇದೆ. ಆದರಿಂದ ಎಸ್.ಸಿ. ಎಸ್.ಟಿ. ಸಂಸ್ಥೆಗಳಿದ್ದರೆ ಅಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ, ಸ್ಕಾಲರ್‌ಷಿಪ್‌ಗೆ ಲೈಬ್ರರಿಗೆ ಸಹಾಯ ಮಾಡಬೇಕೆಂದು ಉದ್ದೇಶ ಇದೆ, ಆದರೆ ಕೆಲವು ವಿಶ್ವವಿದ್ಯಾನಿಲಯದಲ್ಲಿ ಪರ್ಟಿಕ್ಯುಲರ್ಲಿ ಗುಲ್ಬರ್ಗ ವಿಶ್ವ ವಿದ್ಯಾನಿಲಯದಲ್ಲಿ ಜಾರಿಯಲ್ಲಿ ಬಂದಿಲ್ಲ. ಇದರ ಬಗ್ಗೆ ದಯವಿಟ್ಟು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಂ. ರಘುಪತಿ.—ಫಸ್ಟ್ ಇಯರ್ ಪ್ಲಾನ್‌ನಲ್ಲಿ ಏನು ಸೂಚನೆ ಮಾಡಿದ್ದಾರೆ. ಅದು ಯಾವಾಗಲೂ ಷಿಫ್ಟ್ ಆಗುತ್ತದೆ. ನಾನ್-ಪ್ಲಾನ್, ಪ್ಲಾನ್ ಎಕ್ಸ್‌ಪೆಂಡಿಚರ್ ಷಿಫ್ಟ್ ಆಗುತ್ತದೆ, ಆದ್ದರಿಂದ ವಿದ್ಯಾ ಕ್ಷೇತ್ರಕ್ಕೆ ಹಣ ಕಡಿಮೆಯಾಗುವುದಿಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆಗಿದೆ. ದಯವಿಟ್ಟು ಈ ರಿಪೋರ್ಟ್ ಓದಿ. ನೀವು ಕೊಟ್ಟ ಡಾಕ್ಯುಮೆಂಟ್ ಇದು. ೧೯೮೧-೮೨ ರಿಂದ ೧೯೮೫-೮೬ರವರೆಗೆ ಓದಿ. Budget is dwindling in your Department. You are going down day by day though your propaganda is there and though you are very popular as Minister. But, your performance in the Budget is very less.

ಶ್ರೀ ಎಂ. ರಘುಪತಿ.—ಅದೇನಿಲ್ಲ. ೧೦ ಕೋಟಿ ರೂಪಾಯಿಗಳನ್ನು ನಾನ್ ಪ್ಲಾನ್‌ನಿಂದ ಕೊಟ್ಟಿದ್ದೇವೆ. ಅದೆಲ್ಲಾ ಸೇರಿಸಿದರೆ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಗುಲ್ಬರ್ಗದಲ್ಲಿ ಕೇಂದ್ರ ಗ್ರಂಥಾಲಯ ಸ್ಥಾಪನೆ ಮಾಡುವ ಬಗ್ಗೆ ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆ. ಎಸ್.ಸಿ. ಎಸ್.ಟಿ. ಫಂಡ್ ವಿಷಯದಲ್ಲಿ ಗುಲ್ಬರ್ಗ ವಿಶ್ವ ವಿದ್ಯಾನಿಲಯದಲ್ಲಿ ನ್ಯೂನತೆ ಇದೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ವೆಲ್‌ಫೇರ್ ಫಂಡ್ ಉಪಯೋಗ ಮಾಡುತ್ತಿಲ್ಲ.

ಶ್ರೀ ಎಂ. ರಘುಪತಿ.—ಯುಟಿಲೈಸ್ ಮಾಡುವುದಕ್ಕೆ ಬರೆದು ಕಳುಹಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹಂಪೆ ಬಗ್ಗೆ ಕೇಳಬೇಕೆಂದಿದ್ದೆ. ಅದಕ್ಕೆ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಅವರು ಉತ್ತರ ಕೊಡುವಾಗ ನೀವು ಇರಲಿಲ್ಲ. ಈಗ ಬಂದಿದ್ದೀರಿ. ಅವರು ಉತ್ತರ ಕೊಟ್ಟಿಲ್ಲವೆಂದು ಹೇಗೆ ಹೇಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ನಾನು ವಿಳಂಬವಾಗಿ ಸದನಕ್ಕೆ ಬಂದುದಕ್ಕೆ ಕ್ಷಮಿಸಬೇಕು. ನಮ್ಮ ಏರಿಯಾದಲ್ಲಿ ನೀರು ಬರುತ್ತಿರಲಿಲ್ಲ. ಆದಕ್ಕೆ ಬೋರ್‌ವೆಲ್ ಹೊಡೆದು ಬರುವುದಕ್ಕೆ ಇಷ್ಟು ಹೊತ್ತಾಯಿತು. ನಾನು ಕೇಳಿದ ಪ್ರಶ್ನೆಗೆ ಉತ್ತರ ಬಂದಿಲ್ಲದಿರುವುದರ ಬಗ್ಗೆ ಇಲ್ಲೇ ಪಕ್ಕದಲ್ಲಿ ಕೇಳಿ ತಿಳಿದುಕೊಂಡೆ. ೪ ಸಾವಿರ ಜನ ಏನು ಪ್ರೈಮರಿ ಸ್ಕೂಲ್ ಟೀಚರ್ಸ್ ಇದ್ದಾರೆ ಅವರನ್ನು ೩೦ನೇ ತಾರೀಖು ರಿಲೀವ್ ಮಾಡುತ್ತಾರೆ. ಇದರ ಬಗ್ಗೆ ಮಾನ್ಯ ಗೋವಿಂದೇಗೌಡರು ಉತ್ತರ ಕೊಡುತ್ತಾರೆ ಎಂದು ಕಾಣುತ್ತದೆ. ಇನ್ನು ಪಾಲಿಟೆಕ್ನಿಕ್ಸ್ ಬಗ್ಗೆ ಹಣದ ಕೊರತೆ ಇದೆ ಎಂದು ಅಲ್ಲಿನ ಪ್ರೊಫೆಸರ್ಸ್ ಹೇಳುತ್ತಿದ್ದಾರೆ. ಇಲ್ಲಿಗೆ ಹಣ ಹೆಚ್ಚು ಒದಗಿಸಬೇಕು. ಮತ್ತು ಅಲ್ಲಿ ಸಣ್ಣಸಣ್ಣ ಅನುಕೂಲಗಳೂ ಇಲ್ಲ. ಅಲ್ಲಿ ಪಾಲಿಟೆಕ್ನಿಕ್‌ಗಳಲ್ಲಿ ಹುಡುಗರಿಗೆ ಮತ್ತು ಅಲ್ಲಿನ ಉಪಾಧ್ಯಾಯರಿಗೆ ಸರಿಯಾದ ಲ್ಯಾವೆಟ್ರಿ ವ್ಯವಸ್ಥೆ ಇಲ್ಲ. ಈ ಬಗ್ಗೆ ದಿಟ್ಟ ತೀರ್ಮಾನ ಮಾಡಿ ಅನುಕೂಲ ಮಾಡಿಕೊಡಬೇಕು. ಇವತ್ತು ಪ್ರೈವೇಟ್ ಪಾಲಿಟೆಕ್ನಿಕ್‌ನಲ್ಲಿ ವಿದ್ಯಾರ್ಥಿಗಳಿಗೆ ಸರಿಯಾದ ಅನುಕೂಲತೆಗಳು ಸಿಗುತ್ತಾ ಇಲ್ಲ. ಇನ್ನು ನಮ್ಮ ರಾಜಾಜಿನಗರದಲ್ಲಿ ಒಂದು ಪ್ರೈವೇಟ್ ಪಾಲಿಟೆಕ್ನಿಕ್ ಇದೆ. ಅಲ್ಲಿ ಏನೂ ಇಲ್ಲ. ಬರೀ ಬೋರ್ಡ್ ಮಾತ್ರ ಇದೆ. ಇಂತಹದ್ದಕ್ಕೆ ಏಕೆ ಅವಕಾಶ ಮಾಡಿಕೊಡುತ್ತೀರಿ? ಇಂತಹವನ್ನು ತಾವೇ ತೆಗೆದುಕೊಂಡು ನಡೆಸಿ. ಇವತ್ತು ೧೩೮ ಪಾಲಿಟೆಕ್ನಿಕ್ ಇವೆ ಎಂದರೆ ಏನು ಪ್ರಯೋಜನ ? ಪ್ರೈವೇಟ್‌ನವರು ಒಬ್ಬೊಬ್ಬರಿಂದ ೨—೩—೧೦ ಸಾವಿರ ರೂಪಾಯಿ ಹಣ ಪಡೆಯುತ್ತಿದ್ದಾರೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಸಣ್ಣಪುಟ್ಟ ಲೋಪ ದೋಷಗಳ ಬಗ್ಗೆ ಹೇಳಿದ್ದಾರೆ ಅದನ್ನು ಸರಿಪಡಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು

ರಾಜಾಜಿನಗರದ ಪಾಲಿಟೆಕ್ನಿಕ್ ಬಗ್ಗೆ ಒಂದು ಸಾರಿ ಇನ್ಸ್‌ಪೆಕ್ಟ್ ಮಾಡಿ ಅವರು ಹೇಳಿದ ರೀತಿ ಏನಾದರೂ ಸರಿ ಇಲ್ಲದಿದ್ದರೆ ಮತ್ತು ಸರ್ಕಾರ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಇವತ್ತು ವಿದ್ಯಾರ್ಥಿಗಳಿಗೆ ಕೊಡುತ್ತಿರತಕ್ಕ ಸಮವಸ್ತ್ರಗಳನ್ನು ನೋಡಿದರೆ ಜೈಲಿನಲ್ಲಿ ಇರುವ ಸಮವಸ್ತ್ರದ ರೀತಿ ಇದೆ. ಎಂದರೆ ಪ್ಲೀಸಿಂಗ್ ಕಲರ್, ಮನತಣಿಸುವಂತಹ ಕಲರ್ ಇರುವ ಸಮವಸ್ತ್ರ ಕೊಡಿ. ಇವತ್ತು ಇವನ್ನು ಬೆಂಗಳೂರಿನಲ್ಲೇ ಹೊಲಿಸಿ ಅಲ್ಲೆಲ್ಲಾ ಕಳುಹಿಸುತ್ತೀರಿ. ಇವತ್ತು ದೊಡ್ಡವರಿಗೆ ಚಿಕ್ಕದ್ದನ್ನು, ಚಿಕ್ಕವರಿಗೆ ದೊಡ್ಡ ಸಮವಸ್ತ್ರಗಳನ್ನು ಕೊಟ್ಟಿದ್ದು ಅವನ್ನು ನೋಡಿದರೆ ಚೀಲವನ್ನು ಹಾಕಿದಹಾಗೆ ಕಾಣುತ್ತದೆ. ಹಾಗೂ ಇದನ್ನು ನೋಡಿದರೆ ತಮಾಷೆಯಾಗಿ ಕಾಣುತ್ತದೆ. ಆದ್ದರಿಂದ ಆಯಾಯ ಏರಿಯಾದ ಮಕ್ಕಳಿಗೆ ಆಯಾಯ ಏರಿಯಾದಲ್ಲೇ ಹೊಲಿಗೆ ಮಾಡಿದರೆ ಮಕ್ಕಳಿಗೆ ಅನುಕೂಲವಾಗುತ್ತದೆ ಇನ್ನು ಡೊನೇಷನ್ ಹಾವಳಿ ಬಗ್ಗೆ ಮಂತ್ರಿಗಳಿಗೆ ಕಂಪ್ಲೇಂಟ್ ಮಾಡಲಾಗಿದೆ. ಇವತ್ತು ಎಲ್ಲಾ ಕಡೆ ಭಯ ಬಿಟ್ಟು ೨ ಸಾವಿರ ಕೊಡಿ ೩ ಸಾವಿರ ಕೊಡಿ ಡಿಪಾಸಿಟ್ ಮಾಡಿ ಇಲ್ಲದಿದ್ದರೆ ಓಡಿಸುತ್ತೇವೆಂದು ಹೇಳುತ್ತಿದ್ದಾರೆ ಮೊದಲು ಇದ್ದ ಭಯ ಕೂಡಾ ಈಗ ಅವರಿಗೆ ಇಲ್ಲ. ೩ ಸಾವಿರ ಡಿಪಾಸಿಟ್ ಮಾಡಿ. ಇಲ್ಲ ಓಡಿಸುತ್ತೇವೆ ಎಂದು ಹೇಳುತ್ತಾರೆ. ಇದನ್ನು ಸರಿಮಾಡುತ್ತೀರಾ? ಇನ್ನು ಹೈಸ್ಕೂಲುಗಳಲ್ಲಿ ೧೦೦ ರುಪೀಸ್ ಟೀಚರ್ಸ್ ಎಂದು ಇದ್ದಾರೆ. ಇವರಿಗೆ ಕೊಡುವ ಹಣ ಅವರ ಬಸ್ ಛಾರ್ಜ್‌ಗೆ ಸಾಕಾಗುವುದಿಲ್ಲ. ಏನೋ ಅವರಿಗೆ ಖಾಯಂ ಮಾಡಬಹುದೆಂದು ಅವರು ಆಸೆ ಇಟ್ಟುಕೊಂಡು ಇದ್ದಾರೆ. ಕಾಲೇಜು ಲೆಕ್ಚರರ್ಸ್ ಬಗ್ಗೆ ಟೆಂಪರರಿ ಅಪಾಯಿಂಟ್‌ಮೆಂಟ್ ಬಗ್ಗೆ ಮೊದಲನೆಯ, ಮತ್ತು ಎರಡನೆಯ ಲಿಸ್ಟ್ ಹೊರಬಂತು. ಆದರೆ ಮೂರನೇ ಲಿಸ್ಟ್‌ನಲ್ಲಿ ಅಕ್ರಮಕ್ಕೆ ಅವಕಾಶವಾಗಿದೆ. ಇದನ್ನು ತಡೆಹಿಡಿದು ಆಗಿರತಕ್ಕ ಅಕ್ರಮವನ್ನು ಸರಿಮಾಡುತ್ತೀರಾ?

ಶ್ರೀ ಎಂ. ರಘುಪತಿ.—ಅಂತಹ ಯಾವುದೇ ಅಕ್ರಮ ನಡೆದಿದ್ದರೂ ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ. ಆ ಬಗ್ಗೆ ನಿರ್ದಿಷ್ಟ ದೂರನ್ನು ಬರೆದುಕೊಟ್ಟರೆ ಸರಿಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಇನ್ನು ಕಿರಿಯ ಕಾಲೇಜುಗಳ ೯೦೦ ಉಪನ್ಯಾಸಕರ ಪೋಸ್ಟಿಂಗ್ಸನ್ನು ಈ ಸಾರಿ ಫುಲ್‌ಫಿಲ್ ಮಾಡುತ್ತಿದ್ದೇವೆ. ಇದಕ್ಕಾಗಿ ಸ್ಪೆಷಲ್ ರೆಕ್ರೂಟ್‌ಮೆಂಟ್ ಕಮಿಟಿ ಮಾಡಿದ್ದೇವೆ. ಅದನ್ನು ಮಾಡಿ ಅದರ ಮೂಲಕ ಭರ್ತಿ ಮಾಡುತ್ತಿದ್ದೇವೆ. ಯಡಿಯೂರಪ್ಪನವರೇ, ಮುಂದಿನ ವರ್ಷ ಯಾವ ಕಿರಿಯ ಕಾಲೇಜುಗಳಲ್ಲಿ, ಹೈಸ್ಕೂಲುಗಳಲ್ಲಿ ಎಲ್ಲೂ ಉಪಾಧ್ಯಾಯರ ಹುದ್ದೆ ಖಾಲಿ ಇರುವುದಿಲ್ಲ. ಪ್ರಮೋಷನ್‌ನ್ನು ಕೂಡಾ ಕೊಡಲಾಗುತ್ತದೆ. ಈಗಾಗಲೇ ೨ ವಿಭಾಗಗಳಲ್ಲಿ ಇಂಟರ್‌ವ್ಯೂ ಕೂಡಾ ಆಗಿದೆ. ಇನ್ನು ಸಮವಸ್ತ್ರಗಳ ಬಗ್ಗೆ ಹೇಳುವುದಾದರೆ ೨೨ ಲಕ್ಷ ಸಮವಸ್ತ್ರಗಳನ್ನು ಕೊಡುವಾಗ ಸ್ವಲ್ಪ ಕಷ್ಟವಾಗುತ್ತದೆ. ನಾವು ಉತ್ತಮವಾದಂತಹ ಬಟ್ಟೆಗಳನ್ನು ಕೊಡುತ್ತಿದ್ದೇವೆ. ನಾನು ಹೋದವರ್ಷ ಬೇಡಿಕೆಗಳ ಮೇಲೆ ಪ್ರಸ್ತಾಪ ಮಾಡುವಾಗ ೧೬ ಆಶ್ವಾಸನೆಗಳನ್ನು ಕೊಟ್ಟಿದ್ದೆ. ಅದರಲ್ಲಿ ೧೪ನ್ನು ಪೂರೈಸಿ ಸರ್ಕಾರಿ ಆಜ್ಞೆ ಹೊರಡಿಸಿದ್ದೇವೆ. ಇನ್ನೊಂದು ಸಂತೋಷದ ವಿಷಯವೆಂದರೆ, ಇನ್ನು ಮುಂದೆ ಪಾಲಿಟೆಕ್ನಿಕ್‌ನಲ್ಲಿ ೧೦೦ಕ್ಕೆ ೨೫ರಷ್ಟು ಸ್ಥಾನಗಳನ್ನು ಗ್ರಾಮೀಣ ವಿದ್ಯಾರ್ಥಿಗಳಿಗೆ, ರೈತರ ಮಕ್ಕಳಿಗೆ ಕೊಡಬೇಕೆಂದು ಈ ಸದನದಲ್ಲಿ ಸದಸ್ಯರು ಅಭಿಪ್ರಾಯ ಪಟ್ಟರು. ಅದು ೨೫ ಅಲ್ಲ, ೩೦ ಪರ್ಸೆಂಟ್‌ಗೆ ಏರಿಸಿದ್ದೇವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ. ೧೯೭೫–೭೬ನೇ ಸಾಲಿನಲ್ಲಿ ಗ್ರ್ಯಾಂಟ್ ಇನ್ ಏಡ್ ಶಾಲೆಗಳಲ್ಲಿ ಅನುದಾನ ಪಡೆಯುವ ಶಾಲೆಗಳಿಗೆ ೫ ವರ್ಷ ಇದ್ದುದನ್ನು ೭ ವರ್ಷಗಳಿಗೆ ಏರಿಸಿದ್ದೇವೆಂದು ಹೇಳಿದರು. ಇವತ್ತು ಎಷ್ಟೋ ಕಡೆ ಈ ಅನುಕೂಲಗಳು ಸಿಗುತ್ತವೆಂದೇ ಶಾಲೆಗಳನ್ನು ಒಳ್ಳೆಯ ಉದ್ದೇಶದಿಂದ ಪ್ರಾರಂಭ ಮಾಡಿದ್ದಾರೆ. ಈಗ ಏನು ಆಜ್ಞೆ ಹೊರಡಿಸಿದ್ದೀರಿ ಇದರಿಂದಾಗಿ ಹಳೇ ಶಾಲೆಗಳಿಗೆ ಅನುಕೂಲ ಮೊಟಕು ಆಗಬಾರದು. ಆದ್ದರಿಂದ ಈ ಆಜ್ಞೆಯನ್ನು ಅವರಿಗೆ ಅನ್ವಯಿಸುವುದು ಬೇಡ. ಇನ್ನು ಸ್ನಾತಕೋತ್ತರ ಪ್ರೌಢ ಶಾಲೆ ಶಿಕ್ಷಕರಿಗೆ ಸರ್ಕಾರಿ ಕಿರಿಯ ಕಾಲೇಜಿನ ಉಪಾಧ್ಯಾಯರಾಗಿ ಬಡ್ತಿ ಕೊಡುತ್ತೇವೆಂದು ೧೯೭೪ರಿಂದ ಹೇಳುತ್ತಿದ್ದೀರಿ. ಹಾಗೂ ಈ ಬಗ್ಗೆ ಪತ್ರಿಕಾ ಹೇಳಿಕೆ ಕೂಡಾ ಕೊಟ್ಟಿದ್ದೀರಿ. ಹೀಗೆ ೭೨೬ ಹುದ್ದೆಗಳು ಇದ್ದು ಕಾನ್‌ಫಡೆನ್ಷಿಯಲ್ ರಿಪೋರ್ಟ್ ಕೂಡಾ ತರಿಸಿಕೊಂಡಿದ್ದೀರಿ. ಆದರೆ ಇದುವರೆವಿಗೂ ಕಾರ್ಯರೂಪಕ್ಕೆ ತಂದಿಲ್ಲ. ದಯಮಾಡಿ ಈ ಬಗ್ಗೆ

ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನು ಗ್ರಾಂಟ್ ಇನ್ ಏಡ್‌ಗೆ ಒಳಪಡದ ಶಾಲೆಗಳಲ್ಲಿ ಅವರೇ ಯಾರೇ ಉಪಾಧ್ಯಾಯರನ್ನು ಅವರು ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕು. ಇನ್ನು ವಿದ್ಯಾರ್ಥಿಗಳಲ್ಲಿ ನೈತಿಕ ಮಟ್ಟ ಕಡಿಮೆ ಆಗುತ್ತಿರುವ ಸಮಯದಲ್ಲಿ, ಅವರ ದೈಹಿಕ ಮತ್ತು ಮಾನಸಿಕ ಮಟ್ಟವನ್ನು ಏರಿಸಿಕೊಳ್ಳುವುದಕ್ಕಾಗಿ ಯೋಗ ಅಧ್ಯಯನ ತರಗತಿಗಳನ್ನು ಪ್ರಾರಂಭ ಮಾಡಬೇಕೆಂದು ತಜ್ಞರು ಹೇಳುತ್ತಿರುವುದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಈ ಬಗ್ಗೆ ಸರ್ಕಾರ ಗಮನಹರಿಸುತ್ತದೆಯೇ?

ಶ್ರೀ ಎಂ. ರಘುಪತಿ.—ಗ್ರಾಂಟ್-ಇನ್-ಏಡ್ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಈ ಬಗ್ಗೆ ಮತ್ತೆ ಚರ್ಚೆ ಮಾಡಿ ಈ ರಾಜ್ಯದಲ್ಲಿ ಖಾಸಗೀ ಶಾಲೆಗಳಿಗೆ ಏನೂ ಅನಾನುಕೂಲ ಆಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆಂದು ಹೇಳುತ್ತೇನೆ. ಇನ್ನು ಎರಡನೆಯದಾಗಿ ಬಡ್ತಿ ಬಗೆ ಹೇಳಿದ್ದಾರೆ. ಆ ಬಗ್ಗೆ ನಾವು ಲಿಸ್ಟನ್ನು ಲೋಕಸೇವಾ ಆಯೋಗಕ್ಕೆ ಕಳುಹಿಸಿದ್ದೇವೆ. ನಾವು ಆ ಬಗ್ಗೆ ಗ್ರೆಡೇಷನ್ ಲಿಸ್ಟ್ ಕೂಡಾ ಮಾಡಿದ್ದೇವೆ. ಪಿ.ಎಸ್.ಸಿ. ಯಿಂದ ಇನ್ನು ಒಂದು ವಾರ ಅಥವಾ ೧೦—೧೫ ದಿವಸಗಳಲ್ಲಿ ಲಿಸ್ಟ್ ಬರಬಹುದು. ಈ ಬಗ್ಗೆ ಯಾವ ರೀತಿಯ ಅನ್ಯಾಯವಾಗುವುದಿಲ್ಲ. ಇನ್ನು ಗ್ರಾಂಟ್ ಇನ್ ಏಡ್ ಇಲ್ಲದ ಸಂಸ್ಥೆಗಳ ರೆಕ್ರೂಟ್‌ಮೆಂಟ್ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಈಗ ಕೊಡುವುದಕ್ಕಾಗುವುದಿಲ್ಲ. ನಿಮಗೆ ಇನ್ನೊಂದು ಸಂದರ್ಭದಲ್ಲಿ ಆ ಬಗ್ಗೆ ವಿವರಣೆಯನ್ನು ಕೊಡುತ್ತೇನೆಂದು ಹೇಳುತ್ತೇನೆ.

SRI J. A. FERNANDEZ.—Mr. Speaker, Sir, Hon'ble Minister has not answered the point I raised regarding introduction of vocational course at 8th standard of the SSLC scheme of examinations. Secondly, I would like to know whether it is the intention of the Government to withdraw permission granted to High Schools if they don't have their own buildings.

Then, I also raised a point about grant for the Anglo-Indian students who are roughly about 2,000 studying in schools would be benefitted. Will the Hon'ble Minister kindly agree to this point as a special case and give us an assurance to-day possibly in English.

SRI M. RAGHUPATHI.—I would like to tell the hon. Member that whatever difficulties faced by the Anglo-Indian community students we will safeguard them and see that their interest are not jeopardized.

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೆ, ೧೯೮೩ ರಿಂದಲೂ ಮಿತವ್ಯಯ ಕಾರಣದಿಂದ ಬೋಧಕೇತರ ಸಿಬ್ಬಂದಿವರ್ಗವನ್ನು ನೇಮಿಸಲು ಸಾಧ್ಯವಿಲ್ಲ ಎಂದು ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇದರಿಂದಾಗಿ ಹೊಸದಾಗಿ ಪ್ರಾರಂಭವಾಗತಕ್ಕ ಶಾಲೆಗಳಿಗೆ ಸಿಬ್ಬಂದಿ ವರ್ಗವನ್ನು ನೇಮಿಸಿಕೊಳ್ಳಲು ತೊಂದರೆಯಾಗಿದೆ. ಆ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಬರುತ್ತದೆ, ಗುಮಾಸ್ತರ ಕೊರತೆ ಬರುತ್ತದೆ, ಮತ್ತು ಜವಾನರ ಕೊರತೆ ಬರುತ್ತದೆ. ಇವರುಗಳಿಲ್ಲದೆ ಶಾಲೆಗಳನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಸರ್ಕಾರದವರು ಪುನರ್ ವಿಮರ್ಶೆ ಮಾಡುತ್ತಾರೆಯೆ ?

ಶ್ರೀ ಎಂ. ರಘುಪತಿ.—ಎಕಾನಮಿ ಆರ್ಡರ್ ಇರುವುದರಿಂದ ಈ ಸಂದರ್ಭದಲ್ಲಿ ನೇಮಕಾತಿ ಮಾಡುವುದು ಕಷ್ಟವಾಗಿದೆ.

ಶ್ರೀ ಹೆಚ್. ಎಸ್. ಕೌಜಲಗಿ.—ಮಾನ್ಯ ಅಧ್ಯಕ್ಷರೆ, ಕಿತ್ತೂರು ಚೆನ್ನಮ್ಮ ರೆಸಿಡೆನ್ಷಿಯಲ್ ಸ್ಕೂಲ್‌ಗೆ ಬಿಜಾಪುರ ಸೈನಿಕ್ ಶಾಲೆಗೆ ಕೊಡುವಂತೆಯೇ ಧನಸಹಾಯವನ್ನು ನೀಡಬೇಕೆಂದು ಹಿಂದೆಯೇ

ಕೇಳಿಕೊಂಡಿದ್ದೆವು. ಆದರೆ ಇರುವರೆಗೂ ನಮ್ಮ ಬೇಡಿಕೆಯನ್ನು ಸರ್ಕಾರ ಈಡೇರಿಸಿಲ್ಲವಾದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಈ ಶಾಲೆಗೆ ಈವರ್ಷ ಹೆಚ್ಚುವರಿ ಹಣವನ್ನು ಒದಗಿಸುತ್ತಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ನಮ್ಮ ಸಿದ್ದಾಪುರ ತಾಲ್ಲೂಕಿಗೆ ಒಂದು ಹೈಸ್ಕೂಲ್ ಬೇಕೆಂದು ೮೩ನೇ ಇಸವಿಯಿಂದಲೂ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತಲೇ ಬಂದಿದ್ದೇವೆ. ಈಗ ಅಲ್ಲಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಹೈಸ್ಕೂಲು ಅನವಶ್ಯಕವಾಗಿರುವುದರಿಂದ ಸಿರ್ಸಿ–ಸಿದ್ದಾಪುರಕ್ಕೆ ಒಂದು ಹೈಸ್ಕೂಲನ್ನು ಈ ವರ್ಷ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

ಎರಡನೆಯದಾಗಿ, ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಶಿಕ್ಷಕರನ್ನು ವರ್ಗಾವಣೆ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇದನ್ನು ಮಾಡುತ್ತಾರೆಯೋ, ಇಲ್ಲವೊ ಎಂದು ತಿಳಿಸಬೇಕು.

ಮೂರನೆಯದಾಗಿ, ಹೈದರಾಬಾದ್ ಸಂಬಳ ಶ್ರೇಣಿಯನ್ನು ಕೆಲವು ಉಪಾಧ್ಯಾಯರಿಗೆ ಕೊಟ್ಟು ಇನ್ನು ಕೆಲವರಿಗೆ ಇದುವರೆಗೂ ಕೊಟ್ಟಿಲ್ಲ. ಈರೀತಿಯ ತಾರತಮ್ಯ ಸರಿಯಲ್ಲ. ಆದ್ದರಿಂದ ಎಲ್ಲ ಉಪಾಧ್ಯಾಯರಿಗೂ ಹೈದರಾಬಾದ್ ಸಂಬಳ ಶ್ರೇಣಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ಸಚಿವರಾದ ಗೋವಿಂದೇಗೌಡರಿಗೆ ಸಂಬಂಧಪಟ್ಟ ವಿಷಯವಾದ್ದರಿಂದ ಅವರು ಇದಕ್ಕೆ ಉತ್ತರವನ್ನು ಹೇಳುತ್ತಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ. ನಮ್ಮ ಮೈಸೂರಿನಲ್ಲಿ ೫೦ ವರ್ಷದಿಂದ ಕನ್ನಡ ಕೇಂದ್ರ ಎಂದು ಇದೆ. ಇಲ್ಲಿಗೆ ಟಿಸಿಹೆಚ್. ಮಾಡಿಕೊಂಡ ಉಪಾಧ್ಯಾಯರನ್ನು ೪ ವರ್ಷಕಾಲ ಟ್ರೈನಿಂಗ್ ತೆಗೆದುಕೊಳ್ಳಲು ಕಳುಹಿಸಿಕೊಡುತ್ತಾರೆ. ಪ್ರತಿವರ್ಷವೂ ಅಲ್ಲಿಗೆ ಬರತಕ್ಕ ಶಿಕ್ಷಕರಿಗೆ ಸುಮಾರು ೧ ಲಕ್ಷ ರೂ.ಗಿಂತಲೂ ಹೆಚ್ಚು ಖರ್ಚಾಗುತ್ತದೆ. ಅಲ್ಲಿ ಕನ್ನಡ ಭಾಷೆ, ವ್ಯಾಕರಣ, ಚರಿತ್ರೆ, ಛಂದಸ್ಸು ಮುಂತಾದುವುಗಳ ಬಗ್ಗೆ ತರಬೇತಿ ಕೊಡಲಾಗುತ್ತಿದೆ. ಅಲ್ಲ ತರಬೇತಿಯನ್ನು ಪಡೆದುಬಂದವರನ್ನು ಪ್ರೌಢಶಾಲೆಗಳಿಗೆ ಪ್ರಾಧ್ಯಾಪಕರುಗಳನ್ನಾಗಿ ಹಿಂದೆ ನೇಮಕ ಮಾಡುತ್ತಿದ್ದರು. ಆದರೆ ಇತ್ತೀಚಿಗೆ ಅಲ್ಲಿಂದ ತರಬೇತಿ ಪಡೆದು ಬರತಕ್ಕ ಶಿಕ್ಷಕರನ್ನು ಪ್ರಾಥಮಿಕಶಾಲೆಗಳಿಗೆ ನೇಮಕ ಮಾಡುತ್ತಿದ್ದಾರೆ, ಉತ್ತಮ ತರಬೇತಿಯನ್ನು ಕೊಟ್ಟು ಪ್ರೌಢಶಾಲೆಗಳಿಗೆ ಹಾಕಿದರೆ ಅದರಿಂದ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ. ಆದರೆ ಪ್ರಾಥಮಿಕ ಶಾಲೆಗಳಿಗೆ ನೇಮಕ ಮಾಡಿದರೆ ಅದರಿಂದ ಏನು ಪ್ರಯೋಜನವಾಗುತ್ತದೆ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ತರಬೇತಿ ಪಡೆದು ಬಂದವರನ್ನು ಪ್ರೌಢಶಾಲೆಗಳಿಗೆ ನೇಮಕ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಂ. ರಘುಪತಿ.–ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಇಲಾಖೆಯ ಅಧಿಕಾರಿಗಳೊಡನೆ ಪ್ರಸ್ತಾಪ ಮಾಡುತ್ತಿದ್ದೇನೆ. ಇದರ ಬಗ್ಗೆ ಅತಿಶೀಘ್ರವಾಗಿ ಒಂದು ಪರಿಹಾರವನ್ನು ಕಂಡು ಹಿಡಿಯುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಪಿ. ಎಲ್. ಉಸ್ತಾದ್.—ಮೈನಾರಿಟಿ ಇನ್‌ಸ್ಟಿಟ್ಯೂಷನ್ಸ್‌ಗೆ ಲೆಕ್ಚರರ್‌ಗಳನ್ನು ನೇಮಕ ಮಾಡಲು ಸರ್ಕಾರದ ಪೂರ್ವಭಾವಿ ಅನುಮತಿ ಬೇಕಾಗಿಲ್ಲ ಎಂದು ಸಂವಿಧಾನದ ನಿಯಮ ೩೦(೧)ರಲ್ಲಿ ಉಲ್ಲೇಖಿಸಿದೆ. ಬಿಜಾಪುರದ ಅಂಜುಮನ್ ಇಸ್ಲಾಂ ಕಾಲೇಜಿನಲ್ಲಿ ೮೫ನೇ ಇಸವಿಯಿಂದ ಒಂದು ಲೆಕ್ಚರರ್ ಹುದ್ದೆ ಖಾಲಿಇದೆ ಇದುವರೆಗೂ ಆ ಹುದ್ದೆಯನ್ನು ಸರ್ಕಾರ ತುಂಬಿಲ್ಲ ಈ ಬಗ್ಗೆ ನಾನು ಮಾನ್ಯ ಸಚಿವರ ಹತ್ತಿರ ಮಾತನಾಡಿದಾಗ ಇದಕ್ಕೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ನ ರೂಲಿಂಗ್ ಇದೆಯೆಂದು ಹೇಳಿದರು. ಆ ರೂಲಿಂಗ್ ಏನು ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ವರ್ಷಗಟ್ಟಲೆ ಆದರೂ ಈ ಹುದ್ದೆಯನ್ನು ತುಂಬದೇ ಇರುವುದರಿಂದ ತಕ್ಷಣವೇ ಇದನ್ನು ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.— ಮೈನಾರಿಟೀಸ್ ಇನಸ್ಟಿಟ್ಯೂಷನ್ಸ್ ಎಂದಮಾತ್ರಕ್ಕೆ ಅವರು ತಮ್ಮ ಇಷ್ಟಾನುಸಾರ ನೇಮಕಾತಿಗಳನ್ನು ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಸರ್ಕಾರದ ಅನುದಾನವನ್ನು ಅವರು ತೆಗೆದುಕೊಳ್ಳುವವರೆಗೂ ಸರ್ಕಾರದ ನೀತಿಯನ್ನು ಅವರು ಅನುಸರಿಸಬೇಕಾಗುತ್ತದೆ.

ಶ್ರೀ ಕೆ. ಕೆಂಪೀರೇಗೌಡ.—ತಾಂತ್ರಿಕ ವಿಶ್ವವಿದ್ಯಾನಿಲಯದ ಸ್ಥಾಪನೆಯ ಬಗ್ಗೆ ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡುತ್ತೇವೆಂದು ತಾವು ಹೇಳಿದ್ದೀರಿ. ಆ ತಜ್ಞರ ಸಮಿತಿಯು ತನ್ನ ವರದಿಯನ್ನು ಕೊಟ್ಟಿದೆಯೆ ? ಕೊಟ್ಟಿದ್ದರೆ ಅವರು ಮಾಡತಕ್ಕ ಶಿಫಾರಸು ಏನು ಎಂಬುದನ್ನು ಸಭೆಗೆ ಹೇಳಬೇಕು. ಕೃಷಿ ವಿಶ್ವವಿದ್ಯಾನಿಲಯ ಇರುವಂತೆಯೇ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡುತ್ತೇವೆಂದು ಕಳೆದಸಾರಿಯೇ ಮಾನ್ಯ ವಿದ್ಯಾ ಸಚಿವರು ಹೇಳಿದ್ದರು. ಇದು ಯಾವ ಹಂತದಲ್ಲಿದೆ ಎಂಬುದನ್ನು ವಿದ್ಯಾ ಸಚಿವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ನಾವು ಏನೊಂದು ಸಮಿತಿಯನ್ನು ನೇಮಕ ಮಾಡಿದ್ದೆವು, ಅವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಈ ವಿಚಾರ ಪರಿಶೀಲಿಸಲಾಗುತ್ತದೆ. ವೈದ್ಯಕೀಯ ಬೇಡಿಕೆಯನ್ನು ಸಭೆಯ ಮುಂದಿಟ್ಟಾಗ ಸಂಬಂಧಪಟ್ಟ ಸಚಿವರು ಅದಕ್ಕೆ ಉತ್ತರ ಹೇಳುತ್ತಾರೆ.

ಶ್ರೀ ರಾಮನಾಥ ರೈ.—ನಮ್ಮ ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಮಾನ್ಯ ಶಿಕ್ಷಣ ಸಚಿವರು ಕಳೆದಸಾರಿ ಕೆಲವಾರು ಘೋಷಣೆಯನ್ನು ಮಾಡಿದರು. ಅದರಲ್ಲಿ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ನಿರ್ದೇಶನಾಲಯವನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ಯಾವಾಗ ಮಾಡುತ್ತೀರಿ ?

ಇನ್ನು ಬರುವ ನವೆಂಬರ್ ೧ನೇ ತಾರೀಖಿನೊಳಗೆ ರಾಜ್ಯದ ಎಲ್ಲಾ ಶಾಲಾ ಕಾಲೇಜುಗಳಲ್ಲೂ ಖಾಲಿ ಇರತಕ್ಕ ಅಧ್ಯಾಪಕರ ಮತ್ತು ಉಪಾಧ್ಯಾಯರುಗಳ ಹುದ್ದೆಗಳನ್ನೂ ಭರ್ತಿ ಮಾಡುತ್ತೇವೆ, ಯಾವ ಶಾಲಾ ಕಾಲೇಜುಗಳಲ್ಲೂ ಅಧ್ಯಾಪಕರ ಕೊರತೆ ಇಲ್ಲ ಎನ್ನುವ ರೀತಿಯಲ್ಲಿ ಹುದ್ದೆಗಳನ್ನು ಭರ್ತಿಮಾಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡಬೇಕು.

ಶ್ರೀ ಎಂ. ರಘುಪತಿ.—ಈಗ ಏನು ಉಪಾಧ್ಯಾಯರನ್ನು ಹಂಗಾಮಿಯಾಗಿ ನೇಮಕ ಮಾಡಿದ್ದೇವೆ ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದೇವೆ.

ಇನ್ನು ಮೈನಾರಿಟಿ ಇನ್‌ಸ್ಟಿಟ್ಯೂಷನ್‌ಗೆ ಸಂಬಂಧಪಟ್ಟಂತೆ ಒಂದು ನಿರ್ದೇಶನಾಲಯವನ್ನು ತೆರೆದು ಒಬ್ಬ ಡೆಪ್ಯುಟಿ ಡೈರೆಕ್ಟರ್‌ರವರನ್ನು ನೇಮಕ ಮಾಡಲು ಕ್ರಮ ಕೈಗೊಳ್ಳುತ್ತಿದ್ದೇವೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಸಚಿವರಲ್ಲಿ ಅಧ್ಯಕ್ಷರ ಮೂಲಕ ಒಂದು ಕ್ಲಾರಿಫಿಕೇಷನ್ ಕೇಳ ಬಯಸುತ್ತೇನೆ. ಪಿ.ಯು.ಸಿ. ಪರೀಕ್ಷೆಯ ರಿಸಲ್ಟ್ ಬಂದಮೇಲೆ ಎಂಟ್ರೆನ್ಸ್ ಎಕ್ಸಾಮಿನೇಷನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ...

ಅಧ್ಯಕ್ಷರು.—ಈಗ ಕಾಲಾವಕಾಶ ಇಲ್ಲ ದಯವಿಟ್ಟು ಕೂತುಕೊಳ್ಳಿ. ಆಮೇಲೆ ಮಾನ್ಯ ಸಚಿವರಾದ ಗೋವಿಂದೇಗೌಡರ ಉತ್ತರದ ನಂತರ ಕ್ಲಾರಿಫಿಕೇಷನ್ ಕೇಳಲು ತಮಗೆ ಅವಕಾಶ ಕೊಡುತ್ತೇನೆ. ಈಗ ನಿಮಗೆ ಕೊಟ್ಟರೆ ಆಕಡೆಯ ಸದಸ್ಯರಿಗೂ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು ಕ್ಲಾರಿಫಿಕೇಷನ್‌ಗೆ ಮಾತ್ರ ಉತ್ತರ ಹೇಳಿಬಿಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಪ್ರವೇಶ ಪರೀಕ್ಷೆಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಪರೀಕ್ಷೆ ಫಲಿತಾಂಶ ಬಂದಮೇಲೆ ಪ್ರವೇಶ ಪರೀಕ್ಷೆಯನ್ನು ನಡೆಸುವುದಾದರೆ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತದೆ. ಫಲಿತಾಂಶ ಹೊರಬೀಳಬೇಕಾದರೆ ಜೂನ್–ಜುಲೈ ತಿಂಗಳು ಆಗುತ್ತದೆ. ಅನಂತರ ಪರೀಕ್ಷೆ ನಡೆಸಿದರೆ ವಿದ್ಯಾರ್ಥಿಗಳು ಅಕ್ಟೋಬರ್, ನವೆಂಬರ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ, ಇದರಿಂದ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗುತ್ತದೆ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೆ, ಈ ಪ್ರವೇಶ ಪರೀಕ್ಷೆಯನ್ನು ನಡೆಸುವ ವಿಚಾರದಲ್ಲಿ ಸರ್ಕಾರದ ನೀತಿ ಏನು ಎಂಬುದನ್ನು ನಾವು ತಿಳಿದುಕೊಳ್ಳಲು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗಾಗಲೇ ನಾನು ೧೪ ಜನ ಮಾನ್ಯ ಸದಸ್ಯರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದೇನೆ. ಈಗ ಕಾಲಾವಕಾಶ ಬಹಳ ಆಗಿದೆ. ಆದ್ದರಿಂದ ಈಗ ಮಾನ್ಯ ಸಚಿವರಾದ

ಗೋವಿಂದೇಗೌಡರು ಉತ್ತರ ಕೊಡಬೇಕೆಂದು ಕರೆದಿದ್ದೇನೆ. ದಯವಿಟ್ಟು ತಾವು ಕೂತುಕೊಳ್ಳಿ. ತಮಗೆ ಅವಕಾಶ ಕೊಟ್ಟರೆ ಬೇರೆ ಸದಸ್ಯರಿಗೂ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ಸಚಿವರು).— ಸನ್ಮಾನ್ಯ ಸಭಾಧ್ಯಕ್ಷರೆ, ೧೯೮೩-೮೪ನೇ ಸಾಲಿನ ಪ್ರಾಥಮಿಕ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಇಲಾಖೆಯ ಬೇಡಿಕೆಗಳ ಬಗ್ಗೆ ೧೭ ಜನ ಮಾನ್ಯ ಶಾಸಕ ಮಿತ್ರರು ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಈ ಪ್ರಾಥಮಿಕ ಶಿಕ್ಷಣ ಬಹುಶಃ ಎಲ್ಲಾ ಶಿಕ್ಷಣಗಳಿಗಿಂತಲೂ ಹೆಚ್ಚಿನ ಮಹತ್ವ ಪಡೆಯಬೇಕಾಗಿದೆ. ಇದನ್ನು ಎಲ್ಲ ಮಾನ್ಯ ಸದಸ್ಯರೂ ಒಪ್ಪಿಕೊಳ್ಳುತ್ತಾರೆ. ಕಟ್ಟಡಗಳನ್ನು ಕಟ್ಟುವಾಗ ಭದ್ರವಾದ ತಳಪಾಯವನ್ನು ಹಾಕಿದರೆ ಅದರ ಮೇಲೆ ದೊಡ್ಡ ದೊಡ್ಡ ಸೌಧಗಳನ್ನು ಕಟ್ಟಬಹುದು. ಅದೇರೀತಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಕೂಡ ಉತ್ತಮವಾದ ಅವಕಾಶವನ್ನು ಕಲ್ಪಿಸಿಕೊಟ್ಟರೆ ಆ ಮುಂದಿನ ವಿದ್ಯಾಭ್ಯಾಸವಾದ ಸೆಕೆಂಡರಿ ವಿದ್ಯಾಭ್ಯಾಸ ಇರಬಹುದು ತಾಂತ್ರಿಕ ವಿದ್ಯಾಭ್ಯಾಸ ಇರಬಹುದು, ಅಥವಾ ವೈದ್ಯಕೀಯ ವಿದ್ಯಾಭ್ಯಾಸ ಇರಬಹುದು, ಯಾವುದೇ ವಿದ್ಯಾಭ್ಯಾಸಕ್ಕಾಗಲಿ ಉತ್ತಮ ತಳಹದಿಯನ್ನು ಹಾಕಿಕೊಟ್ಟಂತಾಗುತ್ತದೆ. ಭದ್ರವಾದ ಬುನಾದಿಯ ಮೇಲೆ ಭವ್ಯವಾದ ಕಟ್ಟಡವನ್ನು ಕಟ್ಟಿದರೆ ಅದನ್ನು ನೋಡಲು ತುಂಬಾ ಅಂದವಾಗಿ ಕಾಣಿಸುತ್ತದೆ. ಈ ಒಂದು ಅಂಶವನ್ನು ನಾವು ಗಮನದಲ್ಲಿಟ್ಟುಕೊಂಡು ಇವತ್ತು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಬಹುಶಃ ಇನ್ನು ಹೆಚ್ಚು ಜನ ಮಾತಾಡುವಂತಿದ್ದರೆ ಅವರೆಲ್ಲಾರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಇದ್ದರು ಅವರೆಲ್ಲಾರು ಏನೂ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಆ ವಿಷಯದ ಬಗ್ಗೆ ನಾನು ಹೆಚ್ಚು ಗಮನ ಹರಿಸಿದ್ದೇನೆ. ಆದರೆ ಕರ್ನಾಟಕ ರಾಜ್ಯದ ಸಂಪನ್ಮೂಲಗಳ ಪರಿಸ್ಥಿತಿಯನ್ನು ಸಹ ನಾವು ಈ ಸಂದರ್ಭದಲ್ಲಿ ನೆನಪಿನಲ್ಲಿಟ್ಟುಕೊಂಡು ಹೆಚ್ಚು ಗಮನ ಕೊಡಬೇಕೆಂದು ಅಭಿಪ್ರಾಯಪಡುತ್ತೇನೆ. ಕೆಲಸ ಮಾಡತಕ್ಕ ಅಭಿಪ್ರಾಯ ಸರ್ಕಾರಕ್ಕೆ ಇದೆ. ಬಹುಶಃ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಪೂರ್ವ ಪ್ರಾಥಮಿಕಕ್ಕೆ ಹೆಚ್ಚಾಗಿ ಗಮನ ಕೊಡುವುದು ಬಹಳ ಒಳ್ಳೆಯದೆಂದು ಅನೇಕ ಜನಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಅದನ್ನು ನಾನು ಸಹ ಒಪ್ಪುತ್ತೇನೆ. ಬಹುಶಃ ಪ್ರಾಥಮಿಕ ಶಾಲೆಗಳಲ್ಲಿ ಓದತಕ್ಕ ಮಕ್ಕಳನ್ನು ಮನೆಯಲ್ಲಿ ನೋಡುವುದಕ್ಕೋಸ್ಕರ ಕೂಲಿಗಾರರು. ಸಣ್ಣ ಸಣ್ಣ ರೈತರು, ಯಾರು ಯಾರು ಕಷ್ಟ ಜೀವನ ಮಾಡುತ್ತಾ ಇದ್ದಾರೆ ಅವರು ಚಿಕ್ಕ ಮಕ್ಕಳನ್ನು ಮನೆಯಲ್ಲಿ ನೋಡುವುದಕ್ಕೋಸ್ಕರ ಪ್ರಾಥಮಿಕ ಶಾಲೆಗಳಲ್ಲಿ ಬಿಟ್ಟು ಬರತಕ್ಕ ಸಂಪ್ರದಾಯ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ ಇಡೀ ಇಂಡಿಯಾ ದೇಶದಲ್ಲಿದೆ. ಈ ದೃಷ್ಟಿಯಿಂದ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭವಾದರೆ ಬಹುಶಃ ಪ್ರಾಥಮಿಕ ಶಾಲೆಗಳಲ್ಲಿ ಓದತಕ್ಕ ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತದೆ. ಇದು ಬಹಳ ಮುಖ್ಯವಾಗಿರತಕ್ಕ ವಿಚಾರ. ಕರ್ನಾಟಕ ರಾಜ್ಯದಲ್ಲಿ ಆಗಿರಲಿ ಅಥವಾ ಇಡೀ ಇಂಡಿಯಾ ದೇಶದಲ್ಲೇ ಆಗಲಿ, ಈ ಪೂರ್ವ ಪ್ರಾಥಮಿಕ ಶಾಲೆಗಳನ್ನು ಹೆಚ್ಚಾಗಿ ತೆರೆಯಬೇಕು. ಇದರಿಂದ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಡ್ರಾಪ್‌ಔಟ್ಸ್, ಕಡಿಮೆಯಾಗುತ್ತದ. ಹೆಚ್ಚು ಮಕ್ಕಳು ಶಾಲೆಗಳಿಗೆ ಬರುವ ವ್ಯವಸ್ಥೆಯಾಗುತ್ತದೆ. ಇದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇನೆ. ಆದರೆ ಮೊದಲೇ ತಮಗೆ ನಾನು ತಿಳಿಸಿದಂತೆ, ದೇಶದ ಉತ್ಪಾದನೆಯ ಮೇಲೆ ಕಾರ್ಯಕ್ರಮ ಅಳವಡಿಸಿಕೊಂಡು ಹೋಗಬೇಕಾಗುತ್ತದೆ. ಈ ದೃಷ್ಟಿಯಿಂದ ಬಹುಶಃ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೨,೯೯೭ ಪೂರ್ವ ಪ್ರಾಥಮಿಕ ಶಾಲೆಗಳು ಇವೆ. ಕರ್ನಾಟಕ ರಾಜ್ಯದಲ್ಲಿ ಕೆಲವು ಸರ್ಕಾರದ ವತಿಯಿಂದ ನಡೆಯುತ್ತಿವೆ. ಸಮಾಜ ಕಲ್ಯಾಣ ಇಲಾಖೆಯವರು ನಡೆಸುತ್ತಾ ಇದ್ದಾರೆ, ಆಶ್ರಮ ಶಾಲೆಗಳು ಎಂದು ನಡೆಯುತ್ತಾ ಇವೆ, ಮತ್ತು ಕೆಲವನ್ನು ಸ್ಥಳೀಯ ಸಂಸ್ಥೆಗಳು ನಡೆಸುತ್ತಾ ಇವೆ. ನಾವು ಒಟ್ಟಿಗೆ ಲೆಕ್ಕಾಚಾರ ಹಾಕಿದಾಗ ಪೂರ್ವ ಪ್ರಾಥಮಿಕ ಶಾಲೆಗಳು ಹಲವು ಕೆಲಸ ಮಾಡುತ್ತಾ ಇವೆ, ಇಷ್ಟು ಇದ್ದರೂ ಬಹುಶಃ ಇದು ಕಡಿಮೆಯೆಂದು ನಮಗೆ ಅನಿಸುತ್ತಿದೆ. ಇನ್ನೂ ಹೆಚ್ಚಾಗಿ ಇದರ ಅವಶ್ಯಕತೆ ಇದೆ. ಅದರಲ್ಲಿ ಸುಮಾರು ನಾಲ್ಕು ಲಕ್ಷದ ಮೂವತ್ತೆಂಟು ಸಾವಿರದ ಮಕ್ಕಳು ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಾ ಇದ್ದಾರೆ. ಈ ಪೂರ್ವ ಪ್ರಾಥಮಿಕ ಪಾಠಶಾಲೆಗಳಿಗೆ ಹೆಚ್ಚು ಹಣ ಖರ್ಚು ಮಾಡತಕ್ಕ ಪರಿಸ್ಥಿತಿ ಇವತ್ತು ಇಲ್ಲ

ಈಗಿರತಕ್ಕ ಶಾಲೆಗಳು ಏನು ಇವೆ, ಅವುಗಳಿಗೆ ಕಟ್ಟಡಗಳು ಇಲ್ಲವೆಂದು ನನ್ನ ಮಾನ್ಯ ಸ್ನೇಹಿತರು ಹೇಳಿದ್ದಾರೆ, ಇದರಲ್ಲಿ ನಿಜಾಂಶ ಇದೆ. ಆದರೂ ಈ ಪೂರ್ವ ಪ್ರಾಥಮಿಕ ಶಾಲೆಗಳು ಎಲ್ಲಿ ಚೆನ್ನಾಗಿ ನಡೆಯುತ್ತಾ ಇವೆ ಅಲ್ಲಿ ಡ್ರಾಪ್ ಔಟ್ಸ್ ಬಹಳ ಕಡಿಮೆಯಾಗುತ್ತದೆ. ಡ್ರಾಪ್‌ಔಟ್ಸ್ ಬಗ್ಗೆ ತಮಗೆ ಮಾಹಿತಿ ಕೊಡುವುದಾದರೆ ೧೦೦ ಮಕ್ಕಳು ಶಾಲೆಗೆ ಸೇರಿದರೆ ೨ನೇ ತರಗತಿಗೆ ಬರುವಾಗ ೭೦ ಮಕ್ಕಳು ಆಗುತ್ತಾರೆ. ಬಾಕಿ ಉಳಿದಿರತಕ್ಕವರು ಡ್ರಾಪ್‌ಔಟ್ಸ್ ಆಗುತ್ತಾರೆ ೩ ನೇ ತರಗತಿಗೆ ಬರುವಾಗ ೬೩ ಮಕ್ಕಳು ಆಗುತ್ತಾರೆ. ೪ ನೇ ತರಗತಿಗೆ ಬರುವಾಗ ೫೫ ಮಕ್ಕಳು ಉಳಿಯುತ್ತಾರೆ, ೫ ನೇ ತರಗತಿಗೆ ಬರುವಾಗ ೩೬ ಮಕ್ಕಳು ಉಳಿಯುತ್ತಾರೆ, ೬ ನೇ ತರಗತಿಗೆ ಬರುವಾಗ ೩೧ ಮಕ್ಕಳು ಉಳಿಯುತ್ತಾರೆ, ೭ ನೇ ತರಗತಿಗೆ ಬರುವಾಗ ೨೮ ಮಕ್ಕಳು ಮಾತ್ರ ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡತಕ್ಕ ವ್ಯವಸ್ಥೆಯಾಗ ಬೇಕಾಗುತ್ತದೆ ಈ ರೀತಿ ತುಂಬಾ ಡ್ರಾಪ್‌ಔಟ್ಸ್ ಆಗುವುದರಿಂದ ಬಹುಶಃ ನಾವು ಯಾವ ರೀತಿಯ ಯೋಜನೆಗಳನ್ನು ಹಾಕಿಕೊಂಡು ಎಷ್ಟೇ ಹೇಳಿದರೂ, ಸಹ ಈ ಡ್ರಾಪ್‌ಔಟ್ಸ್ ಕಡಿಮೆಯಾಗುವುದಿಲ್ಲ ನಮ್ಮ ಗುರಿ ಏನೆಂದರೆ ಈ ಪ್ರಾಥಮಿಕ ಶಾಲೆಗಳನ್ನು ಹೆಚ್ಚು ತೆರೆಯಬೇಕು ಮತ್ತು ಶಾಲೆಗಳಿಗೆ ಬರತಕ್ಕ ಮಕ್ಕಳಿಗೆ ಬಟ್ಟೆಯನ್ನು ಮತ್ತು ಪುಸ್ತಕಗಳನ್ನು ಸಹ ಕೊಡಬೇಕು. ಅದೇ ರೀತಿ ಉಪಾಧ್ಯಾಯರುಗಳನ್ನು ಹೆಚ್ಚಾಗಿ ಒದಗಿಸಿ, ಶಾಲಾ ಕಟ್ಟಡಗಳನ್ನು ಸಹ ನಿರ್ಮಾಣ ಮಾಡಬೇಕು. ಈ ನಾಲ್ಕಾರು ಅಂಶಗಳನ್ನು ನಾವು ಚೆನ್ನಾಗಿ ಅಳವಡಿಸಿಕೊಂಡರೆ ಬಹುಶಃ ಡ್ರಾಪ್‌ಔಟ್ಸ್ ಸಂಖ್ಯೆ ಕಡಿಮೆಯಾಗುತ್ತದೆ ಮತ್ತು ಪ್ರತಿಯೊಬ್ಬರು ವಿದ್ಯಾಭ್ಯಾಸ ಮಾಡುವುದಕ್ಕೆ ಬೇಕಾದ ಸವಲತ್ತನ್ನು ಪಡೆಯುವುದಕ್ಕೆ ವ್ಯವಸ್ಥೆ ಆಗುತ್ತದೆ ಎಂಬುದನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಪ್ರಾಥಮಿಕ ಶಾಲೆಗಳಲ್ಲಿ ೧೯೮೧ ನೇ ಇಸವಿಯಿಂದ ಈಚೆಗೆ ಉಪಾಧ್ಯಾಯರನ್ನು ನೇಮಕ ಮಾಡತಕ್ಕ ವ್ಯವಸ್ಥೆ ಆಗಿರಲಿಲ್ಲ. ಮಾನ್ಯ ಸದಸ್ಯರೇ ೧೯೮೫ ನೇ ಇಸವಿಯಿಂದಲೆ ಸುಮಾರು ೧೯,೩೩೦ ಉಪನ್ಯಾಸಕರನ್ನು ನಾವು ನೇಮಕ ಮಾಡಿಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ, ಅದರಲ್ಲಿ ಸುಮಾರು ೧೬,೮೩೩ ಅಭ್ಯರ್ಥಿಗಳು ಈ ಕೆಲಸಕ್ಕೆ ಬರಲು ತೀರ್ಮಾನ ಮಾಡಿ ಈಗಾಗಲೇ ಕೆಲಸದ ಮೇಲೆ ಹಾಜರಾಗಿದ್ದಾರೆ, ಈ ಸರ್ಕಾರ ಬಂದ ಮೇಲೆ ೨,೦೦೦ ಶಿಕ್ಷಕರನ್ನು ಸಹ ನಾವು ಗುತ್ತಿಗೆಯ ಆಧಾರದ ಮೇಲೆ, ಹಂಗಾಮಿಯಾಗಿ ನೇಮಕ ಮಾಡಿದ್ದೇವೆ. ಸುಮಾರು ೨೦,೫೩೦ ಶಿಕ್ಷಕರನ್ನು ೧೯೮೫ ನೇ ಇಸವಿಯಲ್ಲಿ ನೇಮಕ ಮಾಡಿದ್ದೇವೆ, ಅಂದರೆ ಎಷ್ಟು ಅವಶ್ಯಕತೆ ಇದೆ ಎನ್ನುವುದನ್ನು ತಾವು ಅರ್ಥಮಾಡಿಕೊಳ್ಳಬೇಕು ೧೯೮೧ ನೇ ಇಸವಿಯಿಂದಲೂ ಉಪಾಧ್ಯಾಯರುಗಳನ್ನು ನೇಮಕ ಮಾಡತಕ್ಕ ವ್ಯವಸ್ಥೆ ಇರಲಿಲ್ಲ. ಈ ಸರ್ಕಾರ ಬಂದ ಮೇಲೆ ೧೯೮೫ ನೇ ಇಸವಿಯಲ್ಲಿ ೨೦,೫೩೦ ಉಪಾಧ್ಯಾಯರುಗಳನ್ನು ನಾವು ನೇಮಕ ಮಾಡಿದ್ದೇವೆ. ಇದರಲ್ಲಿ ನಾವು ಗುತ್ತಿಗೆ ಆಧಾರದ ಮೇಲೂ ಸೇರಿಸಿದ್ದೇವೆ. ಅಂದರೆ ಎಷ್ಟು ಸಂಖ್ಯೆಯಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಿದರೂ ಸಹ ದಿನೇ ದಿನೇ ಉಪಾಧ್ಯಾಯರುಗಳ ಅವಶ್ಯಕತೆ ಜಾಸ್ತಿಯಾಗುತ್ತಾ ಇದೆ. ಈ ದೇಶದಲ್ಲಿ ಜನ ಸಂಖ್ಯೆ ಜಾಸ್ತಿಯಾಗುತ್ತಾ ಇದೆ. ಎಷ್ಟೇ ಶಾಲೆಗಳನ್ನು ತೆರೆದರೂ ಸಹ ಜನ ಸಂಖ್ಯೆ ಮಕ್ಕಳ ಸಂಖ್ಯೆ ಜಾಸ್ತಿ ಆಗುತ್ತಾ ಇದೆ. ೨೦,೦೦೦ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದರೂ ಸಹ ಇನ್ನೂ ಅನೇಕ ಪಾಠಶಾಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಉಪಾಧ್ಯಾಯರುಗಳ ಸಂಖ್ಯೆಯಿಲ್ಲ. ಇದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಒಂದೇ ಸಾರಿ ಎಲ್ಲಾ ಕೆಲಸಗಳನ್ನು ಮಾಡುವುದಕ್ಕೆ ಕಷ್ಟವಾಗುತ್ತದೆ. ಒಂದು ವರ್ಷದಲ್ಲಿ ೨೦,೦೦೦ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ. ಹಂತ ಹಂತವಾಗಿ ಈ ಕಾರ್ಯಕ್ರಮಗಳಿಗೆ ನಾವು ಆದ್ಯತೆ ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ತಮಗೆ ಆಶ್ವಾಸನೆ ಕೊಡುತ್ತಿದ್ದೇನೆ. ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ೨೮೦ ಕೋಟಿ ರೂಪಾಯಿಗಳನ್ನು ಪ್ರಾಥಮಿಕ ಶಿಕ್ಷಣಕ್ಕೆ ತೆಗೆದು ಇಟ್ಟಿದೆ. ಬಹಳ ವರ್ಷಗಳಿಂದ ೧೦೦ಕ್ಕೆ ೯೬ ಭಾಗ ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಮಾಡುತ್ತಾ ಇದ್ದೇವೆ. ಈ ಪ್ರಾಥಮಿಕ ಶಿಕ್ಷಣದಲ್ಲಿ ೧೦೦ ಕ್ಕೆ ೯೬ ಭಾಗ ಉಪಾಧ್ಯಾಯರುಗಳ ಸಂಬಳ ಸಹಾಯಕ ವಿದ್ಯಾಧಿಕಾರಿಯವರ ಸಂಬಳ ಇನ್ಸ್‌ಪೆಕ್ಟರ್ಸ್ ಆಫ್ ಸ್ಕೂಲ್ಸ್ ಇವರ ಸಂಬಳಕ್ಕಾಗಿ ಖರ್ಚು ಮಾಡಬೇಕಾಗಿದೆ ಮಿಕ್ಕಿದ್ದ ನೂರಕ್ಕೆ ನಾಲ್ಕು ಭಾಗವನ್ನು ಶಾಲೆಯ ಕಟ್ಟಡಗಳನ್ನು ಕಟ್ಟಿಸತಕ್ಕದ್ದು, ಶಾಲೆಯಲ್ಲಿ ಮಧ್ಯಾಹ್ನದ ಉಪಹಾರವನ್ನು ಏರ್ಪಾಡಿಸುವುದು, ಇತ್ಯಾದಿಗಳ ವ್ಯವಸ್ಥೆಗಾಗಿ ಖರ್ಚು ಮಾಡಲಾಗುವುದು ನೂರಕ್ಕೆ ನಾಲ್ಕು ಭಾಗವನ್ನು ಈ ಶಾಲೆಗಳಿಗಾಗಿ ಖರ್ಚು ಮಾಡಿದ್ದೇವೆ. ಆದರೂ ಈ ಕಟ್ಟಡಗಳು ಆಗಿಲ್ಲ ಆಗಬೇಕು ಎಂಬ ಕಾಳಜಿ ಏನೋ ನಮಗಿದೆ ಅದರ ಬಗ್ಗೆ ಆಸಕ್ತಿ ವಹಿಸಿದ್ದೇವೆ.

ಇದು ಸಂಪೂರ್ಣವಾಗಿ ನಿಜ ೧೦೦ಕ್ಕೆ ನಾಲ್ಕು ಭಾಗ ಹಣದಲ್ಲಿ ಶಾಲಾ ಕಟ್ಟಡಗಳನ್ನು ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೂ ಸಹ ಕಾರ್ಯಕ್ರಮದ ಮಟ್ಟದಲ್ಲಿ ಆಕ್ಷನ್ ಪ್ಲಾನ್ ಎಂಬುದು ಬಹುಶಃ ಶಾಸಕರಿಗೂ ಗೊತ್ತಿದೆ. ಪ್ರತಿ ಗ್ರಾಮಾಂತರ ಮಟ್ಟದಲ್ಲೂ ಶಾಲಾ ಕಟ್ಟಡಗಳನ್ನು ಹೆಚ್ಚು ರೀತಿಯಲ್ಲಿ ಕಟ್ಟಿಸುತ್ತಾ ಇದ್ದೇವೆ. ಎನ್ ಆರ್ ಇ ಪಿ ಯೋಜನೆಯ ಅಡಿಯಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳು. ಪ್ರತಿ ವರ್ಷಕ್ಕೆ ಒಂದು ಸಾರಿ ಆಕ್ಷನ್ ಪ್ಲ್ಯಾನ್ ತಯಾರು ಮಾಡಿ ಶಾಸಕರುಗಳ ಮುಖಾಂತರ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲಿ ಅಪ್ರೂವ್ ಮಾಡಿಸಿ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆ. ಆದಕ್ಕಾಗಿ ಎಲ್ಲಾ ಶಾಸಕರನ್ನು ನಾನು ಅಭಿನಂದಿಸುತ್ತೇನೆ. ಈ ಒಂದು ಯೋಜನೆಯನ್ನು ಕಾರ್ಯಗತ ಮಾಡದಿದ್ದರೆ ಗ್ರಾಮಾಂತರ ಮಟ್ಟದಲ್ಲಿ ಶಾಲಾ ಕಟ್ಟಡಗಳನ್ನು ಉತ್ತಮ ರೀತಿಯಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲ ಆದರೂ ಸಹಾ ಹೆಚ್ಚು ಶಾಲಾ ಕಟ್ಟಡಗಳನ್ನು ಗ್ರಾಮಾಂತರ ಮಟ್ಟದಲ್ಲಿ ಎನ್ ಆರ್ ಇ ಪಿ ಯೋಜನೆಯ ಅಡಿಯಲ್ಲಿ ಕಟ್ಟುವುದಕ್ಕೆ ಸಾಧ್ಯವಾಗಿದೆ. ಮಾನ್ಯ ಅಧ್ಯಕ್ಷರೇ. ಕರ್ನಾಟಕ ರಾಜ್ಯದಲ್ಲಿ ಇನ್ನೂ ೨೨,೮೦೦ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕಾದ ಅವಶ್ಯಕತೆ ಇದೆ. ಅಷ್ಟೊಂದು ಶಾಲಾ ಕಟ್ಟಡಗಳು ಆಗಬೇಕಾಗಿದೆ. ಮಾನ್ಯ ಸದಸ್ಯರುಗಳ ಅನಿಸಿಕೆಗಳು ಏನು ಇವೆ, ಅವುಗಳು ನಿಜವಾಗಿರತಕ್ಕದ್ದು ಇನ್ನೂ ೨೨,೮೦೦ ಶಾಲಾ ಕಟ್ಟಡಗಳನ್ನು ಕಟ್ಟಿಸತಕ್ಕ ವ್ಯವಸ್ಥೆ ಆಗಬೇಕಾಗಿದೆ. ಬಹುಶಃ ನಾವು ಲೆಕ್ಕ ಹಾಕಿಕೊಂಡು ನೋಡಿದಾಗ ಇದಕ್ಕೆ ೫೭ ಕೋಟಿ ೧೧ ಲಕ್ಷ ರೂಪಾಯಿಗಳು ಆಗುತ್ತದೆ. ಶಾಲಾ ಕಟ್ಟಡಗಳನ್ನು ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಕಟ್ಟಿಸತಕ್ಕ ವ್ಯವಸ್ಥೆಯನ್ನು ನಾವು ಕೈಗೆ ಎತ್ತಿಕೊಂಡರೆ ಸುಮಾರು ೫೭ ಕೋಟಿ ೧೧ ಲಕ್ಷ ಬೇಕಾಗುತ್ತದೆ. ಬಹುಶಃ ನನ್ನ ಸ್ನೇಹಿತರು ಹೇಳುತ್ತಾ ಇದ್ದರು, ಅರ್ಬನ್ ಏರಿಯಾದಲ್ಲಿರತಕ್ಕಾ ಶಾಲಾ ಕಟ್ಟಡಗಳು ಬೀಳತಕ್ಕ ಪರಿಸ್ಥಿತಿಯಲ್ಲಿವೆ. ಅವುಗಳನ್ನು ಸರಿಪಡಿಸದಿದ್ದರೆ ಅವರೆಲ್ಲರಿಗೂ ತೊಂದರೆಯಾಗುತ್ತದೆಂದು ಅದು ನಿಜ ಇದು ಇವತ್ತಿನ ಇತಿಹಾಸವಲ್ಲ. ಬಹಳ ವರ್ಷಗಳಿಂದ ಈ ಶಾಲಾ ಕಟ್ಟಡಗಳು ಬೀಳತಕ್ಕ ಪರಿಸ್ಥಿತಿಯಲ್ಲಿವೆ. ಮೊದಲಿನಿಂದಲೂ ಸಹಾ ಅಂದರೆ ಸುಮಾರು ಹತ್ತಾರು ವರ್ಷಗಳಿಂದ ಈ ಶಾಲಾ ಕಟ್ಟಡಗಳ ರಿಪೇರಿಗಾಗಿ ಸುಣ್ಣ ಬಣ್ಣಕ್ಕಾಗಿ ನೂರು ಇನ್ನೂರು ರೂಪಾಯಿಗಳನ್ನು ಕೊಟ್ಟು ಕೆಲಸ ಮಾಡಿಸುತ್ತಿದ್ದು ಸುಮಾರು ವರ್ಷಗಳಿಂದ ಇದೇ ರೀತಿ ನಡೆದು ಕೊಂಡು ಬಂದಿದೆ. ಯಾವುದೇ ಶಾಲೆಗಳನ್ನು ತೆಗೆದುಕೊಂಡರೂ ಸಹ ರಿಪೇರಿಯಾಗಿಲ್ಲ ಆದ್ದರಿಂದ ಈಗ ಒಂದೇ ಸಾರಿ ಎಲ್ಲಾ ಶಾಲೆಗಳಲ್ಲಿ ಕಟ್ಟಡಗಳನ್ನು ರಿಪೇರಿ ಮಾಡಿಸಬೇಕೆಂದು ಅಭಿಪ್ರಾಯ ಪಟ್ಟರೆ ಸುಮಾರು ೭,೨೫೭ ಶಾಲಾ ಕಟ್ಟಡಗಳು ರಿಪೇರಿ ಆಗತಕ್ಕದ್ದು ಇವೆ, ರಿಪೇರಿಗೋಸ್ಕರ ಸುಮಾರು ಮೂರು ಕೋಟಿ ೭೫ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇಷ್ಟು ಬೃಹದಾಕಾರವಾಗಿರುವ ಪ್ರಾಥಮಿಕ ಶಿಕ್ಷಣದ ಬಗ್ಗೆ ನೀವು ಎಲ್ಲಾರೂ ಬಹಳ ಜವಾಬ್ದಾರಿ ವಹಿಸಿ ಮಾತನಾಡಿದ್ದೀರಿ, ಅದು ನನಗೆ ತುಂಬಾ ಸಂತೋಷವಾಗಿದೆ. ಜನ ಜಾಗೃತರಾಗಿದ್ದಾರೆ, ಶಾಸಕರು ಸಹ ನಮ್ಮ ಗಮನವನ್ನು ಆ ಕಡೆ ಎಳೆದಿದ್ದಾರೆ, ಆದರೂ ನಮ್ಮ ಇತಿಮಿತಿಯೊಳಗೆ ನಾವು ಕೆಲಸ ಮಾಡಬೇಕಾಗುತ್ತದೆ. ಎನ್ನತಕ್ಕ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾನು ಸೂಚಿಸುವುದಕ್ಕೆ ಇಚ್ಛೆಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ ಈ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಮಕ್ಕಳ ಸಂಖ್ಯೆ ಸುಮಾರು ೫೭ ಲಕ್ಷಕ್ಕೂ ಮೇಲ್ಪಟ್ಟಿದೆ, ಇಷ್ಟೊಂದು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಮಕ್ಕಳ ಮೇಲ್ವಿಚಾರಣೆ ನೋಡತಕ್ಕ ಜವಾಬ್ದಾರಿ ಕೇವಲ ಸರ್ಕಾರದ ಮೇಲೆ ಮಾತ್ರ ಇಟ್ಟುಕೊಂಡರೆ ಸಾಲುವುದಿಲ್ಲ. ಅದರ ಜೊತೆಗೆ ಸ್ಥಳೀಯ ಸಂಸ್ಥೆಗಳ ಮುಖಂಡರುಗಳು ಮತ್ತು ಖಾಸಗೀಯವರು ಮತ್ತು ಸಾರ್ವಜನಿಕರು; ಬುದ್ಧಿ ಜೀವಿಗಳು ಈ ಮಕ್ಕಳ ಭವಿಷ್ಯತ್‌ನ್ನು ನಿರ್ಮಾಣ ಮಾಡತಕ್ಕ ಜವಾಬ್ದಾರಿಯು ಕಾರ್ಯಕ್ರಮವನ್ನು ಮಾಡಬೇಕಾಗಿದೆ. ಕೇವಲ ಸರ್ಕಾರವೊಂದೆ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಕಾಲವಲ್ಲ. ಸ್ವಾತಂತ್ರ್ಯ ಬಂದು ಸುಮಾರು ೩೮ ವರ್ಷವಾಗಿದೆ ಕರ್ನಾಟಕ ರಾಜ್ಯದಲ್ಲಿ ಸಾಕ್ಷರತೆಯ ಮಟ್ಟ ೩೮ ಪರ್ಸೆಂಟ್ ಇದೆ. ಈ ಒಂದು ಸಾಕ್ಷರತೆಯ ಮಟ್ಟವನ್ನು ಹೆಚ್ಚಾಗಿ ಮಾಡದಿದ್ದರೆ ಯಾವುದೇ ಯೋಜನೆಗಳನ್ನು ಹಾಕಿಕೊಂಡರೂ ಸಹ ಅದು ಫಲ ಕೊಡಬೇಕಾದರೆ ಮತ್ತು ಫಲಾನುಭವಿಗಳಿಗೆ ಅದು ದೊರೆಯಬೇಕಾದರೆ ಎಲ್ಲರೂ ವಿದ್ಯಾವಂತರಾಗತಕ್ಕದ್ದು ಬಹಳ ಒಳ್ಳೆಯದು ಆದ್ದರಿಂದ ಈ ಒಂದು ಸಾಕ್ಷರತೆಯ ಮಟ್ಟ ಜಾಸ್ತಿ ಆಗ ಬೇಕಾದರೆ ಸರ್ಕಾರದ ಮೇಲೆ ಸಂಪೂರ್ಣವಾಗಿ ಜವಾಬ್ದಾರಿಯನ್ನು ಹಾಕದೆ, ಸಾರ್ವಜನಿಕರು, ಸ್ಥಳೀಯ ಸಂಸ್ಥೆ ಮುಖಂಡರುಗಳು, ಮತ್ತು ಬುದ್ಧಿ

ಜೀವಿಗಳು ಇದರಲ್ಲಿ ಹೆಚ್ಚಾಗಿ ಶ್ರಮವಹಿಸಬೇಕು ಎನ್ನುವ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅನೇಕ ಜನ ಮಾನ್ಯ ಸ್ನೇಹಿತರು ತಿಳಿಸಿದರು. ತರಬೇತಿ ಇಲ್ಲದ ಉಪಾಧ್ಯಾಯರುಗಳು ಶಾಲೆಗಳಲ್ಲಿ ಇರುತ್ತಾರೆಂದು. ಇತ್ತೀಚೆಗೆ ಟಿ.ಸಿ ಎಚ್. ಟ್ರೈನಿಂಗ್ ಆಗದೆ ಇರತಕ್ಕಂಥ ನೇಮಕ ಮಾಡದೆ ಇರತಕ್ಕಂಥ ವ್ಯವಸ್ಥೆ ಇರುತ್ತದೆ ಟಿ.ಸಿ. ಎಚ್. ಟ್ರೈನಿಂಗ್ ಆಗಿರತಕ್ಕಂಥವರನ್ನೇ ನೇಮಕ ಮಾಡತಕ್ಕಂಥ ವ್ಯವಸ್ಥೆ ಇದೆ ಮತ್ತೆ ಟ್ರೈನಿಂಗ್ ಆಗದಿರುವ ಉಪಾಧ್ಯಾಯರುಗಳ ಬಗ್ಗೆ ಟ್ರೈನಿಂಗ್ ಕೊಡತಕ್ಕಂಥ ಆವಶ್ಯಕತೆಯ ಬಗ್ಗೆಯೂ ತಿಳಿಸಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ತರಬೇತಿ ಪಡೆದಂಥ ಶಿಕ್ಷಕರುಗಳಿಂದಲೇ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಶಿಕ್ಷಕರಿಗೆ ತರಬೇತಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಆದೇರೀತಿಯಲ್ಲಿ ಆರು ಅಂಶಗಳ ಕಾರ್ಯಕ್ರಮವೆಂದು ಇರುತ್ತದೆ. ಈ ಆರುಅಂಶದ ಕಾರ್ಯಕ್ರಮದಲ್ಲಿ ಇದುಕೂಡ ಒಂದು ಅಂಶವಾಗಿರುತ್ತವೆ. ಉಪಾಧ್ಯಾಯರುಗಳು ಸಂಬಳವನ್ನು ತೆಗೆದುಕೊಳ್ಳಲಿಕ್ಕೆ ಸರ್ಕಲ್ ಆಫೀಸ್‌ಗಳಿಗೆ ಹೋದಾಗ ಹೈಸ್ಕೂಲುಗಳಲ್ಲಿ ಪಾಠವನ್ನು ಹೇಳುವಂಥ ಉಪಾಧ್ಯಾಯರುಗಳು ಸಹ ಅಲ್ಲಿಗೆ ಬಂದಿರುತ್ತಾರೆ, ಅಂಥವರಿಂದ ಈ ಉಪಾಧ್ಯಾಯರುಗಳಿಗೆ ಜ್ಞಾನಮಟ್ಟವನ್ನು ಹೆಚ್ಚು ಮಾಡತಕ್ಕಂಥ ಟ್ರೈನಿಂಗ್‌ನ್ನು ಕೊಡತಕ್ಕ ವ್ಯವಸ್ಥೆ ನಡೆಯುತ್ತಿದೆ. ಒಟ್ಟು ಆರು ಅಂಶಗಳ ಕಾರ್ಯಕ್ರಮವನ್ನು ಅಳವಡಿಸಲಾಗಿದೆ. ಎರಡು ವರ್ಷಗಳಿಂದೀಚೆಗೆ ಮಾಡಿರುವಂಥ ಈ ಕಾರ್ಯಕ್ರಮದಿಂದ ಹೆಚ್ಚಿನ ಉಪಾಧ್ಯಾಯರುಗಳಿಗೆ ತರಬೇತಿ ಕೊಡತಕ್ಕಂಥ ವ್ಯವಸ್ಥೆಯಾಗಿದೆ. ಇದರ ಜೊತೆಯಲ್ಲಿ ಎಂ.ಸಿ.ಆರ್.ಟಿ. ಅವರ ನೆರವಿನಿಂದ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರುಗಳಿಗೆ ತರಬೇತಿಯನ್ನು ಕೊಡತಕ್ಕಂಥ ವ್ಯವಸ್ಥೆಯನ್ನೂ ಕೂಡ ಮಾಡಿದ್ದೇವೆ. ಇಷ್ಟಾದರೂ ಸಹ ಡ್ರಾಪ್‌ಔಟ್ಸ್‌ನ್ನು ಕಡಿಮೆ ಮಾಡಬೇಕೆಂದು ಯೋಚನೆ ಮಾಡಿ ಕಳೆದ ವರ್ಷ ಅಕ್ಷರಸೇನೆ ಯೋಜನೆಯನ್ವಯ ೪೨೭೨ ಕ್ಷೇತ್ರಗಳಲ್ಲಿ ೧,೧೮,೦೦೦ ವಿದ್ಯಾರ್ಥಿಗಳು ಲಾಭವನ್ನು ಪಡೆದಿದ್ದಾರೆ.

ಬಹುಶಃ ವಿದ್ಯಾ ವಿಕಾಸ ಯೋಜನೆಯ ಅಡಿಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡತಕ್ಕಂಥ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಸುಮಾರು ಲಕ್ಷಕ್ಕೂ ಮೇಲ್ಪಟ್ಟು ಮಕ್ಕಳು ಶಾಲೆಗೆ ಬರತಕ್ಕಂಥದ್ದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆ. ವಿದ್ಯಾ ವಿಕಾಸ ಅಡಿಯಲ್ಲಿ ಈ ಕಾರ್ಯಕ್ರಮವು ಫಲಪ್ರದವಾಗಿ ನಡೆದು ಡ್ರಾಪ್‌ಔಟ್ ಕಡಿಮೆಯಾಗಿದೆ. ಸುಮಾರು ೧೦೦ಕ್ಕೆ ೭೫ ಜನ ಕಾರ್ಮಿಕರು ಇರುವಂಥ ನಮ್ಮ ರಾಜ್ಯದಲ್ಲಿ ಅವರಿಗೆ ಈ ಸೌಲಭ್ಯವು ಸಿಕ್ಕುವಂತಾಗಿ ಅವರ ವಿದ್ಯಾಮಟ್ಟವು ಹೆಚ್ಚುವಂತೆ ಮಾಡಲು ಅನುಕೂಲವಾಗುತ್ತದೆ. ಈ ವಿದ್ಯಾ ವಿಕಾಸ ಯೋಜನೆಯಿಂದ ಇಷ್ಟು ಅನುಕೂಲವಾಗುತ್ತದೆಂದು ಹೇಳುವುದಕ್ಕೆ ಈ ಸಂದರ್ಭದಲ್ಲಿ ಇಚ್ಛೆಪಡುತ್ತೇನೆ.

ಇನ್ನು ಉಪಾಧ್ಯಾಯರುಗಳ ಸಂಖ್ಯೆ ಕಡಿಮೆ ಇದೆ ಎಂದು ಅನೇಕ ಮಾನ್ಯ ಸ್ನೇಹಿತರು ತಿಳಿಸಿರುತ್ತಾರೆ. ಪಟ್ಟಣ ಪ್ರದೇಶಗಳಲ್ಲಿ ಉಪಾಧ್ಯಾಯರುಗಳ ಸಂಖ್ಯೆ ಜಾಸ್ತಿ ಇರುತ್ತದೆಂದೂ ಕೂಡ ಹೇಳಿದ್ದಾರೆ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರುತ್ತದೆ. ಇದು ನಾವು ಅಧಿಕಾರಕ್ಕೆ ಬಂದಾಗಿನಿಂದ ಇರತಕ್ಕಂಥ ವ್ಯವಸ್ಥೆಯಲ್ಲ. ಬಹುಶಃ ಪಟ್ಟಣಪ್ರದೇಶಗಳಲ್ಲಿ ವಿದ್ಯಾಭ್ಯಾಸವನ್ನು ಮಾಡಿಸತಕ್ಕಂಥ ಉಪಾಧ್ಯಾಯರುಗಳಿಗೆ ಸ್ವಲ್ಪ ಹೆಚ್ಚುಕಡಿಮೆ ಮಂತ್ರಿಗಳ ಮತ್ತು ಶಾಸಕರುಗಳ, ಖಾಸಗಿ ಮುಖಂಡರುಗಳ ಸಂಪರ್ಕ ಜಾಸ್ತಿ ಇರುತ್ತದೆ. ಹೀಗಿರುವಾಗ ಯಾವುದೇ ಅಧಿಕಾರಿಯನ್ನು ವರ್ಗಮಾಡಿದರೂ ಇನ್‌ಫ್ಲ್ಯೂಯನ್ಸ್ ತೆಗೆದುಕೊಂಡು ಬಂದು ವಾಪಸ್ಸುಗಟ್ಟಲೆ ಇಲ್ಲಿಯೇ ಇರುತ್ತಾರೆಂದು ಹೇಳಿದರೆ ತಪ್ಪಾಗಲಾರದು. ಪಟ್ಟಣಗಳಲ್ಲಿ ಸುಮಾರು ೨೦–೨೨ ವರ್ಷಗಳ ಕಾಲ ಒಂದೇ ಕಡೆ ಇರತಕ್ಕಂಥ ಉಪಾಧ್ಯಾಯರುಗಳು ಕರ್ನಾಟಕ ರಾಜ್ಯದಲ್ಲಿ ಇದ್ದಾರೆ. ಬಹಳ ವರ್ಷಗಳ ಕಾಲದಿಂದ ಇರುವಂಥವರನ್ನು ಗುರುತಿಸಿದ್ದೇವೆ. ಅವರುಗಳನ್ನು ವರ್ಗಾವಣೆ ಮಾಡತಕ್ಕಂಥ ಕಾರ್ಯವನ್ನೂ ಕೂಡ ಕೈಗೊಂಡಿದ್ದೇವೆ. ಅದರಂತೆ ೧೦೦ಕ್ಕೆ ೭೫ ಜನರು ಹಳ್ಳಿಗಳಲ್ಲಿಯೇ ವಾಸ ಮಾಡತಕ್ಕಂಥ ಜನರೂ ಇದ್ದಾರೆ. ಅಲ್ಲಿಗೆ ಇವರುಗಳನ್ನು ವರ್ಗಾವಣೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಅನೇಕಜನ ಮಾನ್ಯ ಸ್ನೇಹಿತರು ತಿಳಿಸಿದ್ದಾರೆ. ತಮ್ಮ ಸಲಹೆ ತುಂಬ ಉಪಯುಕ್ತವಾದ ಸಲಹೆಯಾಗಿದೆ. ಇದನ್ನು ಅನುಷ್ಠಾನಕ್ಕೆ ತರತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಅವರುಗಳೂ ಕೂಡ ನಮ್ಮ ಅಣ್ಣತಮ್ಮಂದಿರು ಇದ್ದಹಾಗೆ ಎಂದು ತಿಳಿದುಕೊಳ್ಳ

ಬೇಕು. ಉಪಾಧ್ಯಾಯರನ್ನು ಹಳ್ಳಿಗಳಿಗೆ ಹಾಕತಕ್ಕಂಥ ಸಂದರ್ಭದಲ್ಲಿ ಯಾರೂ ಮಧ್ಯೆ ಪ್ರವೇಶ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಮತ್ತೆ ಹಳ್ಳಿಗಳಲ್ಲಿ ಇರತಕ್ಕಂಥ ಶಾಲೆಗಳಲ್ಲಿ ೧೨೦–೧೩೦ ಜನ ಮಕ್ಕಳಿಗೆ ಒಬ್ಬರು ಉಪಾಧ್ಯಾಯರು ಇರುತ್ತಾರೆ. ಪಟ್ಟಣಪ್ರದೇಶಗಳಲ್ಲಿ ೧೦೦–೧೨೦ ಜನ ಮಕ್ಕಳಿಗೆ ೪–೫ ಜನ ಉಪಾಧ್ಯಾಯರು ಇರುತ್ತಾರೆಂದು ಮಾನ್ಯ ಸದಸ್ಯರು ಅನೇಕರು ತಿಳಿಸಿರುತ್ತಾರೆ. ಇದು ಒಂದು ಹಿಂದಿನಿಂದ ಬಂದಿರತಕ್ಕಂಥ ಸಂಪ್ರದಾಯವಾಗಿದೆ. ನಾವೇನಾದರೂ ಕಠಿಣವಾದ ಕಾರ್ಯಕ್ರಮವನ್ನು ಕೈಗೊಳ್ಳತಕ್ಕಂಥ ಸಂದರ್ಭಗಳಲ್ಲಿ ಮಧ್ಯೆಯಾರೂ ಪ್ರವೇಶ ಮಾಡಬಾರದು. ಯಾರಿಗಾದರೂ ಅನ್ಯಾಯವಾಗಿದ್ದರೆ ಅವರಿಗೆ ನ್ಯಾಯವನ್ನು ಒದಗಿಸುವಲ್ಲಿ ಸಾಕಷ್ಟು ಪ್ರಯತ್ನ ಮಾಡುತ್ತೇವೆ. ಶಹರುಗಳಲ್ಲಿರತಕ್ಕಂಥ ಉಪಾಧ್ಯಾಯರುಗಳನ್ನು ಹಳ್ಳಿಗಳಿಗೆ ಹಾಕತಕ್ಕಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸಹಕರಿಸಬೇಕೆಂದು ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಬಹುಶಃ ನಾನು ಹೆಚ್ಚಿಗೆ ಮಾತನಾಡಬೇಕಾದ್ದು ಏನೂ ಇಲ್ಲ. ಪ್ರಾಥಮಿಕ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನವನ್ನು ಕೊಡತಕ್ಕಂಥದ್ದು ಬಹಳ ಅಗತ್ಯವಿದೆ. ಕೆಲವು ಕಡೆ ವೇಗ್ ಆಗುವುದಕ್ಕೆ ಸಾಧ್ಯತೆ ಇದೆ. ಈರೀತಿ ಆಗದಂತೆ ಕೆಲಸ ಮಾಡತಕ್ಕಂಥದ್ದು ನಮ್ಮೆಲ್ಲರ ಜವಾಬ್ದಾರಿ ಇರುತ್ತದೆಂದು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ವಯಸ್ಕರ ಶಿಕ್ಷಣ ಪದ್ಧತಿಯ ಬಗ್ಗೆ ಅನೇಕ ಮಾನ್ಯ ಸ್ನೇಹಿತರು ತುಂಬ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಬಹುಶಃ ಅನೇಕ ಜನರು ವಯಸ್ಕರ ಶಿಕ್ಷಣಕ್ಕೂ ಮತ್ತು ಸಾಕ್ಷರತೆ ಇವರೆಡಕ್ಕೂ ಇರತಕ್ಕಂಥ ವ್ಯತ್ಯಾಸವನ್ನು ತಿಳಿದುಕೊಂಡಿರುತ್ತಾರೋ ಇಲ್ಲವೋ ಗೊತ್ತಿಲ್ಲ, ವಯಸ್ಕರ ಶಿಕ್ಷಣದಲ್ಲಿ ಅಡಕವಾಗಿರತಕ್ಕಂಥದ್ದು ಸಾಕ್ಷರತೆ. ಅಂದರೆ ಮೊದಲು ವಿದ್ಯಾಭ್ಯಾಸದಬಗ್ಗೆ ಅರಿವು ಮಾಡಿಸುವುದು. ವಯಸ್ಕರಿಗೆ ಅರಿವನ್ನುಂಟು ಮಾಡತಕ್ಕಂಥದ್ದು ಮತ್ತು ಕ್ರಿಯಾಶೀಲತೆಯನ್ನು ಉಂಟುಮಾಡತಕ್ಕಂಥದ್ದು ವಯಸ್ಕರ ಶಿಕ್ಷಣದಲ್ಲಿ ಸಂಬಂಧಪಟ್ಟಿರತಕ್ಕಂಥ ಕಾರ್ಯಕ್ರಮಗಳಾಗಿರುತ್ತದೆ ಈ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ವಯಸ್ಕರ ಶಿಕ್ಷಣ ಇಲಾಖೆ ತನ್ನ ಕಾರ್ಯವನ್ನು ಮಾಡುತ್ತಿದೆ. ಇದು ಕೇವಲ ಕರ್ನಾಟಕದಲ್ಲಿಯೇ ಅಲ್ಲ. ಇಡಿ ಇಂಡಿಯಾದಲ್ಲಿ ಈರೀತಿಯಾದ ವಯಸ್ಕರ ಶಿಕ್ಷಣ ಸಂಸ್ಥೆಗಳು ಕೆಲಸ ಮಾಡುತ್ತಿದೆ. ಹೊರರಾಷ್ಟ್ರಗಳು ಅಂದರೆ ಅಮೇರಿಕಾ ಮತ್ತು ಕೆನಡಾದಲ್ಲೂ ಕೂಡ ಸಾಕ್ಷರತೆ ಮತ್ತು ವಯಸ್ಕರ ಶಿಕ್ಷಣ ಸಂಸ್ಥೆಗಳು ಇರುತ್ತವೆ. ಹದಿನೈದು ವರ್ಷಗಳಿಂದ ಮೂವತ್ತೈದು ವರ್ಷಗಳವರೆಗೆ ಇರತಕ್ಕಂಥ ವಯಸ್ಕರಿಗೆ ವಿದ್ಯಾಭ್ಯಾಸವನ್ನು ಮಾಡಿಸತಕ್ಕಂಥ ಜವಾಬ್ದಾರಿ ವಯಸ್ಕರ ಶಿಕ್ಷಣ ಸಂಸ್ಥೆಯದಾಗಿರುತ್ತದೆ. ವಯಸ್ಕರ ಶಿಕ್ಷಣ ಸಂಸ್ಥೆಯು ಈ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿ ಕರ್ನಾಟಕದಲ್ಲಿ ಬಹಳ ಉತ್ತಮವಾಗಿ ಕೆಲಸ ಮಾಡಿದಂಥ ಸಂದರ್ಭದಲ್ಲಿ. ಇದನ್ನು ಗುರುತಿಸಿ ಕೇಂದ್ರ ಸರ್ಕಾರದವರು ೧೯೮೩–೮೪ನೇ ಸಾಲಿಗೆ ೭ ಲಕ್ಷ ೭೫ ಸಾವಿರ ರೂಪಾಯಿಗಳ ಧನಸಹಾಯವನ್ನು ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಬಹಳ ಉತ್ತಮವಾಗಿ ಕೆಲಸ ಮಾಡಿದ್ದಕ್ಕೆ ೧೯೮೪–೮೫ನೇ ಸಾಲಿಗೆ ಎಂಟು ಲಕ್ಷ ರೂಪಾಯಿಗಳ ಧನಸಹಾಯವನ್ನು ಮಾಡಿದ್ದಾರೆ. ೧೯೮೫–೮೬ನೇ ಸಾಲಿಗೆ ೨೫ ಲಕ್ಷ ರೂಪಾಯಿಗಳ ಧನಸಹಾಯವನ್ನು ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇಷ್ಟೊಂದು ಉತ್ತಮ ಮಟ್ಟದಲ್ಲಿ ನಡೆಯುವುದಕ್ಕೆ ತ್ಯಾಗ ಮಾಡಿದಂಥ ಎಲ್ಲರಿಗೂ ನಾನು ಅಭಿನಂದಿಸುತ್ತೇನೆ.

ಇನ್ನು ವಿದ್ಯಾಪೀಠದ ಬಗ್ಗೆ ಈ ಸಂದರ್ಭದಲ್ಲಿ ಹೇಳಬೇಕಾದರೆ, ಈ ವಿದ್ಯಾಪೀಠಗಳು ಉತ್ತಮವಾಗಿ ಕೆಲಸ ಮಾಡಬೇಕೆಂಬ ಉದ್ದೇಶಕ್ಕೋಸ್ಕರವಾಗಿ ಹಿಂದಿನ ವಯಸ್ಕರ ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀಮಾನ್ ಸೋಮಶೇಖರ್‌ರವರು, ಶ್ರೀಯುತ ಬಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಆ ಸಮಿತಿಯವರು ಒಂದು ರಿಪೋರ್ಟ್‌ನ್ನು ಸಹ ಕೊಟ್ಟಿರುತ್ತಾರೆ. ವಿದ್ಯಾಪೀಠಗಳು ಯಾವರೀತಿ ಕೆಲಸ ಮಾಡತಕ್ಕಂಥದ್ದು ಇದೆ, ವಯಸ್ಕರ ಶಿಕ್ಷಣದಲ್ಲಿ ಆಗುತ್ತಿರತಕ್ಕಂಥ ಲೋಪದೋಷಗಳು ಏನು, ಇದನ್ನು ಯಾವರೀತಿ ಸರಿಪಡಿಸಬೇಕು ಎನ್ನುವ ಬಗ್ಗೆ ಆರುತಿಂಗಳಲ್ಲಿಯೇ ಸಮಿತಿಯು ಸರ್ಕಾರಕ್ಕೆ ಒಂದು ರಿಪೋರ್ಟ್‌ನ್ನು ಕೊಟ್ಟಿರುತ್ತಾರೆ.

ನಾನು ಇದನ್ನು ಮಾನ್ಯ ಮುಖ್ಯ ಮಂತ್ರಿಯವರಿಗೆ ಕೊಟ್ಟಿದ್ದೇನೆ. ಮತ್ತು ಇದರ ಬಗ್ಗೆ ಚರ್ಚೆ ಕೂಡ ಆಗಿದೆ. ಬಹಳ ಉತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಾನು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಸಲಹೆಗಳನ್ನು ಅವರೇನು ಕೊಟ್ಟಿದ್ದಾರೆ, ಅವು ಗಳನ್ನು ಆದಷ್ಟು ಜಾಗ್ರತೆಯಾಗಿ ಅನುಷ್ಠಾನಕ್ಕೆ ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಒಂದು ಮಾತನ್ನು ಶ್ರೀ ಖರ್ಗೆಯವರು ಹೇಳಿದರು. ಅದೇನೆಂದರೆ, ವರ್ಷ ವರ್ಷ ಈ ವಿದ್ಯಾ ಇಲಾಖೆಗೆ ಕರ್ನಾಟಕ ರಾಜ್ಯದಲ್ಲಿ ಒದಗಿಸತಕ್ಕಂಥ ಹಣ ಕಡಿಮೆಯಾಗುತ್ತಿದೆ ಎಂದು. ಈ ಸಂಬಂಧ ವಾಗಿ ನಾನು ಹೇಳುವುದೇನೆಂದರೆ, ೧೯೮೩–೮೪ನೇ ಇಸವಿಯಲ್ಲಿ ೧೪೫.೭೦ ಕೋಟಿ ರೂಪಾಯಿಗಳನ್ನು ಪ್ರಾಥಮಿಕ ಶಿಕ್ಷಣಕ್ಕೆ ಒದಗಿಸಲಾಗಿತ್ತು. ೧೯೮೪–೮೫ ರಲ್ಲಿ ೧೭೫.೧೦ ಕೋಟಿ ಒದಗಿಸಿದ್ದಾರೆ. ೧೯೮೫–೮೬ ರಲ್ಲಿ ೨೦೨.೬೩ ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ, ಈ ವರ್ಷ ೧೯೮೬–೮೭ ರಲ್ಲಿ ೨೫೦.೧೦ ಕೋಟಿ ರೂಪಾಯಿಗಳನ್ನು ಒದಗಿಸಿರತಕ್ಕದ್ದು. ಇದು ಕಡಿಮೆ ಆಗಿದೆ ಎಂದು ನಾನು ಕೂಡ ಒಪ್ಪುತ್ತೇನೆ. ಆದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಉತ್ಪನ್ನಗಳು ಮತ್ತು ಇತಿಮಿತಿಗಳು ಏನಿವೆ ಅದನ್ನು ಅನುಸರಿಸಿಕೊಂಡು ಕೊಟ್ಟಿದ್ದಾರೆ. ಉಳಿದ ಕಾಮಗಾರಿಗಳನ್ನು ನೋಡಿದಾಗ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಗಿದೆ. ಶಾಲಾ ಕೊಠಡಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಿಸಬೇಕಾಗಿದೆ. ಈ ಕೊರತೆ ನನ್ನ ಮನಸ್ಸಿನಲ್ಲಿದೆ, ಮಾನ್ಯ ಮುಖ್ಯ ಮಂತ್ರಿಗಳ ಮನಸ್ಸಿನಲ್ಲಿದೆ. ಕರ್ನಾಟಕ ರಾಜ್ಯದ ಜನತೆಗೆ ಈ ಕೊಠಡಿಗಳ ಅವಶ್ಯಕತೆಯ ಬಗ್ಗೆ ಗೊತ್ತಿದೆ. ೨೫೦ ಕೋಟಿ ರೂಪಾಯಿಗಳನ್ನು ಈ ವರ್ಷ ಪ್ರಾಥಮಿಕ ಶಿಕ್ಷಣಕ್ಕೆ ಕೊಟ್ಟಿರುವುದು ಕಡಿಮೆಯೇನಲ್ಲ. ೧೪೦ ರಿಂದ ೨೫೦ ಕೋಟಿ ರೂಪಾಯಿ ಗಳನ್ನು ಈ ಶಿಕ್ಷಣಕ್ಕಾಗಿ ಒದಗಿಸಿದ್ದಾರೆ, ಈ ವರ್ಷ ೨೫೦ ಕೋಟಿ ರೂಪಾಯಿಗಳನ್ನು ಏನು ಒದಗಿಸಿ ದ್ದಾರೆ, ಇದಕ್ಕಾಗಿ ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಅಭಿನಂದಿಸುತ್ತೇನೆ. ಹಣವೇನೋ ಕಡಿಮೆಯಾಗಿದೆ. ಇನ್ನೂ ಹೆಚ್ಚಿನ ರೀತಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಆದರೂ ಇಷ್ಟು ಹಣ ಕೊಟ್ಟಿರುವುದಕ್ಕಾಗಿ ಮಾನ್ಯ ಮುಖ್ಯ ಮಂತ್ರಿಯವರನ್ನು ಮತ್ತೊಮ್ಮೆ ಅಭಿನಂದಿಸಿ, ಮಾನ್ಯ ಅಧ್ಯಕ್ಷರು ತಲೆ ಅಲ್ಲಾಡಿಸುತ್ತಿದ್ದಾರೆ. ಅಂದರೆ ನಾನು ಮಾತನಾಡಿದ್ದು ಸಾಕು ಎಂದು ಅದರ ಅರ್ಥವೆಂದು ನಾನು ತಿಳಿದುಕೊಂಡು, ಅವರು ಗಂಟೆ ಹೊಡೆಯುವುದಕ್ಕೆ ಅವಕಾಶ ಕೊಡದೆ ನನ್ನ ಮಾತನ್ನು ಮುಗಿಸುವುದಕ್ಕೆ ಇಚ್ಛೆಪಡುತ್ತೇನೆ. ೧೯೮೬–೮೭ನೇ ಸಾಲಿನ ಪ್ರಾಥಮಿಕ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಇಲಾಖೆಯ ಬೇಡಿಕೆಗಳು ಏನಿವೆ, ಇದಕ್ಕೆ ಮಂಜೂರಾತಿ ಕೊಡಬೇಕೆಂದು ಪ್ರಾರ್ಥಿಸಿ ಎಲ್ಲರಿಗೂ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಒಂದೇ ಒಂದು ಪ್ರಶ್ನೆಯನ್ನು ನಾನು ಕೇಳುತ್ತೇನೆ. ನಿನ್ನೆ ನಾನು ಕಡ್ಡಾಯ ಶಿಕ್ಷಣದ ಬಗ್ಗೆ ಒಂದು ಮಾತನ್ನು ಆಡಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನೇ ಕೊಟ್ಟಿಲ್ಲ. ಈ ಪ್ರಾಥಮಿಕ ಶಿಕ್ಷಣವನ್ನು ಈಗ ಹೇಗೆ ನಡೆಸಿಕೊಂಡು ಹೋಗುತ್ತಿದ್ದೀರಿ, ಹಿಂದೆ ಕೂಡ ಇದನ್ನು ನಡೆಸಿಕೊಂಡು ಹೋಗುತ್ತಿದ್ದರು. ಇದೇನೂ ಹೊಸದಾಗಿ ಮಾಡಿರತಕ್ಕದ್ದಲ್ಲ. ನಾನು ನಿನ್ನೆ ಹೇಳಿದ್ದು ಏನೆಂದರೆ, ರಾಜ್ಯಾಂಗದತ್ತವಾಗಿ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕು ಏನಿದೆ, ೧೪ ವರ್ಷಗಳ ವರೆಗೆ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ವ್ಯವಸ್ಥೆಯನ್ನು ನೀವು ಮಾಡಿಕೊಡ ಬೇಕಾಗಿತ್ತು. ಅನುಕೂಲ ಇದ್ದವರಿಗೆ ನೀವು ಏನೂ ಮಾಡಬೇಕಾಗಿಲ್ಲ. ಆದರೆ ಬಡವರು ಯಾರು ಇದ್ದಾರೆ, ಕೂಲಿಕೆಲಸ ಮಾಡಿ ಜೀವನ ಮಾಡತಕ್ಕಂಥವರು, ಸಣ್ಣ ಸಣ್ಣ ವ್ಯವಹಾರ ಮಾಡಿಕೊಂಡಿರುತ್ತಾರೆ, ಇಂತಹ ಜನರಿಗೆ ಕಡ್ಡಾಯವಾಗಿ ನರ್ಸರಿ, ಪ್ರೈಮರಿ ಶಾಲೆಗಳಲ್ಲಿ ಊಟ ವಸತಿ ಸೌಕರ್ಯ ಕೊಟ್ಟು ಶಿಕ್ಷಣ ಕೊಡಬೇಕೆಂದು ನಾನು ನಿನ್ನೆ ದಿವಸ ನನ್ನ ಭಾಷಣದಲ್ಲಿ ಹೇಳಿದ್ದೆ. ಇದರ ಬಗ್ಗೆ ಒಂದು ಮಾತನ್ನೂ ಕೂಡ ಮಾನ್ಯ ಮಂತ್ರಿಗಳು ಹೇಳಿಲ್ಲ. ದಯವಿಟ್ಟು ಉತ್ತರ ಕೊಡಿ.

ಶ್ರೀ ಎಚ್. ಜಿ. ಗೋವಿಂದೇಗೌಡ.— ಮಾನ್ಯ ಅಧ್ಯಕ್ಷರೇ, ಬಡತನದಲ್ಲಿ ಬೇಯತಕ್ಕಂಥ ಜನರ ಜೀವನ ಪರಿಸ್ಥಿತಿ ನನಗೆ ಗೊತ್ತು. ನಾನು ಕೂಡ ಅದೇ ರೀತಿ ಜೀವನ ನಡೆಸಿಕೊಂಡು ಬಂದಂಥವನು. ಹಳ್ಳಿಗಳಲ್ಲಿ ಕೆಲಸ ಮಾಡತಕ್ಕಂಥ ಜನರು, ಕಷ್ಟಪಟ್ಟು ಜೀವನ ಮಾಡತಕ್ಕಂಥ ಬಡಕಾರ್ಮಿಕರು ಕಡ್ಡಾಯವಾಗಿ ಶಿಕ್ಷಣ ಕೊಡಬೇಕು, ಅವರು ಶಾಲೆಗೆ ಕಡ್ಡಾಯವಾಗಿ ಬರಬೇಕು ಎಂದರೆ ನಾವು ಶಿಕ್ಷೆ ಯನ್ನೂ ಕೊಡಬೇಕಾಗುತ್ತದೆ, ಇದನ್ನು ಅನುಷ್ಠಾನಕ್ಕೆ ತರುವುದರಲ್ಲಿ ನಾವು ಹಿಂದೇಟು ಹಾಕು

ವವರಲ್ಲ. ಆದರೆ ಕಾನೂನು ಪ್ರಕಾರ ಶಾಲೆಗೆ ಬರಲೇಬೇಕು ಎಂದು ಹೇಳುವುದಕ್ಕೆ ಬದಲು, ಸಾಧ್ಯವಾದಷ್ಟು ಅವರ ಮನಸ್ಸು ಒಲಿಸಿ ಶಿಕ್ಷಣವನ್ನು ಕೊಡುವ ಹಾಗೆ ಇರಬೇಕು, ಇದರಿಂದ ಅವರ ಮನಸ್ಸಿಗೆ ನೋವಾಗುವುದಿಲ್ಲ. ೧೪ ವರ್ಷದವರೆಗೆ ಕಡ್ಡಾಯವಾಗಿ ಶಿಕ್ಷಣ ಕೊಟ್ಟು ಈ ಸಾಕ್ಷರತೆಯನ್ನು ಮಾಡುತ್ತೇವೆ ಎಂದು ೧೯೫೦ ರಿಂದ ೬೦ರ ಅವಧಿಯಲ್ಲೇ ಹೇಳಲಾಗಿತ್ತು. ಇದೇನೂ ಹೊಸದಲ್ಲ. ಈಗ ಪಠ್ಯಪುಸ್ತಕ, ಬಟ್ಟೆ ಮತ್ತಿತರ ಉಪಕರಣಗಳನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ. ಕಡ್ಡಾಯವಾಗಿ ಕಾನೂನು ಮಾಡಿ ಅವರನ್ನು ಒತ್ತಾಯ ಪೂರ್ವಕವಾಗಿ ಬರುವ ಹಾಗೆ ಮಾಡುವ ಬದಲು ಅವರ ಮನಸ್ಸು ಒಲಿಸಿ ವಿದ್ಯಾವಂತರನ್ನಾಗಿ ಮಾಡುವುದು ಸೂಕ್ತವೆಂದು ನೀವೂ ಕೂಡ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಮಂತ್ರಿಗಳು ಬಹಳ ಚೆನ್ನಾಗಿ ಮಾತನಾಡುತ್ತಾರೆ. ಅವರು ಇಲ್ಲಿ ಹರಿಕತೆ ಮಾಡುವುದು ಬೇಡ. ಮಕ್ಕಳ ಮನಸ್ಸು ಒಲಿಸುವುದು, ಒಪ್ಪಿಸುವುದನ್ನು ನಾನು ಕೇಳಿದ್ದೆನಾ ? ನಾನು ಕೇಳಿದ್ದು ಏನೆಂದರೆ, ಕಡ್ಡಾಯವಾಗಿ ಅವರಿಗೆ ಶಿಕ್ಷಣ ಕೊಡುವ ಬಗ್ಗೆ. ಕಡ್ಡಾಯವಾಗಿ ಶಿಕ್ಷಣ ಜಾರಿಮಾಡಿ ನಾನು ಆವಾಗ ಶಹಭಾಸ್‌ಗಿರಿ ಕೊಡುತ್ತೇನೆ. ಅದುಬಿಟ್ಟು ಸುಮ್ಮನೆ ಹರಿಕತೆ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಚ್. ಜಿ. ಗೋವಿಂದೇಗೌಡ.— ಈ ಕಡ್ಡಾಯ ಶಿಕ್ಷಣ ಈ ವರ್ಷ ಜಾರಿಗೆ ತಂದಿರತಕ್ಕದ್ದಲ್ಲ. ಬಹಳ ವರ್ಷದಿಂದಲೂ ಇದು ಇದೆ. ಮಾನ್ಯ ಸದಸ್ಯರು ನಾನು ಹೇಳಿದ್ದು ಹರಿಕತೆ ಎಂದು ಹೇಳುತ್ತಿದ್ದಾರೆ. ಮಾನ್ಯ ಬಸವಲಿಂಗಪ್ಪನವರ ಬಾಯಿಂದ ಇಂತಹ ಮಾತು ಬರುತ್ತದೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಅವರು ಹಿಂದೆ ಮಂತ್ರಿಯಾಗಿದ್ದವರು, ಇಂಥವರ ಬಾಯಿಂದ ಈ ಮಾತು ಬರಬಾರದಾಗಿತ್ತು.

ಶ್ರೀ ಬಿ. ಬಸವಲಿಂಗಪ್ಪ.— ಹರಿಕತೆ ಮಾಡಬೇಡಿ, ಮಂತ್ರಿಯಾಗಿ ಕೆಲಸಮಾಡಿ ಎಂದು ನಾನು ಹೇಳಿದ್ದು.

ಶ್ರೀ ಎಚ್. ಜಿ. ಗೋವಿಂದೇಗೌಡ.— ಮಂತ್ರಿಯಾಗಿ ನಾನು ಜವಾಬ್ದಾರಿಯುತ ಸ್ಥಾನದಲ್ಲಿದ್ದೇನೆ. ಹರಿಕತೆ ಪ್ರಶ್ನೆಗೆ ಉತ್ತರ ಕೊಡತಕ್ಕಂಥ ಪ್ರಮೇಯ ನನಗೆ ಇಲ್ಲ.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೇ, ಮೇಲ್ಮನೆಯಲ್ಲಿ ಹನ್ನೆರಡೂ ಕಾಲು ಗಂಟೆಗೆ ನನ್ನ ಪ್ರಶ್ನೋತ್ತರ ಇದೆ. ಅಲ್ಲಿಗೆ ಹೋಗುವುದಕ್ಕೆ ತಾವು ಅಪ್ಪಣೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ ಬಸವಲಿಂಗಪ್ಪ.— ಇವತ್ತು ಮಾನ್ಯ ಮಂತ್ರಿಗಳ ಬೇಡಿಕೆ ಇದೆ.

ಅಧ್ಯಕ್ಷರು.— ಉತ್ತರ ಮುಗಿದಿದೆ. ಅದು ಕೂಡ ಮಹತ್ವದ ಸಭೆ. ಅವರು ಅಲ್ಲಿಗೆ ಹೋಗಲಿ.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೇ, ಮೈಸೂರು ನಗರದಲ್ಲಿ ೪೦–೫೦ ವರ್ಷಗಳಿಂದಲೂ ಕೆಲವು ಖಾಸಗಿ ವಿದ್ಯಾಸಂಸ್ಥೆಗಳು ಕೆಲಸ ಮಾಡುತ್ತಿದ್ದು, ಒಳ್ಳೆ ಹೆಸರನ್ನೂ ಕೂಡ ಪಡೆದಿವೆ. ಹಿಂದೆ ೧:೪೦ ಪ್ರಮಾಣದಲ್ಲಿ ಶಿಕ್ಷಕ, ಶಿಕ್ಷಕಿಯರನ್ನು ನೇಮಕ ಮಾಡಿಕೊಂಡಿದ್ದರು. ಈಗ ಸರ್ಕಾರ ೧:೫೦ ಪ್ರಮಾಣದಲ್ಲಿ ಮಾಡಿ ಯಾರು ಅಲ್ಲಿ ಶಿಕ್ಷಕ, ಶಿಕ್ಷಕಿಯರು ಇದ್ದಾರೆ. ಅವರ ಸಂಬಳ ಹಿಡಿದು ಹಿಂದಿನ ಬಾಕಿಯನ್ನು ಕೊಡಬೇಕು ಎಂದು ಆದೇಶವನ್ನು ಹೊರಡಿಸಿದ್ದಾರೆ. ಇದನ್ನು ಮುಂಚಿದ್ದಂತೆಯೇ ೧:೪೦ ರಂತೆ ಇರುವ ಹಾಗೆ ಮಾಡಬೇಕು, ಮತ್ತು ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಜಿ. ಗೋವಿಂದೇಗೌಡ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದರ ಬಗ್ಗೆ ಮೊನ್ನೆದಿವಸ ನನಗೆ ಪತ್ರ ಬರೆದು ತಿಳಿಸಿದ್ದಾರೆ. ನಾನು ಅಧಿಕಾರಿಗಳಿಗೆ ನೋಟ್ ಹಾಕಿ ಎಂದು ಹೇಳಿದ್ದೇನೆ. ವಿಷಯ ತಿಳಿದುಕೊಂಡು ಮುಂದೆ ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ, ಅರ್ಬನ್ ಏರಿಯಾ ಮತ್ತು ಇತರ ಕಡೆಗಳಲ್ಲಿ ಹತ್ತಿಪ್ಪತ್ತು ವರ್ಷಗಳಿಂದ ಕೆಲವು ಪಟ್ಟಭದ್ರ ಶಿಕ್ಷರು ಇದ್ದಾರೆ. ಅವರನ್ನು ವರ್ಗಮಾಡಲು ಆಗದಂಥ ಪರಿಸ್ಥಿತಿ ಉಂಟಾಗಿದೆ ಎಂದು ಹೇಳಿದ್ದಾರೆ. ಅಂತಹವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಂಡು ವರ್ಗ ಮಾಡಬೇಕೆಂದು ಆಲೋಚನೆ ಮಾಡಿ

ದ್ದೇವೆ ಎಂದು ಹೇಳಿದ್ದಾರೆ. ಯಾವ ಶಾಸಕರೂ ಕೂಡ ಅಡ್ಡಿಪಡಿಸಬಾರದು ಎಂದು ಹೇಳಿದ್ದಾರೆ. ಯಾವ ಕಾಲಕ್ಕೂ ನಾವು ಅಡ್ಡಿಪಡಿಸುವುದಿಲ್ಲ, ಇಂತಹವರನ್ನು ವರ್ಗ ಮಾಡಿದರೆ ಆ ಶಾಲೆಗಳು ಉಳಿಯುತ್ತವೆ, ಊರೂ ಕೂಡ ಉಳಿಯುತ್ತದೆ ಮತ್ತು ಮಕ್ಕಳು ಕೂಡ ಉಳಿಯುತ್ತವೆ ಎಂದು ನಾನು ಹೇಳುತ್ತೇನೆ.

ಮತ್ತೆ ಉರ್ದು ಶಾಲೆಗಳಲ್ಲಿ ಕನ್ನಡವನ್ನು ಹೇಳಿಕೊಡುವ ಉಪಾಧ್ಯಾಯರುಗಳು ಇಲ್ಲ. ಈ ಮಕ್ಕಳು ಕನ್ನಡ ಕಲಿಯುವುದಿಲ್ಲವೆಂದು ಹೇಳುತ್ತೀರಿ, ಆದರೆ ಉಪಾಧ್ಯಾಯರುಗಳನ್ನು ಮಾತ್ರ ನೇಮಕ ಮಾಡುತ್ತಿಲ್ಲ. ಈಗಲಾದರೂ ಎಲ್ಲ ಉರ್ದು ಶಾಲೆಗಳಿಗೆ ಕನ್ನಡ ಉಪಾಧ್ಯಾಯರುಗಳನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ.—ಮಾನ್ಯ ಸದಸ್ಯರು ಬಹಳ ಉಪಯುಕ್ತವಾದ ಸಲಹೆ ಕೊಟ್ಟಿದ್ದಾರೆ. ಪ್ರತಿಯೊಂದು ಉರ್ದು ಶಾಲೆಗೂ ಕನ್ನಡ ಉಪಾಧ್ಯಾಯರನ್ನು ನೇಮಕ ಮಾಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್. ಕೆ. ಕಾಂತ.—ಕಟ್ಟಡಗಳಿಗೆ ಈ ಸಲ ೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ನಮ್ಮ ಗುಲ್ಬರ್ಗ ನಗರದಲ್ಲಿರುವ ಪ್ರಾಥಮಿಕ ಶಾಲೆಗಳ ಪೈಕಿ ಅರ್ಧದಷ್ಟು ಶಾಲೆಗಳು ಖಾಸಗಿ ಮನೆಗಳಲ್ಲಿ ನಡೆಯುತ್ತಿವೆ. ಇವುಗಳ ಪೈಕಿ ಅನೇಕ ಕಟ್ಟಡಗಳು ಈಗ ಬಿದ್ದುಹೋಗಿವೆ. ಆದರೆ ಹೊಸ ಕಟ್ಟಡಗಳನ್ನು ಕಟ್ಟಲು ಹಣವನ್ನು ಕೊಟ್ಟಿಲ್ಲ. ಈಗಲಾದರೂ ಇದಕ್ಕೆ ಹಣ ಒದಗಿಸಬೇಕು ಮತ್ತು ಕನ್ನಡೇತರ ಶಾಲೆಗಳಲ್ಲಿ ಮತ್ತು ಏಡೆಡ್ ಶಾಲೆಗಳಲ್ಲಿ ಕನ್ನಡ ಭಾಷೆ ಹೇಳಿಕೊಡಲು ಉಪಾಧ್ಯಾಯರನ್ನು ನೇಮಕ ಮಾಡಿಲ್ಲ. ಉರ್ದು ಶಾಲೆಗಳಿಗೆ ಜಾಗ್ರತೆ ಕನ್ನಡ ಟೀಚರ್‌ಗಳನ್ನು ನೇಮಕ ಮಾಡುತ್ತೀರಾ ?

ಶ್ರೀ ಎಚ್. ಜಿ. ಗೋವಿಂದೇಗೌಡ.—ಈ ಬಗ್ಗೆ ವಿವರಗಳನ್ನು ತರಿಸಿಕೊಂಡು ನೇಮಕ ಮಾಡುತ್ತೇವೆ.

ಶ್ರೀ ಎಸ್. ಪ್ರಭಾಕರ್ ರಾಣೆ.—ಮಾನ್ಯ ಸಚಿವರು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡುವುದಾಗಿ ಹೇಳಿದ್ದಾರೆ. ಈ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟರೆ ಅಂದರೆ ಶಾರೀರಿಕ ಶಿಕ್ಷಣಕ್ಕೆ ಮತ್ತು ಚಿತ್ರಕಲೆ ವಿಷಯಗಳ ಬಗ್ಗೆ ಅಭ್ಯಾಸ ಮಾಡಲು ಪ್ರೋತ್ಸಾಹ ಕೊಟ್ಟರೆ ಸರ್ವಾಂಗೀಣ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಆದ್ದರಿಂದ ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರೆಂಬುದನ್ನು ತಿಳಿಸಬೇಕು. ಮತ್ತೆ ಗಡಿ ಭಾಗಗಳಲ್ಲಿರುವ ಶಾಲೆಗಳಿಗೆ ಮರಾಠಿ ಶಿಕ್ಷಕರನ್ನು ನೇಮಕ ಮಾಡದ ಕಾರಣ ಅವು ಮುಚ್ಚಿಹೋಗಿವೆ. ಆದ್ದರಿಂದ ಅಲ್ಲಿಗೆ ಮರಾಠಿ ಶಿಕ್ಷಕರನ್ನು ನೇಮಕ ಮಾಡಲು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಜಿ. ಗೋವಿಂದೇಗೌಡ.—ಈಗ ೭ನೇ ತರಗತಿವರೆಗೆ ಇರುವಂತಹ ಶಾಲೆಗಳಿಗೆ ಒಬ್ಬರು ಡ್ರಿಲ್ ಟೀಚರನ್ನು ನೇಮಕ ಮಾಡುವ ವ್ಯವಸ್ಥೆ ಮಾಡಿದ್ದೇವೆ. ಈ ಹುದ್ದೆಗಳು ಖಾಲಿ ಇರುವ ಕಡೆಗಳಲ್ಲಿ ಭರ್ತಿ ಮಾಡಲು ಡಿ. ಎಲ್. ಆರ್. ಸಿ. ಮೂಲಕ ಡ್ರಿಲ್ ಉಪಾಧ್ಯಾಯರನ್ನು ಆಯ್ಕೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ರಾಮರೆಡ್ಡಿ.—ಈ ಉಪಾಧ್ಯಾಯರ ವಸತಿ ಸಮಸ್ಯೆಯನ್ನು ಹೋಗಲಾಡಿಸಲು ತಾಲ್ಲೂಕ್ ಮಟ್ಟದಲ್ಲಿ ಹೌಸಿಂಗ್ ಕಾರ್ಪೋರೇಷನ್ ರಚಿಸಬೇಕೆಂದು ನಾನು ಸಲಹೆ ಮಾಡಿದ್ದೆ. ಈಗ ಟೀಚರ್ಸ್ ವೆಲ್‌ಫೇರ್ ಫಂಡ್ ಎಂದು ಮಾಡಿದ್ದಾರೆ. ಅದರಲ್ಲಿ ೧೯ ಲಕ್ಷ ರೂಪಾಯಿಗಳಷ್ಟು ಹಣ ಇದೆ. ಆದ್ದರಿಂದ ಅದಕ್ಕೆ ಸ್ವಲ್ಪ ಗ್ರಾಂಟ್ ಸೇರಿಸಿ ತಾಲ್ಲೂಕ್ ಮಟ್ಟದಲ್ಲಿ ಹೌಸಿಂಗ್ ಕಾರ್ಪೋರೇಷನ್ ಎಂದು ರಚಿಸಿ, ಅದರ ಮೂಲಕ ಮನೆಗಳನ್ನು ಕಟ್ಟಿಸಿಕೊಡುತ್ತೀರಾ ? ಮತ್ತೆ ಕಳೆದ ವರ್ಷ ಡಿ.ಎಲ್.ಆರ್.ಸಿ. ಯಲ್ಲಿ ಕೆಲಸ ಮಾಡಿದವರಿಗೆ ಟಿ.ಎ ಮತ್ತು ಡಿ.ಎ. ಇನ್ನೂ ಕೊಟ್ಟಿಲ್ಲ. ಅದನ್ನು ಜಾಗ್ರತೆ ಕೊಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ. ಇವರು ಯಾವ ಯಾವ ಮೀಟಿಂಗ್‌ಗಳಿಗೆ ಹಾಜರಾಗಿದ್ದರು ಎಂಬ ಬಗ್ಗೆ ವಿವರಗಳನ್ನು ಆ ಕಮಿಟಿಯ ಅಧ್ಯಕ್ಷರಾದ ಡಿ.ಡಿ.ಪಿ.ಐ. ಅವರಿಗೆ ಕೊಟ್ಟರೆ ಅವರು ಟಿ.ಎ. ಮತ್ತು ಡಿ.ಎ ಯನ್ನು ಕೊಡುತ್ತಾರೆ.

ಶ್ರೀ, ಬಿ. ರಾಯರೆಡ್ಡಿ.—ನನ್ನ ಇನ್ನೊಂದು ಪ್ರಶ್ನೆಗೆ ಉತ್ತರ ಕೊಡಲಿಲ್ಲ ?

ಅಧ್ಯಕ್ಷರು.—ನೀವು ರೂಲಿಂಗ್ ಪಾರ್ಟಿಯಲ್ಲಿದ್ದೀರಿ. ಆದ್ದರಿಂದ ನೀವು ಆ ಬಗ್ಗೆ ಮಂತ್ರಿಗಳ ಹತ್ತಿರವೇ ಹೋಗಿ ಮಾತನಾಡಿ.

ಶ್ರೀ ಬಿ. ರಾಯರೆಡ್ಡಿ.—ಇದರಲ್ಲಿ ಪಾರ್ಟಿ ವಿಚಾರ ಎಲ್ಲಿ ಬರುತ್ತದೆ ?

ಶ್ರೀ ಎಂ.ಎಸ್. ಕೃಷ್ಣನ್ —ಈಗ ೪ ಸಾವಿರ ಜನ ಕಾಂಟ್ರಾಕ್ಟ್ ಟೀಚರ್ಸ್ ಪ್ರೈಮರಿ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇಂತಹವರನ್ನು ಈ ತಿಂಗಳ ೩೦ ರಂದು ಕೆಲಸದಿಂದ ತೆಗೆಯದೆ ಮುಂದುವರೆಸಬೇಕು. ಈ ಹಿಂದೆ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿದ್ದವರನ್ನು ಕೆಲಸದಿಂದ ತಗೆಯದೆ ಅವರನ್ನೆಲ್ಲಾ ಖಾಯಂ ಮಾಡಿದ್ದಕ್ಕೆ ನಾವು ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೇವೆ. ಆದ್ದರಿಂದ ಕಾಂಟ್ರಾಕ್ಟ್ ಟೀಚರ್ಸ್‌ನ್ನು ಸಹ ಕೆಲಸದಲ್ಲಿ ಮುಂದುವರೆಸಬೇಕು. ಇಲ್ಲದಿದ್ದರೆ ಅವರೆಲ್ಲ ಬೀದಿಪಾಲಾಗುತ್ತಾರೆ. ಡಿ.ಎಲ್.ಆರ್.ಸಿ. ಮೂಲಕ ರೋಸ್ಟರ್ ಸಿಸ್ಟಮ್ ಮೂಲಕ ಇವರನ್ನು ಖಾಯಂ ಮಾಡಬೇಕಾಗುತ್ತದೆಂದು ತಾವು ಹೇಳಬಹುದು. ಆದರೆ ಕಾಂಟ್ರಾಕ್ಟ್ ಸಿಸ್ಟಮ್‌ನಲ್ಲಿ ಕೆಲಸ ಮಾಡಿದವರ ಬಗ್ಗೆ ಸುಪ್ರೀಂ ಕೋರ್ಟಿನ ತೀರ್ಮಾನ ಏನು ಬಂದಿದೆ, ಅದನ್ನು ತಾವು ನೋಡಿ, ಅದರ ಒಂದು ಆಧಾರದ ಮೇಲೆ ಇವರನ್ನು ಖಾಯಂ ಮಾಡುತ್ತೀರಾ ? ಇದಕ್ಕೆ ನನಗೆ ತಮ್ಮಿಂದ ಸ್ಪಷ್ಟವಾದ ಉತ್ತರ ಬೇಕು ?

ಶ್ರೀ ಎಚ್. ಜಿ. ಗೋವಿಂದೇಗೌಡ —ಮಾನ್ಯ ಸದಸ್ಯರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳ ಬಗ್ಗೆ ಹೇಳಿದ್ದಾರೆ. ನಮಗೆ ಇವರ ಸೇವೆ ಅಗತ್ಯವಾಗಿದ್ದ ಕಾರಣದಿಂದ ಇವರನ್ನು ಹಂಗಾಮಿಯಾಗಿ ಕೆಲಸಕ್ಕೆ ತೆಗೆದುಕೊಂಡಿದ್ದೇವೆ. ಆದ್ದರಿಂದ ಶಾಲಾ ಅವಧಿ ಮುಗಿದ ನಂತರ ಇವರನ್ನು ರಿಲೀವ್ ಮಾಡಬೇಕಾಗುತ್ತದೆ. ಇವರುಗಳು ಡಿ.ಎಲ್.ಆರ್.ಸಿ.ಗೆ ಅಪ್ಲೈ ಮಾಡಿದ್ದರೆ, ಅಲ್ಲಿ ಇವರ ಒಂದು ವಿದ್ಯಾರ್ಹತೆ ಮತ್ತು ಅನುಭವಗಳನ್ನು ಗಣನೆಗೆ ತೆಗೆದುಕೊಂಡು ರೋಸ್ಟರ್ ಸಿಸ್ಟಮ್‌ನಲ್ಲಿ ಇವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇವರನ್ನು ೩೦ನೇ ತಾರೀಖು ರಿಲೀವ್ ಮಾಡಿದರೆ ನ್ಯಾಯ ದೊರಕಿಸಿಕೊಟ್ಟಂತೆ ಆಗುವುದಿಲ್ಲ. ಮಾನ್ಯ ಮಂತ್ರಿಗಳು ಸುಪ್ರೀಂ ಕೋರ್ಟಿನ ತೀರ್ಮಾನದ ಬಗ್ಗೆ ಸಹ ಏನೂ ಹೇಳಲಿಲ್ಲ.

ಅಧ್ಯಕ್ಷರು. ತಾವು ಅವರ ಬಳಿ ಹೋಗಿ ಚರ್ಚೆ ಮಾಡಿ.

ಶ್ರೀ ಎಂ. ಎಲ್. ಉಸ್ತಾದ್.—ನಾನು ನೆನ್ನೆ ಮಾತನಾಡುವಾಗ ಈ ರಾಜ್ಯದಲ್ಲಿ ಉರ್ದು, ತಮಿಳು, ತೆಲುಗು, ಮರಾಠಿ ಕಲಿಯುವಂತಹ ಮಕ್ಕಳಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದ್ದೆ. ಮುಖ್ಯವಾಗಿ ನಮ್ಮ ಬಿಜಾಪುರ ಜಿಲ್ಲೆ ಬಗ್ಗೆ ಹೇಳಿದ್ದೆ. ಆದರೆ ಮಾನ್ಯ ಮಂತ್ರಿಗಳು ಆ ಬಗ್ಗೆ ಏನೂ ಹೇಳಲಿಲ್ಲ. ಕಳೆದ ೫ ವರ್ಷಗಳಿಂದ ಅಲ್ಲಿನ ಶಾಲೆಗಳಿಗೆ ಉರ್ದು ಟೀಚರ್ಸ್‌ನ್ನು ನೇಮಕ ಮಾಡಿಲ್ಲ. ಅಲ್ಲಿನ ಡಿ.ಡಿ.ಪಿ.ಐ. ಅವರು ೯೧ ಜನ ಉರ್ದು ಟೀಚರ್ಸ್‌ನ್ನು ಭರ್ತಿ ಮಾಡುತ್ತೇವೆಂದು ಹೇಳಿದ್ದರು. ಆದರೆ ಅವರು ಅದರಂತೆ ನೇಮಕ ಮಾಡದ ಕಾರಣ ನಿರುದ್ಯೋಗಿ ಅಭ್ಯರ್ಥಿಗಳು ಅನ್ನ ಸತ್ಯಾಗ್ರಹ ಮಾಡಿದರು. ಆಗ ನಾವು ಡಿ.ಡಿ.ಪಿ.ಐ. ಅವರ ಜೊತೆ ಎರಡು ದಿವಸಗಳ ಕಾಲ ಚರ್ಚೆ ಮಾಡಿದೆವು. ಇದಾದ ನಂತರ ೧೭೨ ಜನ ಉರ್ದು ಟೀಚರ್ಸ್‌ನ್ನು ಭರ್ತಿ ಮಾಡಬೇಕಾಗಿದೆ ಎಂದು ಸರ್ಕಾರಕ್ಕೆ ಬರೆದು ತಿಳಿಸಿದರು. ಅವರು ಸರ್ಕಾರಕ್ಕೆ ಶಿಫಾರಸ್ ಮಾಡಿದ್ದರೂ ಸಹ ಸರ್ಕಾರ ಇನ್ನೂ ಕ್ರಮ ತೆಗೆದುಕೊಂಡಿಲ್ಲ.

ಮತ್ತೆ ಇಡೀ ರಾಜ್ಯದಲ್ಲಿ ೪ ಲಕ್ಷ ಹುಡುಗರಿಗೆ ಇನ್ನೂ ಪುಸ್ತಕಗಳು ಸಿಕ್ಕಿಲ್ಲ. ಬೆಳಗಾಂ ಜಿಲ್ಲೆಯಲ್ಲಿ ಮೂರು ಮತ್ತು ನಾಲ್ಕನೇ ತರಗತಿಯಲ್ಲಿ ಕಲಿಯುತ್ತಿರುವ ಮರಾಠಿ ವಿದ್ಯಾರ್ಥಿಗಳಿಗೆ ಇನ್ನೂ ಪುಸ್ತಕಗಳು ಸಿಕ್ಕಿಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಚ್. ಜಿ. ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ, ನೆನ್ನೆ ದಿವಸ ಮಾನ್ಯ ಸದಸ್ಯರು ಮಾತನಾಡುವಾಗ ಬಿಜಾಪುರ ಜಿಲ್ಲೆಯಲ್ಲಿ ೫೦ ವಿದ್ಯಾರ್ಥಿಗಳಿಗೆ ಒಬ್ಬರಂತೆ ಉಪಾಧ್ಯಾಯರುಗಳು ಇಲ್ಲ

ಎಂದು ಹೇಳಿದ್ದರು. ಆದ್ದರಿಂದ ಈ ಬಗ್ಗೆ ವಿವರಣೆ ಕೊಡಲು ನನಗೆ ತಾವು ಎರಡು ನಿಮಿಷಗಳ ಕಾಲಾವಕಾಶ ಕೊಡಬೇಕು. ಬಿಜಾಪುರ ಜಿಲ್ಲೆಯಲ್ಲಿ ೧೨ ತಾಲ್ಲೂಕ್‌ಗಳಿವೆ. ಬಾದಾಮಿ ತಾಲ್ಲೂಕ್‌ನಲ್ಲಿ ೮೭೦ ಮಕ್ಕಳು ಉರ್ದು ಭಾಷೆ ಕಲಿಯುತ್ತಿವೆ. ಈ ಮಕ್ಕಳಿಗೆ ಕಲಿಸಲು ೩೭ ಜನ ಉರ್ದು ಉಪಾಧ್ಯಾಯರನ್ನು ಮತ್ತು ೧೯ ಜನ ಕನ್ನಡ ಉಪಾಧ್ಯಾಯರನ್ನು ನೇಮಕ ಮಾಡಲಾಗಿದೆ. ಈಗ ಅಲ್ಲಿ ಉರ್ದು ಉಪಾಧ್ಯಾಯರುಗಳ ಪೈಕಿ ಎರಡು ಹುದ್ದೆಗಳು ಮಾತ್ರ ಖಾಲಿ ಇವೆ. ಮತ್ತೆ ಬಾಗೇವಾಡಿಯಲ್ಲಿ ೫೦ ಜನ ವಿದ್ಯಾರ್ಥಿಗಳಿಗೆ ಒಬ್ಬರಂತೆ ಉಪಾಧ್ಯಾಯರು ಇಲ್ಲ ಎಂದು ಹೇಳಿದ್ದಾರೆ. ಇಲ್ಲಿ ಸಹ ೮೭೦ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ೧೯ ಜನ ಉಪಾಧ್ಯಾಯರುಗಳು ಇದ್ದಾರೆ. ಇದರ ಲೆಕ್ಕದಲ್ಲಿ ನೋಡಿದರೆ ೭೪ ಜನ ವಿದ್ಯಾರ್ಥಿಗಳಿಗೆ ಒಬ್ಬರು ಉಪಾಧ್ಯಾಯರಾಗುತ್ತಾರೆ.

ಬಾಗೇವಾಡಿಯಲ್ಲಿ ೧೯೭೪ ಮಕ್ಕಳು ಉರ್ದುವನ್ನು ಕಲಿಯುತ್ತಿದ್ದಾರೆ. ೪೮ ಜನ ಉರ್ದು ಉಪಾಧ್ಯಾಯರುಗಳು ಇದ್ದಾರೆ. ಅಂದರೆ ೧:೪೧ ರೇಶಿಯೋ ಬರುತ್ತದೆ. ಬಾಗಲಕೋಟೆಯಲ್ಲಿ ೧೪೩೭ ಮಕ್ಕಳು ಉರ್ದುವನ್ನು ಕಲಿಯುತ್ತಿದ್ದಾರೆ. ಇದಕ್ಕೆ ೬೭ ಉರ್ದು ಉಪಾಧ್ಯಾಯರುಗಳು ಇದ್ದಾರೆ ಅಂದರೆ ೧:೨೩ ರೇಶಿಯೋ ಇಲ್ಲಿ ಬರುತ್ತದೆ. ಬೀಳಗಿಯಲ್ಲಿ ೩೨೯ ಮಕ್ಕಳು ಓದುತ್ತಿದ್ದಾರೆ. ಇಲ್ಲಿ ೧೨ ಉರ್ದು ಉಪಾಧ್ಯಾಯರುಗಳು ಇದ್ದಾರೆ. ಇಲ್ಲಿಯೂ ಸಹ ೧:೨೭ ರೇಶಿಯೋ ಬರುತ್ತದೆ. ಬಿಜಾಪುರದಲ್ಲಿ ಒಟ್ಟು ೧೯೭೧ ಮಕ್ಕಳು ಉರ್ದುವನ್ನು ಕಲಿಯುತ್ತಿದ್ದಾರೆ, ಇಲ್ಲಿ ೫೯ ಉರ್ದು ಉಪಾಧ್ಯಾಯರುಗಳು ಇದ್ದಾರೆ ಇಲ್ಲಿ ೧:೫೦ ರೇಶಿಯೋ ಬರುತ್ತದೆ.

ಶ್ರೀ ಎಂ. ಎಲ್. ಉಸ್ತಾದ್.—ಅಧ್ಯಕ್ಷರೇ ಇನ್ನೊಂದು ಕ್ಲಾರಿಫಿಕೇಶನ್ ಇದೆ.

ಅಧ್ಯಕ್ಷರು.—ಇಲ್ಲ, ಸಾಧ್ಯವಿಲ್ಲ, ಇಲ್ಲಿ ವಿವರಣೆ ಕೇಳುವುದಕ್ಕೆ ಮಾತ್ರ ಅವಕಾಶ ಇದೆ. ಇದು ಕ್ವೆಶ್ಚನ್ ಅವರ್ ಅಲ್ಲ.

ಶ್ರೀ ಎಂ. ಎಲ್. ಉಸ್ತಾದ್.—ಅಧ್ಯಕ್ಷರೇ,

ಅಧ್ಯಕ್ಷರು.—ಇಲ್ಲ. ಇಲ್ಲ ಬಾಬುರೆಡ್ಡಿಯವರೇ ತಾವು ಕೇಳಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಘಟಪ್ರಭಾ ನೀರಾವರಿ ಪ್ರದೇಶದಲ್ಲಿ ಅಲ್ಲಲ್ಲಿ ಜನರು ವಸತಿ ಮಾಡಿಕೊಂಡಿದ್ದಾರೆ. ಇವರ ಮಕ್ಕಳುಗಳು ಶಾಲೆಗೆ ಹೋಗಬೇಕಾದರೆ ೨-೩ ಕಿಲೋಮೀಟರ್‌ಗಳಷ್ಟು ದೂರ ಹೋಗಬೇಕಾಗಿರುತ್ತದೆ. ಈ ವಿಷಯವನ್ನು ಹೋದ ವರ್ಷವೂ ಸಹ ತಮ್ಮ ಗಮನಕ್ಕೆ ತಂದಿದ್ದೆ. ಮತ್ತು ನನ್ನ ಕ್ಷೇತ್ರದಲ್ಲಿ ಹಲವಾರು ಶಾಲಾ ಕಟ್ಟಡಗಳು ಇಲ್ಲದೇ ಶಾಲಾ ಮಕ್ಕಳು ಹೊರಗಡೆ ಕುಳಿತುಕೊಂಡು ಪಾಠ ಕೇಳುವ ಪರಿಸ್ಥಿತಿ ಇದೆ. ಶಾಲಾ ಕೋಣೆಗಳೇ ಇಲ್ಲ. ಅದೂ ಅಲ್ಲದೇ ಅನೇಕ ಶಾಲಾ ಕಟ್ಟಡಗಳು ಪೂರ್ಣವಾಗದೇ ಅಪೂರ್ಣ ಸ್ಥಿತಿಯಲ್ಲೇ ಇವೆ. ಈ ಶಾಲಾ ಕಟ್ಟಡಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಶಾಸಕರು ಘಟಪ್ರಭಾ ನೀರಾವರಿ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಜನರ ಮಕ್ಕಳು ೨-೩ ಕಿಲೋಮೀಟರ್ ದೂರದಲ್ಲಿರುವ ಶಾಲೆಗಳಿಗೆ ಹೋಗುವಂತಹ ಪರಿಸ್ಥಿತಿ ಇದೆ ಎಂದು ಹೇಳಿದ್ದಾರೆ. ೨೫ ಮಕ್ಕಳು ಎಲ್ಲಿ ಶಾಲೆಗೆ ಬರುತ್ತಾರೋ ಅಂತಹ ಕಡೆ ಶಾಲೆಗಳನ್ನು ನಾವು ತೆರೆಯುತ್ತೇವೆ. ಮಾನ್ಯ ಸದಸ್ಯರು ಎಲ್ಲಿ ೨೫ ಮಕ್ಕಳು ಬರುತ್ತಾರೋ ಅಂತಹ ಜಾಗಗಳನ್ನು ನಮಗೆ ತೋರಿಸಿದರೆ ನಾನು ಎ.ಇ.ಒ ಗಳಿಗೆ ಹೇಳಿ ಶಾಲೆಗಳನ್ನು ತೆಗೆಯುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಡಿ. ವಿ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ ಎಲ್ಲಾ ಜಿಲ್ಲೆಗಳಲ್ಲಿ ಒಂದೊಂದು ವಿದ್ಯಾ ಪೀಠವನ್ನು ತೆಗೆಯುವುದಕ್ಕೆ ಕ್ರಮ ಹಾಕಿಕೊಳ್ಳಲಾಗಿತ್ತು. ಅದೇ ಪ್ರಕಾರ ೧೭ ವಿದ್ಯಾ ಪೀಠಗಳನ್ನು ಮಾಡಲಾಗಿದೆ ಇನ್ನು ಎರಡು ವಿದ್ಯಾ ಪೀಠಗಳನ್ನು ಮಾಡಬೇಕಾಗಿತ್ತು. ನಮ್ಮ ಜಿಲ್ಲೆಯಲ್ಲಿ ಒಂದು ವಿದ್ಯಾ ಪೀಠವನ್ನು ಮಾಡ ಬೇಕಾಗಿತ್ತು ಆದರೆ ಅದನ್ನು ಮದ್ದೂರಿಗೆ ಟ್ರಾನ್ಸ್‌ಫರ್ ಮಾಡಲಾಗಿದೆಯೆಂದು ತಿಳಿದು ಬಂದಿದೆ. ಮತ್ತು ಇನ್ನೊಂದು ವಿಷಯ ಏನೆಂದರೆ, ಈ ವಿದ್ಯಾ ಪೀಠಗಳಲ್ಲಿ ಕೌನ್ಸಿಲ್ ಇರುತ್ತದೆ. ಈ ಕೌನ್ಸಿಲ್‌ಗಳಿಗೆ ಚುನಾವಣೆಗಳನ್ನು ನಡೆಸಿಲ್ಲ. ಈ ಕೌನ್ಸಿಲ್‌ಗಳನ್ನು ಡಿವಿಜನಲ್ ಕಮೀಷನರ್‌ರವರು

ವಹಿಸಿಕೊಂಡು ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಆದಷ್ಟು ಬೇಗ ಈ ಕೌನ್ಸಿಲ್‌ಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೇ ಮೊದಲು ಲಿಟ್ರೆಸಿಯುವರ ಪರ್‌ಸೆಂಟೇಜ್ ೩೮.೨ ಇತ್ತು. ಈಗ ಅದು ೩೬ಕ್ಕೆ ಇಳಿದಿದೆ. ಇದಕ್ಕೆ ಕಾರಣ ಏನು ಎಂಬುದನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಹೆಚ್. ಜಿ ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ. ಮಾನ್ಯ ಸ್ನೇಹಿತರು ಅಡಲ್ಟ್ ಎಜುಕೇಷನ್ ವಿಭಾಗದಲ್ಲಿ ಬಹಳ ಸೇವೆಯನ್ನು ಸಲ್ಲಿಸಿ ಪೂರ್ತಿಯಾದ ಅನುಭವವನ್ನು ಪಡೆದಿದ್ದಾರೆ. ಇನ್ನು ಮುಂದೆ ನೇರವಾಗಿ ಇವರ ಸಂಪರ್ಕವನ್ನು ಇಟ್ಟುಕೊಂಡು ಇವರು ಪಡೆದಿರುವ ಅನುಭವದ ಬಗ್ಗೆ ನಾನೂ ತಿಳಿದುಕೊಂಡು ಸರಿಯಾಗಿ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನಿಸುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈಗಾಗಲೇ ೧೪ ವಿದ್ಯಾ ಪೀಠಗಳು ಇವೆ. ಕಳೆದ ಸಾರಿ ಇನ್ನೂ ೨ ವಿದ್ಯಾ ಪೀಠಗಳನ್ನು ಪ್ರಾರಂಭಿಸುವುದಕ್ಕೆ ಮಂಜೂರು ಮಾಡಿದ್ದೇವೆ, ಆದರೆ ಅವುಗಳು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಸಾಧ್ಯವಾದಷ್ಟು ಜಾಗ್ರತೆ ಇವುಗಳನ್ನು ಮಾಡುವುದಕ್ಕೆ ಪ್ರಯತ್ನಪಡುತ್ತೇನೆ. ಮತ್ತು ಕೌನ್ಸಿಲ್‌ಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಕೌನ್ಸಿಲ್‌ಗಳಲ್ಲಿ ಮೊದಲು ಖಾಸಗಿ ಅಧ್ಯಕ್ಷರು ಇದ್ದರು. ಈಗ ಡಿವಿಷನಲ್ ಕಮಿಷನರ್‌ರವರೇ ಅವುಗಳನ್ನು ನೋಡಿಕೊಳ್ಳುತ್ತಿದ್ದಾರೆ. ಅದೂ ಅಲ್ಲದೇ ಈ ವಿಷಯ ಕೋರ್ಟಿನಲ್ಲಿ ಇದೆ. ಕೋರ್ಟಿನಲ್ಲಿ ಇರುವುದರಿಂದ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ತಡವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ತಾಲ್ಲೂಕಿನಿಂದ, ತಾಲ್ಲೂಕಿಗೆ ಉಪಾಧ್ಯಾಯರುಗಳನ್ನು ವರ್ಗ ಮಾಡುವುದರಿಂದ, ಉಪಾಧ್ಯಾಯರುಗಳು ಈಗಾಗಲೇ ಭಯ ಬಿದ್ದಿದ್ದಾರೆ. ಯಾವ ಉಪಾಧ್ಯಾಯರ ಮೇಲೆ ದೂರುಗಳು ಇವೆಯೋ ಅಂತಹವರನ್ನು ವರ್ಗ ಮಾಡಿ. ಬೇರೆಯವರನ್ನು ಸುಮ್ಮನೆ ವರ್ಗ ಮಾಡಬೇಡಿ. ನಮ್ಮ ಕೋಲಾರ ಜಿಲ್ಲೆಯಲ್ಲಿ ಸರಾಸರಿ ೮೦ ಮಕ್ಕಳಿಗೆ ಒಬ್ಬ ಟೀಚರ್ ಇದ್ದಾರೆ. ಈ ರೇಶಿಯೋ ವಿಪರೀತವಾಗಿದೆ. ಇದನ್ನು ತಪ್ಪಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇನ್ನೊಂದು ವಿಷಯವನ್ನು ಮಾನ್ಯ ಸಚಿವರು ಹೇಳಿದ್ದಾರೆ. ಎಲ್ಲಿ ೨೫ ಜನ ವಿದ್ಯಾರ್ಥಿಗಳು ಬರುತ್ತಾರೋ ಅಂತಹ ಕಡೆ ಶಾಲೆಗಳನ್ನು ತೆರೆಯುತ್ತೇವೆಂದು. ನಮ್ಮ ಕೋಲಾರ ಜಿಲ್ಲೆಯ ಸುಮಾರು ೯೪ ಹಳ್ಳಿಗಳಲ್ಲಿ ಶಾಲೆಗಳೇ ಇರುವುದಿಲ್ಲವಾದ್ದರಿಂದ ಶಾಲೆಗಳನ್ನು ತೆರೆಯಬೇಕು ಹಾಗು ನನ್ನ ಸಹ ಸದಸ್ಯರಾದ ಮಾನ್ಯ ಕೃಷ್ಣನ್‌ರವರು ಕೇಳಿದ ಪ್ರಶ್ನೆಯನ್ನೇ ಇನ್ನೊಂದು ಸಾರಿ ಕೇಳುತ್ತೇನೆ, ದಯವಿಟ್ಟು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳನ್ನು ಪರ್ಮನೆಂಟ್ ಆಗಿ ನೇಮಕ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ, ೫ ವರ್ಷಗಳು ಒಂದೇ ಕಡೆ ಇರುವ ಉಪಾಧ್ಯಾಯರುಗಳನ್ನು ಚೇಂಜ್ ಮಾಡಬೇಕೆಂದು ತಮಗೂ ಗೊತ್ತಿದೆ. ಅವರ ಬಗ್ಗೆ ಯಾರ ಶಿಫಾರಸ್ಸಿಗೂ ಗಮನ ಕೊಡದೇ ನ್ಯಾಯ ರೀತಿಯಲ್ಲಿ ನಾವು ವರ್ಗಾವಣೆ ಮಾಡುತ್ತೇವೆ. ಇನ್ನು ೨೫ ಮಕ್ಕಳು ಎಲ್ಲಿ ಬರುತ್ತಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೋ ಅಂತಹ ಕಡೆ ಶಾಲೆಗಳನ್ನು ನಾವು ತೆರೆಯುತ್ತೇವೆ. ಕಾಂಟ್ರಾಕ್ಟ್ ಮೇಲಿರುವ ಟೀಚರ್ಸ್‌ಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ನಾನು ಆಗಲೇ ಮಾನ್ಯ ಕೃಷ್ಣನ್‌ರವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ.

ಅಧ್ಯಕ್ಷರು.—ಈಗ ಬೇಡಿಕೆ ಮೇಲಿನ ಚರ್ಚೆ ಮುಕ್ತಾಯವಾಯಿತು. ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ. "೩೧ನೇ ಮಾರ್ಚಿ ೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಡಿಮ್ಯಾಂಡ್ ನಂ. ೯, ೧೦, ೧೪ ಮತ್ತು ೧೩ನೇ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುತ್ತದೆ"

(ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು)

ಅಧ್ಯಕ್ಷರ ಅಪ್ಪಣೆ ಮೇರೆ ಮಂಜೂರು ಮಾಡಿದ ಬೇಡಿಕೆಗಳನ್ನು ಲಗತ್ತಿಸಲಾಗಿದೆ.

ಅಭಿಯಾಚನೆ ಕ್ರಮಾಂಕ ೯—ಲೇಖನ ಸಾಮಗ್ರಿ ಮತ್ತು ಮುದ್ರಣ ಇತ್ಯಾದಿ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೬,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೦—ಉಚ್ಚ ಶಿಕ್ಷಣ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೬,೧೬,೯೯,೦೦೦ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೫,೨೦,೦೦೦ ರೂ. ಗಳಿಗಿಂತ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೪—ಸೆಕೆಂಡರಿ ಶಿಕ್ಷಣ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧೩,೮೮,೦೩,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೨೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೩—ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ

೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೫೦,೯೩,೨೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೧೧,೧೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು.

ಅಧ್ಯಕ್ಷರು.—ಆರ್. ರೋಶನ್ ಬೇಗ್‌ರವರ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳೋಣ. ಮುಂದಿನ ಪ್ರಶ್ನೆ, ವಿನಯಕುಮಾರ್ ಸೊರಕೆಯವರದ್ದು.

ಪುತ್ತೂರು ತಾಲ್ಲೂಕಿನಲ್ಲಿ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯವನ್ನು ನೀಡುವ ಬಗ್ಗೆ.

೧೨೩೭. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುತ್ತೂರು ತಾಲ್ಲೂಕಿನಲ್ಲಿನಲ್ಲಿ ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯವನ್ನು ಎಷ್ಟು ಜನ ಸ್ತ್ರೀಯರಿಗೆ ನೀಡಲಾಗಿದೆ ?

ಆ) ಇದಕ್ಕೆ ಖರ್ಚಾದ ಹಣವೆಷ್ಟು ?

ಇ) ಇದರ ಬಗ್ಗೆ ಹೆಚ್ಚಿನ ತಿಳುವಳಿಕೆ ಜನ ಸಾಮಾನ್ಯರಿಗೆ ತಿಳಿಯುವಂತೆ ಪ್ರಚಾರ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಲು ಸರ್ಕಾರದವರು ಉದ್ದೇಶಿಸಿರುವರೆ ?